UNIVERSAL LIBRARY
OU_198194
UNIVERSAL LIBRARY

OSMANIA UNIVERSITY LIBRARY

Call No. K 83.1 / B93S Accession No. K 19

Author

Title

This book should be returned on or before the date last marked below.

# ಪರಿವಿಡಿ


೧ ಸಿಡಿಲು

೨ ರಾಜಾರಾಣಿ

೩ ಸೌಭಾಗ್ಯವತಿ

೪ ವಿಧವೆಯ ತುಳಸೀಪೂಜೆ

೫ ಕನಸು

೬ ಬಹಿಷ್ಕಾರ

೭ ಕಲಿತ ಹೆಂಡತಿ

೮ ಕಾರ್ಯಸಾಧು

೯ ರಾವಬಹದ್ದೂರ

೧೦ ಬಡತನದಬಾಳು

೧೧ ನೌಕರಿ

೧೨ ಹೊಲೆಯರ ಹುಡಿಗಿ

# ಮುನ್ನುಡಿ

ಈ ಮೊದಲು ನಾನು "ಸಮಾಜೋನ್ನತೀ ಪುಷ್ಪಮಾಲೆ" ಯ ಮುಖಾಂತರ ಒಂದಾಣೆ ಬೆಲೆಯ ಚಿಕ್ಕ ಚಿಕ್ಕ ಕತೆಗಳನ್ನು ಪ್ರಕಟಿಸುತ್ತ ಬಂದಿದ್ದೇನೆ. ಅವೆಲ್ಲವುಗಳಿಗೂ ಕನ್ನಡಿಗರಾದ ತಾವೆಲ್ಲರೂ ಆದರದಿಂದ ಪ್ರೋತ್ಸಾಹನವನ್ನೀಯುತ್ತ ಬಂದಿರುವಿರಿ ದೊಡ್ಡಪುಸ್ತಕಗಳನ್ನು ಪ್ರಕಟಿಸುವ ಹೊಣೆಗಾರಿಕೆಯನ್ನು ಮಾತ್ರ ನಾನು ಹೊರಲಿಲ್ಲ. ಆದರೂ ನನ್ನ ಮಿತ್ರರಾದ ಶ್ರೀಮಾನ್ **ಕೇಳಕರರು** ಕಳೆದ ವರುಷ ನನ್ನ ಸಮ್ಮತಿಯನ್ನು ಪಡೆದು ನಾನು ಬರೆದ ಕೆಲವು ಕಥೆಗಳ ಸಂಗ್ರಹವನ್ನು "**ಹೃದಯಮಂಥನ**" ವೆಂಬ ಹೆಸರಿನಲ್ಲಿ ಪ್ರಸಿದ್ಧಪಡಿಸಿದರು. ಅವುಗಳಾದರೂ ಬೇಗನೆ ಮಾರಿ ಹೋಗಿ ಈ ನನ್ನ ಬೇರೊಂದು ಚಿಕ್ಕ ಕಥಾಸಂಗ್ರಹವನ್ನು ಬೆಳಕಿಗೆ ತರಲು ಧೈರ್ಯವನ್ನು ತಂದುಕೊಟ್ಟವು. ಇದರಲ್ಲಿ ಹನ್ನೆರಡು ಬೇರೆ ಬೇರೆ ಕತೆಗಳಿದ್ದು "ಹೃದಯಮಂಥನ" ದಲ್ಲಿಯ ಒಂದೇ ಒಂದು ಕತೆಯನ್ನು "**ದೇಶದ್ರೋಹಿ**"ಯೆಂಬ ಹೆಸರನ್ನು ಬದಲುಮಾಡಿ "**ರಾವಬಹದ್ದೂರ**"ಯೆಂಬ ಹೆಸರಿನಲ್ಲಿ ಕೊಡಲಾಗಿದೆ. ಉಳಿದ ಕತೆಗಳನ್ನು ಈ ಮೊದಲು ಬೇರೆ ಬೇರೆ ಪತ್ರಿಕೆಗಳಲ್ಲಿ ಕೊಟ್ಟಿದ್ದೆನು. ಈಗ ಅವೆಲ್ಲವನ್ನೂ ಒಂದೆಡೆಗೆ ಸೇರಿಸಿ ತಮ್ಮೆದುರಿನಲ್ಲಿ ಇಡುತ್ತಲಿದ್ದೇನೆ. ಅವು ತಮಗೆ ರುಚಿಸಿದಲ್ಲಿ ತುಸು ದಿವಸದಲ್ಲಿಯೇ ಬೇರೊಂದು ಕಥಾ ಸಂಗ್ರಹವನ್ನು ತೆಗೆಯಬೇಕೆಂಬ ಅಪೇಕ್ಷೆ ಇದೆ

ಈ "**ಸಿಡಿಲು**" ಪ್ರತಿಯೊಬ್ಬರ ಮನೆಯಲ್ಲಿಯೂ ಬೀಳಲಿ! ಇದು ಅಪಾಯವನ್ನುಂಟುಮಾಡುವ ಸಿಡಿಲಲ್ಲ. (ಸ್ವಾರ್ಥಕ್ಕೆ ಬಲಿ ಬಿದ್ದು) ಸಮಾಜದಲ್ಲಿ ನಡೆಯುತ್ತಿರುವ ಘೋರ ಅನ್ಯಾಯಗಳನ್ನು ಧ್ವಂಸಮಾಡುವದಕ್ಕೆ ಇದು ಅಲ್ಪಮಟ್ಟಿಗಾದರೂ ನೆರವಾಗಬಹುದೆಂಬ ಕಲ್ಪನೆಯನ್ನಿಟ್ಟುಕೊಂಡು ಚಿತ್ರಿಸಿದ ಕಥಾಸಂಗ್ರಹ ಈ ಸಂಗ್ರಹದಲ್ಲಿದ್ದ ಹನ್ನೆರಡು ಕತೆಗಳೂ ಅಸ್ವಾಭಾವಿಕವಾದವುಗಳಿರದೆ ಸಮಾಜದಲ್ಲಿ ನಡೆದ ಸತ್ಯ ಚಿತ್ರಗಳೇ ಆಗಿವೆಯೆಂಬುದು ಎಲ್ಲರಿಗೂ ಸಹಜವಾಗಿ ತಿಳಿಯುವ ಮಾತಾಗಿದೆಯೆಂದು ನಾನಂತೂ ನಂಬಿದ್ದೇನೆ.

ಧಾರವಾಡ
ತಾ|| ೧-೮-೩೭

ಸಮಾಜ ಸೇವಾಭಿಲಾಷಿ:
**ಬಾಲಚಂದ್ರ ಘಾಣೇಕರ**

# ಸಿಡಿಲು

ಲೀಲಾವತಿಯು ಒಬ್ಬ ಬಡ ಬ್ರಾಹ್ಮಣನ ಮಗಳು. ಅವಳ ತಂದೆಯು ಒಂದು ಅಂಗಡಿಯಲ್ಲಿ ಕಾರಕೂನನಾಗಿದ್ದನು. ಆತನಿಗೆ ಪಿತ್ರಾರ್ಜಿತ ಆಸ್ತಿಯೆಂದರೆ ಒಂದೇ ಒಂದು ಸಣ್ಣ ಬಾಗಾಯತ್ತು. ಹಾಗೂ ಹೀಗೂ ಮನೆಯ ವೆಚ್ಚ ಸಾಗುತ್ತಿದ್ದಿತು. ಬೇರೆಯವರಂತೆ ಚಹಾಫಲಾಹಾರದ ರೂಢಿಯು ಇವರಲ್ಲಿರಲಿಲ್ಲವಾದ್ದರಿಂದ ಬಂದಷ್ಟರಲ್ಲಿಯೇ ವೆಚ್ಚವು ನೀಗುತ್ತಿದ್ದಿತು. ಮನೆಯಲ್ಲಿ ಲೀಲಾವತಿಯ ತಾಯಿ, ತಂದೆ, ತಂಗಿ, ಇಬ್ಬರು ತಮ್ಮಂದಿರು ಹೀಗೆ ಒಟ್ಟಾರೆ ಆರು ಜನರು. ಲೀಲಾವತಿಯೇ ಹಿರಿಯಮಗಳಾದ್ದರಿಂದ ಎಲ್ಲರೂ ತುಂಬಾ ಪ್ರೀತಿಸುತ್ತಿದ್ದರು.

ಲೀಲಾವತಿಯೆಂದರೆ ಸೌಂದರ್ಯದ ಸಾಗರದಲ್ಲಿಂದ ಆಯ್ದು ತೆಗೆದ ದಿವ್ಯ ರತ್ನ! ರೂಪದಲ್ಲಿ ಅವಳನ್ನು ಹಿಮ್ಮೆಟ್ಟಿಸುವವರು ದೇವಲೋಕದಲ್ಲಿ ಕೂಡ ಯಾರೂ ದೊರೆಯರು. ದುಂಡಾದ ಶೋಭಿಸುವ ಮುಖ. ಕಳೆಯುಳ್ಳ ಕಣ್ಣುಗಳು. ಕರ್ರಗಿನ ಉದ್ದವಾದ ಕೇಶರಾಶಿ ಹವಳದಂತೆ ಒಪ್ಪುವ ತುಟಿಗಳು ಅದಮ್ಯಕಾಂತಿಯನ್ನು ಬೆಳಗುವ ಮೃದುವಾದ ಕಪೋಲಗಳು. ಊರ ಜನರೆಲ್ಲರಿಗೂ ಅವಳನ್ನು ಕಂಡರೆ ತುಂಬಾ ಸಂತೋಷ. ವಯಸ್ಸಿಗೆ ಬಂದ ಹಾಗೆಲ್ಲ ಅವಳ ಸೌಂದರ್ಯವು ಹುಣ್ಣಿಮೆಯ ಚಂದ್ರನಂತೆ ಹೆಚ್ಚಿಚ್ಚಾಗ ತೊಡಗಿತ್ತು.

ಹುಡಿಗೆ ದೊಡ್ಡವಳಾದಳೆಂದು ಅವಳ ತಂದೆ ವರವನ್ನು ಶೋಧಿಸತೊಡಗಿದನು ಹಿಂದೂ ಸಮಾಜದಲ್ಲಿ ಬೆಳೆದ ಹುಡಿಗೆಯನ್ನು ಕುಮಾರಿಯಾಗಿಡುವದು ಸಾಮಾಜಿಕ ಅಪರಾಧವೆಂದು ಭಾವನೆ. ಅದಕ್ಕಾಗಿ ತಾಯಿತಂದೆಗಳೆಲ್ಲರಿಗೂ ಲಗ್ನದ ಬಗ್ಗೆ ದೊಡ್ಡದೊಂದು ಚಿಂತೆಯೇ ಆಗಿದ್ದಿತು. ಲೀಲಾವತಿಗೆ ಮಾತ್ರ ಚಿಂತೆಯ ಕಾರಣ ತಿಳಿಯದು. "ಲಗ್ನವಾಗದಿದ್ದರೇನಾಯಿತು? ಇಷ್ಟೇಕೆ ಚಿಂತಿಸುವಿರಿ" ಎಂದು ಅನ್ನವಳು.

ಅವಳ ತಂದೆಯ ದೂರದೂರದ ನೆಂಟರೂ ಮಿತ್ರರೂ ಸಹ ಇವಳಿಗಾಗಿ ವರ ತಪಾಸು ನಡೆಸಿದ್ದರು. ಎಲ್ಲಿಯೂ ಹೊಂದಿಕೆಯಾಗಲಿಲ್ಲ. ಕೆಲವು ವರಗಳು ಬಂದಾಗ ಪುರೋಹಿತರು ವಿಘ್ನ ತಂದುಬಿಟ್ಟರು. ಹುಡಿಗಿಗೆ ಮಂಗಳ ವಿದೆ. ಮಂಗಳಗ್ರಹದ ವರನೇ ಬೇಕು. ಇಲ್ಲವಾದರೆ ಅಪಶಕುನವಾಗಿ ಬಿಡುವದು, ಎಂದು ಘೋಷಿಸಿದರು. ಪುರೋಹಿತರ ಮುಂದೆ ಯಾರ ಆಟ ನಡೆಯುವದು?

ಮೋಹನನು ಅದೇ ಊರ ಶಾನಭೋಗರ ಮಗನು. ಕನ್ನಡ ನಾಲ್ಕ ನೆಯ ಇಯತ್ತೆಯವರೆಗೂ ಒಂದೇ ಶಾಲೆಯಲ್ಲಿ ಲೀಲಾವತಿಯೊಡನೆ ಕೂಡಿ ಕಲಿತಿದ್ದನು. ಆದರೆ ಪಾಪ! ಸ್ತ್ರೀಯರಿಗೆ ಹೆಚ್ಚು ಕಲಿಸಿದರೆ ಕೆಟ್ಟು ಹೋದಾ ರೆಂಬ ತಿಳುವಳಿಕೆಯೊಂದಿದೆಯಲ್ಲ! ಅಲ್ಲಿಗೆ ಲೀಲಾವತಿಗೆ ಶಿಕ್ಷಣದ ಕೊನೆಯಾಗಿ ದ್ದಿತು. ಮೋಹನ-ಲೀಲಾವತಿಯರ ಮನೆಯವರಿಗೆ ಎಂದಿನಿಂದಲೂ ಋಣಾ ನುಬಂಧ! ಬಳಿಕೆ ಬಹಳ. ಹೀಗಾಗಿ ಇಬ್ಬರೂ ಒಳ್ಳೇ ಕಕ್ಕುಲತೆಯಿಂದ ಬಾಲ್ಯವನ್ನು ಕಳೆದಿದ್ದರು. ಮೋಹನನು ಇಂಗ್ಲೀಷ ಕಲಿಯಲಿಕ್ಕೆಂದು ಪಟ್ಟಣಕ್ಕೆ ಹೋದ ಲಾಗಾಯ್ತು ಅವರ ಬಾಲಲೀಲಾಕಾಂಡವು ಸಮಾಪ್ತಿ ಯಾಯಿತೆನ್ನಬಹುದು.

ಬೇಸಿಗೆಯ ಬಿಡುವಾದ್ದರಿಂದ ಮೋಹನನು ಊರಲ್ಲಿಯೇ ಇದ್ದ. ಒಂದು ದಿನ ಅವನು ಗಾಳೀ ತಿನ್ನಲಿಕ್ಕೆಂದು ತೋಟದ ಕಡೆಗೆ ನಡೆದಿದ್ದ. ರೂಢಿಯಂತೆ ದಾರಿಯಲ್ಲಿಯ ದುರ್ಗಾದೇವಿಯ ಮುಂದೆ ಶಿರಬಾಗಿದನು. ತಕ್ಷಣವೇ ಅದೊಂದು ಮೋಹದ ಮಿಂಚು ಅವನನ್ನು ಮುಂದೆ ಹೋಗಗೊಡಲಿಲ್ಲ. ಬೆಪ್ಪನಂತೆ ನಿಂತುಬಿಟ್ಟನು. 'ದೇವಿ ಸುಮಂಗಲೇ ಸರ್ವಮಂಗಲೇ ಮೋಹನನೊಡನೆ ನನ್ನ ಮದುವೆಯನ್ನು ಮಾಡುವ ಬುದ್ಧಿಯನ್ನು ತಂದೆತಾಯಿಗಳಿಗೆ ನೀಡು ಆ ಮುದಿಹದ್ದಿನೊಡನೇ ನಾನು ಬಾಳುವೆ ಮಾಡಲಾರೆ' ಎಂದು ಕೋಗಿ ಲೆಯ ಕಂಠದಿಂದ ಮಂಜುಳವಾದ ದೈನ್ಯಬೆರಿತ ಧ್ವನಿಯೊಂದು ಅಲ್ಲಿಂದ ಹೊರಟಿತು.

ಮೋಹನನು ಬೇಕೆಂತಲೆ ಅರಿಯದವರಂತೆ ಮಂದಿರವನ್ನು ಸೇರಿ ಗಂಟೆ ಯನ್ನು ಬಾರಿಸಿದನು. ನಮಸ್ಕಾರದ ಪ್ರಕರಣವನ್ನು ಮುಗಿಸಿದ ಬಳಿಕ,

ಏನು ಲೀಲಾ ಸಂಜೆಯಾಯಿತು. ಒಬ್ಬಳೇ ಬಂದುಬಿಟ್ಟೆಯಲ್ಲ, ಎಂದು ಕೇಳಿದ.

'ಗೆಳತಿಯರು ಮುಂಚೆ ಬಂದು ಹೋದರು. ಮನೆಗೆಲಸ ಮುಗಿಸಿಕೊಂಡು ಬರಲು ತಡವಾಯಿತು.

ಮುಂದೆ ಒಂದು ಗಳಿಗೆ ಇಬ್ಬರೂ ಮೌನವಾಗಿದ್ದರು. ಇಂದಿನ ಅವಳ ರೂಪರಾಶಿಯು ಮೋಹನನನ್ನು ಬಹಳೇ ಹುಚ್ಚನಂತಾಗಿ ಮಾಡಿದ್ದಿತು. ತಾರುಣ್ಯದಿಂದ ಉಕ್ಕೇರುವ ಆ ಮುಖದ ಬೆಡಗು, ಬಳಕುವ ಪುಷ್ಟವಾದ ಆ ಶರೀರ, ಆಕರ್ಷಯುಕ್ತವಾದ ಆ ನೋಟ. ಇವೆಲ್ಲವುಗಳೂ ಅವನನ್ನು ದಂಗು ಬಡಿಸಿದವು. ತಂಗಾಳಿಯ ಸೆಳೆತದಿಂದ ಹಾರಾಡುವ ಅವಳ ಆ ಉಂಗುರು ಗೂದಲಗಳನ್ನು ಸಾವರಿಸುವ ಭಾಗ್ಯವು ತನಗೆ ದೊರೆಯಬಹುದೋ ಎಂದು ಚಿಂತಿಸುತ್ತಿದ್ದನೊ ಎನ್ನುವಂತೆ ನಟ್ಟದೃಷ್ಟಿಯಿಂದ ಅವಳನ್ನು ನೋಡುತ್ತಿದ್ದನು. ಮನದಲ್ಲಿಯೇ ಅವಳ ಸೌಂದರ್ಯಾಮೃತವನ್ನು ಸೇವಿಸತೊಡಗಿದನು. ಅವಳೂ ಇದೇ ಆನಂದವನ್ನು ಭೋಗಿಸುತ್ತಿದ್ದಳು. ಮಿಂಚಿನಂತೆ ಇಬ್ಬರ ಮುಖದಲ್ಲಿಯೂ ನಗೆಮಲ್ಲಿಗೆ! ಲೀಲಾವತಿಗೆ ಲಜ್ಜೆಯು ತಲೆಬಾಗಿಸಿತು. ಮಾತನಾಡಿಸಬೇಕೆಂದು ಮೋಹನನ ಸಮೀಪಕ್ಕೆ ಬರಬೇಕೆನ್ನುವಷ್ಟರಲ್ಲಿಯೇ ಹೊರಗೆ ಕಾಲು ಸದ್ದು! ಕಾಯಿ ಒಡಿಸಲಿಕ್ಕೆಂದು ನಾಲ್ಕಾರು ಜನರು ಬರಲು ಇಬ್ಬರೂ ತಮ್ಮ ತಮ್ಮ ಮನೆಯ ದಾರಿ ಹಿಡಿದು ಬಿಟ್ಟರು.

ಆದಿನ ಲೀಲಾವತಿಗೆ ಮನೆಗೆ ಬಂದ ಬಳಿಕ ಸಮಾಧಾನವೇ ಇಲ್ಲ. ಮೋಹನನೊಡನೆ ಮದುವೆಯಾದರೆ ಅಪಶಕುನವೆಂದು ಪುರೋಹಿತರು ಬೊಗಳಿಬಿಟ್ಟದ್ದರಂತೆ. ಈ ವರೆಗೆ ಅವಳ ಜಾತಕಕ್ಕೆ ಸರಿಯಾದ ವರನೆಂದರೆ ಒಬ್ಬ ೫೦ ವರುಷದ ಮುದುಕನಿದ್ದನು. ಪುರೋಹಿತರು ಪರಿಶ್ರಮಪೂರ್ವಕವಾಗಿ ಹುಡುಕಿ ತೆಗೆದ ವರವಿದು. ( ಪರಿಶ್ರಮಕ್ಕೆ ತಕ್ಕ ಫಲ (ಲಂಚ) ತುಂಬಾ ಇರಬಹುದಲ್ಲವೇ ? ) ಅವಳಿಗೆ ಈ ಸಂಗತಿ ನೆನಪಾದಾಗೆಲ್ಲ ಮೋಹನನ ಮುಂದೆ ಮದುವೆಯ ಪ್ರಸ್ತಾಪವನ್ನು ತಾನಾಗಿಯೇ ಎತ್ತಕೂಡದೆಂದು ಅನ್ನಿಸುತ್ತಿದ್ದಿತು.

ದೇವಿಯ ಮಂದಿರದಲ್ಲಿ ಮತ್ತೊಂದು ದಿನ ಲೀಲಾವತಿ ಮೋಹನರ ಭೆಟ್ಟಿಯಾಯಿತು. ಲೀಲೆಯು ತನ್ನ ಕರುಣ ಕತೆಯನ್ನೆಲ್ಲ ಹೇಳಿ ಮೋಹನನ ಮನಕರಗಿಸಿದಳು

"ಲೀಲಾ, ಇಷ್ಟರಲ್ಲಿಯೇ ನಿನ್ನ ತಂದೆಗೇನೂ ವರ ಸಿಕ್ಕುವ ಲಕ್ಷಣವಿಲ್ಲ ನೀನು ಏನಾದರೊಂದು ಹೇಳಿ ಆದಷ್ಟು ಮುಂದೆ ತಳ್ಳು. ನಾನೀಗ ಎಂಟ್ಹತ್ತು ದಿನಗಳಲ್ಲಿಯೇ ಮತ್ತೆ ಕಲಿಯಲು ಹೊಗಬೇಕು. ಈ ವರ್ಷ ಪರೀಕ್ಷೆ ಮುಗಿದೊಡನೆ ನಮ್ಮ ತಂದೆಯು ಸಮ್ಮತಿ ಪಡೆದು ನಿನ್ನನ್ನು ವರಿಸಿಯೇ ತೀರುವೆನು," ಮೋಹನನು ವಚನವನ್ನಿತ್ತ. ಇಬ್ಬರೂ ಹಿಗ್ಗಿನಲ್ಲಿದ್ದರು.

ಆ ಬಳಿಕ ಆಗಾಗ್ಗೆ ಇಬ್ಬರ ಮಿಲನವೂ ಆಗುತ್ತಿದ್ದಿತು.

ಒಬ್ಬರ ಮುಂದೊಬ್ಬರು ತಮ್ಮ ಹೃದಯ ವೇದನೆಯನ್ನು ತೋಡಿ ಹೇಳುತ್ತಿದ್ದರು. ಆದರೆ ಸಮಾಜದ ಕ್ರೂರ ದೃಷ್ಟಿಗೆ ಇದೆಂತು ಸಹನವಾಗಬೇಕು? ಲಿಲಾವತಿ ಮೋಹನರು ಭ್ರಷ್ಟಾಚಾರ ನಡಿಸಿದರೆಂದು ಊರತುಂಬ ಹರಡಿ ಹೋಯಿತು. ಶಿಷ್ಟಬ್ರಾಹ್ಮಣರೆಲ್ಲ ಸೇರಿ ಲೀಲಾವತಿಯ ತಂದೆಗೆ ಎಚ್ಚರಿಕೆ ಕೊಟ್ಟರು. "ಅವಳ ಮದುವೆಯನ್ನು ಬೇಗನೆ ಮಾಡದೆ ಹೋದರೆ ನಿಮಗೆ ನಮ್ಮ ಸಮಾಜದಿಂದ ಹೊರಗೆ ತಳ್ಳಲಾಗುವದು" ಎಂದು ಹೇಳಿದರು. ಇದೇ ವಾರದಲ್ಲಿ ಪುರೋಹಿತನು ಶೋಧಿಸಿ ತೆಗೆದ ವೃದ್ಧ ತರುಣನೊಡನೆಯೇ ಮದುವೆಯಾಗುವದೆಂದು ನಿರ್ಣಯವಾಯಿತು.

ದಿನಗಳು ದಾಟುವದೇನು ತಡ? ಇಂದೇ ಮದಿ ಮದುವೆಯ ಮಹೋತ್ಸವ! ವರನು ಬಾಗಿಲಿಗೆ ಬಂದನು. ಅಳಿಯನನ್ನು ಬರಮಾಡಿಕೊಳ್ಳಲು ಎಲ್ಲರೂ ಸಂಭ್ರಮದಿಂದ ಹೊರಗೆಹೋದರು. ವರ ಸತ್ಕಾರದ ಕೆಲಸ ಬೇಗನೆ ಮುಗಿಸಬೇಕಾಗಿತ್ತು. ಯಾಕಂದರೆ ಆಕಾಶವು ಮೋಡಗಳಿಂದ ಮುಸುಕಿ ಮಳೆಯು ಚೆನ್ನ ಬಲವಾಗಿದ್ದಿತು. ಗುಡುಗು ಮಿಂಚುಗಳ ಕೋಲಾಹಲವೆದ್ದಿದ್ದಿತು. ಲೀಲಾವತಿಯು ಮಾತ್ರ ಒಂದು ಚಿಕ್ಕ ಕೋಣೆಯಲ್ಲಿ ಕುಳಿತು, ತನ್ನ ದೈವಲೀಲೆ, ದುರ್ಭಾಗ್ಯ, ಮತ್ತು ಸಮಾಜದ ನಿರಂಕುಶತ್ವವನ್ನು ನೆನೆದು ಧಾರೆ ದಾರೆಯಾಗಿ ಕಣ್ಣೀರು ಸುರಿಸುತ್ತಿದ್ದಳು. ಅಕಸ್ಮಾತ್ತಾಗಿ

ಕಿಡಿಕಿಯಿಂದ ಏನೋ ಬಿದ್ದ ಹಾಗೆ ಸಪ್ಪಳವಾಯಿತು. ಅದೇ ಕಾಲಕ್ಕೆ ಆಕಾಶದಲ್ಲಿ ಖಡ-ಖಡಲ್‌ಯೆಂಬ ಸದ್ದಾಯಿತು. ಬಿದ್ದ ವಸ್ತುವು ಅವಳ ಮುಂಬದಿಯಲ್ಲಿಯೇ ಕಾಣಿಸಿತು. ಒಂದು ಕಲ್ಲು ಅದಕ್ಕೊಂದು ಮಡಿಕೆ ಹಾಕಿದ ಕಾಗದವನ್ನು ಕಟ್ಟಲಾಗಿತ್ತು. ಆಶ್ಚರ್ಯಚಕಿತಳಾಗಿ, ಸರ್ರನೆ ಅದನ್ನು ಉಚ್ಚಿ ನೋಡಿದಳು. ಮೋಹನನ ಪತ್ರ.

ಏನಿದು? ಆಕಾಶದಿಂದ ಬಿದ್ದ ಸಿಡಿಲೋ ಅಥವಾ ನಿಜವಾಗಿಯೂ ಮೋಹನನ ಪತ್ರವೋ?

ಓದ ತೊಡಗಿದಳು.

" ಹೃದಯ ದೇವಿ, ಆಕಸ್ಮಾತ್ತಾಗಿ ನಿನಗೊದಗಿರುವ ಸಂಕಟವನ್ನು ನಾನು ಬಲ್ಲೆನು. ಮಾಡುವದೇನು? ಪ್ರೇಮವು ಕುರುಡಾದದ್ದು ಆದರ ಸಮಾಜವು ನಿರಂಕುಶವುಳ್ಳದು ಪ್ರಕೃತಿಯು ನಮ್ಮಿಬ್ಬರನ್ನು ಕೂಡಿಸಿದ್ದಿತು. ಗುಣಕರ್ಮ ಸ್ವಭಾವಗಳು ಒಂದಾಗಿದ್ದವು. ಆದರೇನು? ಈ ಕಠೋರ ಸಮಾಜವು ಆಶ್ರಯವನ್ನು ಕೊಡಲಿಲ್ಲ! ಉಪಾಯವಿಲ್ಲ. ಇನ್ನು ನೀನು ನನ್ನ ಮೇಲಿನ ಮೋಹವನ್ನು ಬಿಡು. ನಿನ್ನ ಹೃದಯಮಂದಿರದಲ್ಲಿಂದ ನನ್ನನ್ನು ತೆಗೆದು ಹಾಕಿ ಹಿಂದೂ ಸ್ತ್ರೀಯು ಮಾಡಬೇಕಾದ ಪವಿತ್ರ ಕರ್ತವ್ಯ ವನ್ನು ಪಾಲಿಸು. ನಾನಿನ್ನು ಯಾರಿಗೂ ದೊರೆಯೆನು. ಅಂದರೆ ಆತ್ಮಹತ್ಯ ಮಾಡಿಕೊಳ್ಳುವೆನೆಂದು ಮಾತ್ರ ಭಾವಿಸಬೇಡ. ಸಮಾಜಸುಧಾರಣೆಗಾಗಿ ನನ್ನ ದೇಹವನ್ನು ಧಾರೆಯೆರೆಯುವೆನು."

—ಮೋಹನ

" ಇದೀಗ ಬಿದ್ದ ಸಿಡಿಲು ಆಕಾಶದಿಂದ ಬಿದ್ದುದಾದರೆ ಇದು ಸಮಾಜ ರಾಕ್ಷಸನಿಂದ ಎಸೆಯಲ್ಪಟ್ಟ ಸಿಡಿಲು" ಯೆಂದೆನಿಸಿರಬಹುದು ಲೀಲಾವತಿಗೆ.

ಓಲೆಯನ್ನು ಓದಿದೊಡನೆ ಆಕೆಗೆ ಕತ್ತಲು ಕವಿದಂತಾಯ್ತು. ಭೂಕಂಪ ವಾಯಿತು! ವಿಚಾರಕ್ರಾಂತಿಯುಂಟಾಯಿತು " ನಾನು ಈ ನನ್ನ ಕೋಮಲವಾದ ಪವಿತ್ರ ದೇಹವನ್ನು ಒಬ್ಬ ನರಾಧಮನಿಗೆ ಅರ್ಪಿಸಲಾ? ಛೆ....ಮುದಿ ಹದ್ದಿಗೆ....ಮನಸ್ಸಿಗೆ ಬಾರದವನಿಗೆ ಶಕ್ಯವೇ ಇಲ್ಲ " ಎಂದು ಸರ್ರನೆ ಮಹಡಿಗೆ ಹೋದಳು. ಮೆಟ್ಟಲುಗಳು ಸಣ್ಣವಾದ್ದರಿಂದ ಆಶ್ರಯಕ್ಕಾಗಿ ಅಲ್ಲಿ ಒಂದು

ಹಗ್ಗವನ್ನು ಕಟ್ಟಿದ್ದರು. ಮೇಲೆ ಹೋದವಳೇ ಆ ಹಗ್ಗವನ್ನು ಕುತ್ತಿಗೆಗೆ ಬಿಗಿಯಾಗಿ ಕಟ್ಟಿಕೊಂಡು ಆತ್ಮಾರ್ಪಣೆಯನ್ನು ಮಾಡಿದಳು.

ವರಸತ್ಕಾರವನ್ನು ಮುಗಿಸಿಕೊಂಡು ಲೀಲಾವತಿಯನ್ನು ಸಮಾಧಾನ ಪಡಿಸುವದಕ್ಕಾಗಿ ಅವಳ ತಾಯಿ ಅವಳಿದ್ದ ಕೋಣೆಗೆ ಹೋದಳು. ಅಲ್ಲಿ ಅವಳಿರಲಿಲ್ಲ ಮಹಡಿಗೆ ನಡೆದಳು. ವಿಚಿತ್ರವಾದ ದೃಶ್ಯ ಲೀಲಾವತಿಯು ತನ್ನ ಪ್ರಿಯಕರನನ್ನು ಮನದಲ್ಲಿ ಪೂಜಿಸುತ್ತ ಹಗ್ಗದ ಗುಂಟ ತೂಗಾಡುತ್ತಿದ್ದಳು. ಕಣ್ಣು ಗುಡ್ಡೆಗಳು ಬೆಳ್ಳಗಾಗಿದ್ದವು ಅಕರಾಳ ವಿಕರಾಳವಾದ ರೂಪ! ಪಸರಿಸಿದ ಕೂದಲು! ಹೊರಗೆ ತೆಗೆದ ನಾಲಿಗೆ! ಸಮಾಜ ರಾಕ್ಷಸನೊಡನೆ ಹೋರಾಡಿದ ಸಾಕ್ಷಾತ್ ರಾಕ್ಷಸವೇ ಸರಿ. ಯೆಂದು ಎಲ್ಲರಿಗೂ ಭಾಸವಾಗಹತ್ತಿತು. ಆದರೇನು ಗೆಲ್ಲಲಿಲ್ಲ. ಸೋತು ಪ್ರಾಣ ನೀಗಿದ್ದಿತು.

ಬಹಳ ದಿವಸದಿಂದಲೂ ಮೋಹನನ ಪತ್ತೆಯೇ ಯಾರಿಗೂ ಆಗಿರಲಿಲ್ಲ. ಹೆಣ್ಣಿನ ಹುಚ್ಚು ಹಿಡಿದು ದೇಶಾಂತರವಾದನೆಂದು ಕೆಲವು ಕುಹಕರು ಆಡುತ್ತಿದ್ದರು. ಆದರೆ ಮೊನ್ನೆ ತಾನೆ ಧಾರವಾಡ ಪಾಠಶಾಲೆಯ ಬೈಲಲ್ಲಿ ಜನ್ಮ ಕುಂಡಲಿ ಹಾಗು ವಿವಾಹದ ಬಗ್ಗೆ ಕಲ್ಪನೆ' ಎಂಬ ವಿಷಯವಾಗಿ ವ್ಯಾಖ್ಯಾನವಾಯಿತು. ಎಲ್ಲರ ಕಣ್ಣಲ್ಲಿಯೂ ಬಳಬಳ ನೀರು! ಅವನು ಸಮಾಜ ಸುಧಾರಣೆಗಾಗಿ ಪಡುತ್ತಿದ್ದ ಸಾಹಸವನ್ನು ಕಂಡು ಎಲ್ಲರಿಗೂ ಸಂತೋಷವಾಯಿತು ಬರೀ ಸಂತೋಷದಿಂದೇನು ಪ್ರಯೋಜನ? ಕೃತಿಯಲ್ಲಿ ತಂದರೆ ಮೋಹನನು ಪಡುವ ಶ್ರಮದ ಸಾರ್ಥಕ.

— – —

# ರಾಜಾ-ರಾಣಿ!

ಪ್ರಮಿಲಾ,

ನಿನಗೇನೆಂದು ಓಲೆ ಬರೆಯಲಿ? ಯಾವ ಬಣ್ಣದ ಮಸಿಯಿಂದ ಓಲೆ ಬರೆಯಲಿ? ಹೊಳೆಯಿತು. ನಾನು ನಿನಗೆ ಯಾವ ಹಸ್ತದಿಂದ ವಚನವನ್ನಿತ್ತಿದ್ದೆನೋ ಆ ಹಸ್ತವನ್ನೇ ಕುಕ್ಕಿ ಅದರ ನೆತ್ತರವನ್ನು ಹೀರಿ ಅದರಿಂದ ಈ ಓಲೆ ಬರೆಯುವದೇ ಉಚಿತವು. ನೀನು ಮರಾಠಾ ಜಾತಿಯವಳು; ನಾನ ಬ್ರಾಹ್ಮಣ ನಿನ್ನೊಡನೆ ಮದುವೆಯಾಗಲು ಯಾರಪ್ಪನ ಭೀತಿಯೂ ಇಲ್ಲವೆಂದು ಗುಡುಗಿನಂತೆ ನುಡಿದ ವಚನದಲ್ಲಿ ಹುರುಳಿಲ್ಲ ಗಂಡಸರಂತೆ ಮಾತಾಡುವದರಲ್ಲಿ ನನಗಿಂತ ಉತ್ತರಕುಮಾರನು ಸಾವಿರಪಾಲಿಗೆ ಮೇಲು. ನಾನು ತಾರುಣ್ಯದ ಆವೇಶದಲ್ಲಿ ನಿನಗೆ ವಚನವನ್ನಿತ್ತು ನಿನ್ನೊಡನೆ ಸರಸಸಲ್ಲಾಪ ನಡೆಸಿದೆ. ಆದರೆ ನಮ್ಮ ಸಮಾಜವು .. ....? ನಮ್ಮ ಸಮಾಜವು ಸರಸ ಸಲ್ಲಾಪಕ್ಕೆ ಬೇಡೆನ್ನುತ್ತದೆಂದು ಮಾತ್ರ ಭಾವಿಸಿಬೇಡ ಹಾಗಿದ್ದರೆ ಇಷ್ಟೊಂದು ವೇಶ್ಯಾಬಾಜಾರವು ಬೆಳೆಯುತ್ತಿರಲಿಲ್ಲ. ಆ ಅಂಧರಿಗೆ ವೇಶ್ಯಾ ಬಾಜಾರವು ಕಣ್ಣಿಗೆಕಾಣುವುದಿಲ್ಲವಂತೆ! ನಮ್ಮಂಥ ಸುಧಾರಕರು ವಿಧವೆಯನ್ನು ಅಥವಾ ಅನ್ಯಜಾತಿಯುವಳನ್ನು ಧೈರ್ಯವಾಗಿ ವಿವಾಹವಾದರೆ ಮಾತ್ರ ಕಣ್ಣು ಹುಬ್ಬುಗಳು ಮೇಲೆಹೋಗಿ ಮೂಗು ಮುರಿಯತೊಡಗುತ್ತವೆ. "ಶಾಂತಂ ಪಾಪ." ಶಬ್ದದಿಂದ ಕಿವಿಯು ಗಡಚಿಕ್ಕುತ್ತವೆ. ಕಲಿಯುಗವು ಬುಡಮೇಲಾಗಿ ಮಳೆಬೆಳೆಗಳು ನಾಶವಾಗತೊಡಗುತ್ತವೆ. ಒಟ್ಟೇನು ಹೇಳುವದು?—ಬೆಕ್ಕು ಕಣ್ಣುಮುಚ್ಚಿ ಹಾಲು ಕುಡಿಯಲಿ ಅಂದರೆ ನಮಗೇನೂ ಕಾಣುವದಿಲ್ಲವೆಂದು ನಮ್ಮ ಸಮಾಜದ ಗರ್ಜನೆ. ನಿನ್ನಿನ ದಿವಸ ನಮ್ಮ ಸೋದರ ಮಾವನಾಡಿದ ಮಾತು ಕೇಳಿದರೆ ಮೈ 'ಜುಂ' ಎನ್ನುತ್ತದೆ.

ನಿನ್ನನ್ನು ಬೇಕಾದರೆ ಇಟ್ಟುಕೊಳ್ಳಲಡ್ಡಿಯಿಲ್ಲವಂತೆ ಮದುವೆ ಮಾತ್ರ ಆಗಕೂಡದೆಂದು ಅವರು ಹೇಳಿದರು. ಈ ಮಾತು ನಿನಗೆ ತಿಳಿಸದೆ ಇದ್ದು ಕೊನೆಗೆ ವಂಚನೆಮಾಡುವದು ನೀಚತನವಾಗುವದು ಆದುದರಿಂದ ಈಗಲೇ ತಿಳಿಸಿಬಿಡುತ್ತಿದ್ದೇನೆ. ನಾನು ಸಮಾಜ ರಾಕ್ಷಸನಿಗೆ ಬೆದರದೆಹೋದರೆ ಗತ್ಯಂತರವಿಲ್ಲ. ನನ್ನ ಆಸ್ತಿಯು ನನಗೆ ಮರಳಿ ದೊರೆಯುಬೇಬೇಕಾದರೆ ನಾನು ನಿಷ್ಠುರನಾಗಿರಲೇಕಾಗಿದೆ. ಹೆಚ್ಚು ಬರೆಯಲು ಕೈಬಾರದು. ಆಗಿಹೋದ ತಪ್ಪಿಗಾಗಿ ಕ್ಷಮೆಯಿರಲಿ.

ಇತಿ—ರಾಜಾ

ಓಲೆಯನ್ನು ಪೂರೈಸಿ ರಾಜಣ್ಣಾ ತಮ್ಮ ಜವಾನನ ಕೈಯಿಂದ ಪ್ರಮಿಲೆಗೆ ತಲುಪುವಂತೆ ಏರ್ಪಾಟುಮಾಡಿದ.

* * * *

ರಾಜಣ್ಣಾ ನಮ್ಮೂರ ದೇಸಾಯರ ಮನೆತನಕ್ಕೆ ದತ್ತಕ್ಕೆ ಹೋಗಿದ್ದ. ದತ್ತಕ ತಂದೆತಾಯಿಗಳೆಲ್ಲರೂ ತೀರಿಕೊಂಡದ್ದರಿಂದ ಆ ಆಸ್ತಿಗೆ ಅವರ ಸಂಬಂಧಿಕನೇ ಯಾವನೋ ಒಬ್ಬನು ತನ್ನದೇ ಒಡೆತನವೆಂದು ಜಗಳಹೂಡಿದ. ಹೀಗಾಗಲು ರಾಜಣ್ಣಾ ತಮ್ಮ ಸೋದರಮಾವನ ಕೈಯಲ್ಲಿ ಎಲ್ಲ ಅಧಿಕಾರ ಕೊಟ್ಟು ಮೇಲಿನ ಕೋರ್ಟಿನವರೆಗೆ ನ್ಯಾಯ ಒಯ್ದು ಬಡಿದಾಡಿದ ರಾಜಣ್ಣಾನಂತೆಯೇ ಎಲ್ಲಾ ನಿಕಾಲೆ ಆಗಿದ್ದಿತು ಆಸ್ತಿಮಾತ್ರ ಇನ್ನೂ ಅವನಕೈಯಲ್ಲಿ ಬಂದಿರಲಿಲ್ಲ. ರಾಜಣ್ಣಾನ ಸೋದರಮಾವ ನರಸಿಂಗರಾಯನೊಳ್ಳೇ ಚೈನಿಯುಗೆಳೆಯ. ಯಾವಾಗಲೂ ತಂಬಾಕು ಬಾಯಲ್ಲಿ ತುಂಬಿರುತ್ತಿತ್ತು. ಪಿಚಿ ಪಿಚಿ ಉಗುಳುವದೇನು ಸೊಟ್ಟ ಬಾಯಿಮಾಡಿ ಸಿಗರೇಟಿನ ಹೊಗೆ ಬಿಡುವದೇನು- ಹೇಳಲಾಸವಲ್ಲ ಅವನು ಜೋಗಮ್ಮಳೊಬ್ಬಳನ್ನು ಇಟ್ಟುಕೊಂಡಿದ್ದ. ಅವಳೇನು ಒಳ್ಳೇ ಚೆಲುವೆಯೆಂದು ಮೆಚ್ಚಿದ್ದನೆಂದು ಮಾತ್ರ ಭಾವಿಸಬೇಡಿ. ಮನೆಯಲ್ಲಿ ಬಂಗಾರದಂಥ ಹೆಂಡತಿಯಿದ್ದೂ ವೇಶ್ಯಾಗಮನ ಮಾಡುವವರನ್ನೂ ಹಣ್ಣುಮಾರುವ ಹೆಂಗಸರಿಗೆ ಮರುಳಾಗಿ ತಿರುಗಾಡುವವರನ್ನೂ ನೀವು ನೋಡಿಲ್ಲವೇ? ಆ ಜಾತಿಗೆ ಸೇರಿದವ ನಮ್ಮ ನರಸಿಂಗರಾಯ ಆದರೂ ಶಿಷ್ಟನೋಡಿ ನಮ್ಮ ಸನಾತನೀ ವರ್ಗಕ್ಕೆ ಆತ! ದೇವರೂ ದಿಂಡರೂ-ಮಡೀ

ಮೈಲಿಗೀ ಬಹಳವಂತೆ ಆತನ ಮನೆಯಲ್ಲಿ! ಆಗಾಗ್ಗೆ ಬ್ರಾಹ್ಮಣರಿಗೆ ಭೋಜನ ದಕ್ಷಿಣೆ ಸಿಗುತ್ತಿತ್ತೆಂಬುದನ್ನು ಬೇರೆ ಹೇಳಬೇಕೆ? ಮನೆಯಲ್ಲಿ ಅಡಿಗೆಗೊಬ್ಬಳು ಅಮ್ಮ! ಪೂಜೆಗೊಬ್ಬ ಬ್ರಾಹ್ಮಣ! ಸಂಬಳಗೊತ್ತುಮಾಡಿಟ್ಟು ಬಿಟ್ಟಿದ್ದಾರೆ 'ಜೋಗಮ್ಮನನ್ನು ಇಟ್ಟುಕೊಂಡಿದ್ದಾರಂತಲ್ರೀ ನಿಮ್ಮ ನರಸಿಂಗ ರಾಯರು' ಎಂದು ಯಾರಾದರೂ ಅವರ ಪುರೋಹಿತರಿಗೆ ಕೇಳಿಬಿಟ್ಟರೆ ಏನು ಉತ್ತರಬರುವದು ಗೊತ್ತುಂಟೋ "ದೊಡ್ಡವರು ಹ್ಯಾಗಿದ್ದರೂ ಆಡಿಕೊಳ್ಳಬಾರದು. ಪಾಪ! ಅವಳನ್ನು ಇಟ್ಟುಕೊಂಡಿದ್ದರೂ ಸಹ ಅವಳ ಕೈಯಿಂದ ಎಂದೆಂದೂ ಒಂದು ಲೋಟಚಹಕುಡಿಯುವದಿಲ್ಲ. ಒಳ್ಳೇ ನಿಷ್ಠಾವಂತರು." (ನಿಷ್ಠಾವಂತಿಕೆ ಆಕೆಯ ಮೇಲೆ ಎಂಬುದು ಅವರ ಮನದೊಳಗಿನ ಅಭಿಪ್ರಾಯವಲ್ಲವಷ್ಟೇ?)

ನರಸಿಂಗರಾಯ ಹೇಗಿದ್ದರೇನು ನಮಗೆ ನಮ್ಮ ಸಮಾಜದ ವಿಚಾರ ಮಾತ್ರ ಎಷ್ಟು ವಿಚಿತ್ರವಾಗಿದೆ ನೋಡಬೇಕಾಗಿದೆ.

* * * *

ಪ್ರಮಿಲೆ ಆ ಜೋಗಮ್ಮನ ಸಾಕು ಮಗಳು. ಯಾವ ಜಾತಿಯೋ ಏನೋ ದೇವರೇ ಬಲ್ಲ ಮರಾಠಾ ಜಾತಿಯವಳೆಂದು ಜೋಗಮ್ಮ ಹೇಳಿದ್ದಳು. ಒಳ್ಳೇ ಮುದ್ದು ಮುದ್ದಾದ ಹುಡುಗಿ! ಜೋಗಮ್ಮನಿಗೆ ನರಸಿಂಗರಾಯರ ಆಶ್ರಯ ಕೇಳುವದೇನು? ದುಡ್ಡಿಗೆ ಕೊರತೆಯಿರಲಿಲ್ಲ ಆಕೆಗೆ ಪ್ರಮಿಲೆಗೆ ವಿದ್ಯೆಕಲಿಸುತ್ತಿದ್ದಳು ಪ್ರಮಿಲೆ ಓದು ಹೇಳಿಸಿಕೊಳ್ಳುವುದಕ್ಕೆಂದು ಆಗಾಗ್ಗೆ ರಾಜಣ್ಣನ ಬಳಿ ಬರುತ್ತಿದ್ದಳು ರಾಜಣ್ಣನೂ ಅವಳ ಮನೆಗೆ ಹೋಗಿ ಬಂದು ಇರುತ್ತಿದ್ದ. ರಾಜಣ್ಣನಿಗೆ ಮನೆಯಲ್ಲಿ ಸಲಿಗೆಯಿಂದ ಕರೆಯುವ ಹೆಸರು "ರಾಜಾ" ಎಂದು. ರಾಜಾನ ಜೊತೆಗೆ ರಾಣಿಯೆಂದು ಕರೆಯುವುದು ಸೊಗಸಾಗಿ ಕಾಣುತ್ತದೆಂದು ಅವಳ ಸಾಕುತಾಯಿ ಜೋಗಮ್ಮ ಎಳೆಯ ವಯಸ್ಸಿನಲ್ಲಿ ಚೇಷ್ಟೆಗೆಂದು ಪ್ರಮಿಲೆಗೆ "ರಾಣಿ"ಯೆಂದು ಕೂಗುತ್ತಿದ್ದಳು. ಎಳೆಯರಿರುವಾಗ ಹಾಕಿದ ಕಲ್ಪನೆಯು ಮೊಳೆತು ಚಿಗುರಾಯಿತು.

ಅವರಿಬ್ಬರೂ ನಿಜವಾಗಿಯೇ ರಾಜಾ-ರಾಣಿಯರಂತೆ ನಕ್ಕು ನಲಿನಾಡು

ತ್ತಿದ್ದರು. ಇನ್ನುರೆನ್ನ ಕಂಪನಿಯ ಏಜಂಟನೊಬ್ಬನು ಒಂದುಸಲ ಅಕಸ್ಮಾತ್ತಾಗಿ ಅವರೂರಿಗೆ ಬಂದಾಗ ಇಬ್ಬರೂ ಜಾಯಿಂಟ ವಿಮೆ ಇಳಿಸಿ ಬಿಡ್ರಿ" ಎಂದು ಅರಿಯದೆ ನುಡಿದುಬಿಟ್ಟದ್ದ. ಮುಂದಿನವರುಷ ಇಳಿಸೋಣ" ಎಂದು ಇಬ್ಬರೂ ಖೊಳ್ಳನೆ ನಕ್ಕು ಬಿಟ್ಟರು. ಇಬ್ಬರ ಬುದ್ಧಿಯೂ ಚುರುಕು. ಯುವಕ ಸಂಘದವರು ಏರ್ಪಡಿಸುವ ಷಾಣ್ಮಾಸಿಕ ವಕ್ತೃತ್ವ ದಮೇಲಾಟದಲ್ಲಿ ಯಾವಾಗ ನೋಡಿದರೂ ಇವರೇ ಮೊದಲಿನವರಾಗಿರುತ್ತಿದ್ದರು ಬರೀ ಸ್ಕೂಲು ಬುಕ್ಕುಗಳನ್ನಷ್ಟೇ ಪಠಿಸುತ್ತಾ ಕೂಡದೆ ಬೇರೆ ಬೇರೆ ವಿಷಯಗಳನ್ನು ಓದಿಕೊಂಡಿದ್ದೇ ಇದಕ್ಕೆ ಕಾರಣ.

ಇಂಥ ಪ್ರೇಮುಳ ಹೃದಯಿಗಳಿಗೆ ಜಾತಿಬಂಧನದ ತೊಡಕೇ ? ಹೃದಯುಗಳು ಒಂದಾಗಿದ್ದರೂ ಸಮಾಜಕ್ಕೆ ಇದು ಸಹನೆಯಾಗದಿರುವದು ನಮ್ಮ ದುರ್ದೈವವಲ್ಲವೆ ಮತ್ತೇನು ? ಬಲುಮೆಯ ಜುಲುಮೆಯ—ಹೃದಯಗಳು ಕೂಡದ-ಮನಸ್ಸಿಲ್ಲದ-ಜೊತೆ, ಸರಿಯಾಗಿಲ್ಲದ-ವಿಷಮ ವಿವಾಹಗಳಿಗೇ ತಲೆ ಬೊಗ್ಗಿಸಿ ಇನ್ನೂ ಎಷ್ಟುಕಾಲ ಒದ್ದಾಡಬೇಕೋ ಈ ಸಮಾಜ-ತಿಳಿಯದಂತಾಗಿದೆ

ರಾಮಣ್ಣನಿಮ್ಮ ವ್ಯಥೆಯಾಗಿರಬೇಕು ಪ್ರಮಿಲೆಗೆ ಬರೆಯ್ಯುವ? ಪಾಪ! ಮೋರೆಯನ್ನು ಸಹ ಯಾರಿಗೂ ತೋರಿಸಲಾರ. ಮನೆಯಲ್ಲಿಯೇ ಹಾಸಿಗೆ ಹಿಡಿದು ಮಲಗಿಬಿಟ್ಟಿದ್ದಾನೆ.

* * * *

ಕೆಂಪು ಪಾಕೀಟು ! ಪ್ರಮಿಲೆ ಗಾಬರಿಯಾದಳು. ಪಾಕೀಟನ್ನು ಹರಿಯುತ್ತಿರುವಾಗಲೇ ತಾನು ತನ್ನ ಹೃದಯುವನ್ನೂ ಹರಿದುಕೊಳ್ಳುತ್ತಿರುವೆನೇ ಎಂದೆನ್ನಿಸಿತು. ಕಣ್ಣಲ್ಲಿ ನೀರು ತುಂಬಿ ಬಂದವು. ಹಾಗೂ ಹೀಗೂ ಓದಿ ಮುಗಿಸಿದಳು. ತುರುಬಿನಲ್ಲಿದ್ದ ತನ್ನ ಕಸೂತಿಯ ಸೂಜಿಯನ್ನು ಸರ್‍ರನೆ ಹಿರಿದುಕೊಂಡಳು. ಒಂದು ಕೈಯಿಂದ ಬ್ಲೋಜಿನ ಗುಂಡಿಗಳನ್ನು ಬಿಡಿಸಿ ಕೊಂಡಳು.

"ನೀನು ನಿನ್ನ ಕೈನೆತ್ತರದಿಂದ ಓಲೆ ಬರೆದಿದ್ದರೆ ನಾನು ಈ ಮೊದಲೇ ನಿನಗೆ ಅರ್ಪಿಸಿಬಿಟ್ಟಿರುವ ನನ್ನ ಹೃದಯದ ಪವಿತ್ರ ರಕ್ತದಿಂದ ಉತ್ತರ ಬರೆಯಬೇಕೆನ್ನುತ್ತೇನೆ. ನಿನಗೆ ನನಗಿಂತ ನಿನ್ನ ಆಸ್ತಿ ಮಿಗಿಲೆನಿಸಿತು. ಸಮಾಜ ರಾಕ್ಷಸನ ಬಾಧೆ ತಗುಲಿತು. ವೇಶ್ಯೋಪಾಸಕ ನರಸಿಂಗರಾಯರಿಗೆ ವೇಶ್ಯಾಬಾಜಾರದಲ್ಲಿ ನಾನೂ ಒಂದು ಅಂಗಡಿ ತೆರೆಯಬೇಕೆಂಬ ಅಪೇಕ್ಷೆಯಾಯಿತು. ಈ ಅಂಧ ಸಮಾಜಕ್ಕೆ ಇದಾವುದೂ ಕಾಣುವದಿಲ್ಲ. ನೋಡಲು ಯತ್ನಿಸಿದರೆ ತಾನೇ ಕಾಣುವದು. ಇರಲಿ. ಇಂಥ ಘೋರನರಕದಲ್ಲಿ ಇರುವದರಿಂದಾಗುವ ಲಾಭವಾದರೂ ಏನು?"

ಪ್ರಮಿಲೆ ಇನ್ನೂ ಏನೇನು ಬರೆಯತಕ್ಕವಳಿದ್ದಾಳೋ ಅವಳಿಗೇ ಗೊತ್ತು. ಅಷ್ಟರಲ್ಲಿಯೇ ಹೊರಗೆ ಕಾಲುಸದ್ದು. ಹಠಾತ್ತಾಗಿ ನರಸಿಂಗರಾಯ ಒಳಗೇ ಬಂದುಬಿಟ್ಟನು.

"ಏನಿದು ರಕ್ತ ಸಿಡಿದಂತೆ ಕಾಣುತ್ತದಲ್ಲ ಕೆಳಗೆ"

"ಏನೂ ಇಲ್ಲ ಹೊಲಿಯುವಾಗ್ಗೆ ಸೂಜಿ ಕೈಗೆನಟ್ಟು ಒಂದು ಹನಿ ರಕ್ತ ಬಿದ್ದಿರಬಹುದಿಷ್ಟೆ." ಎನ್ನುತ್ತ ಓಲೆಯ ಮೇಲೆ ಹತ್ತಿರದಲ್ಲಿದ್ದ ಪುಸ್ತಕವನ್ನು ಹೇರಿ ಎದ್ದು ನಿಂತಳು-ಅಲ್ಲಿಯೇ. ನರಸಿಂಗರಾಯ ಪುಸ್ತಕವನ್ನೆತ್ತಿ ಓಲೆಯನ್ನು ತೆಗೆದುಕೊಂಡ. ರಾಜ-ರಾಣಿಯರ ಎರಡೂ ಓಲೆಗಳೂ ಅವನ ಕೈಗೆ ದೊರೆತವು. ಗಾಬರಿ ಗಾಬರಿಯಿಂದ ಓದಿದ ರಕ್ತಮಯ ಓಲೆಗಳನ್ನು ಕೈಯಲ್ಲಿ ಹಿಡಿದುಕೊಳ್ಳಲು ಯಾವನಿಗೆ ತಾನೆ ಧೈರ್ಯವಾದೀತು? ಅವನ ಹೃದಯವು ಎಚ್ಚತ್ತಿತು. ಅಂದು ಅವನಿಗೆ ಮನವರಿಕೆಯಾಗಿರಬೇಕು. ಕೂಡಿದ ಹೃದಯಗಳೆರಡರ ಅಗಲುವಾಗಿನ ಭೀಕರ ನೋಟ ಹೇಗಿರುವದೆಂಬುದು. ಸಿಂಪ್ಸನ್ನಳಿಗಾಗಿ ಎಂಟನೇ ಎಡ್ವರ್ಡ ಬಾದಶಹನು ಸಿಂಹಾಸನವನ್ನೇ ತ್ಯಾಗಮಾಡಿದ ಸುದ್ದಿಯೂ ನರಸಿಂಗರಾಯನಿಗೆ ಅಂದೇ ತಿಳಿದಿದ್ದಿತು ಪ್ರೇಮಕ್ಕೆ ಜಾತಿಯಿಲ್ಲ, ಪಂಥವಿಲ್ಲ, ಭೇದಭಾವಗಳಿಲ್ಲವೆಂಬುದು ಸುಳ್ಳಲ್ಲ! ಕಲ್ಲು ಹೃದಯವು ಕೂಡ ಕರಗಿ ನೀರಾಗಿ ಹೋಯಿತು. ಅಂದು ಒಬ್ಬರಿಗಿಂತ ಒಬ್ಬರಿಗೆ ತಮ್ಮ ದೇಹದ ಪರಿವೆಯೇ ಇರಲಿಲ್ಲ. ನೋಡಿ ಸುರುವುಮಾಡಿದ ಆತನೂ ನೆತ್ತರದ ಓಲೆಯನ್ನೇ ಬರೆಯಲಿಕ್ಕೆ. ಪ್ರಮಿಲೆಯಹಾಗೆ

ತಾರುಣ್ಯದ ನೆತ್ತರವೆಲ್ಲಿಂದ ಪುಟಿಯಬೇಕು. ಏನೋ ಎರಡೇ ಸಾಲು ಬರೆದು ಮುಗಿಸಿಬಿಟ್ಟೆ.

“ ಇಂದಿನಿಂದ ನೀವಿಬ್ಬರೂ ರಾಜ-ರಾಣಿ. ”

ಇಂತು ಹರಸುವ ನರಸಿಂಗರಾಯ.

# ಸೌಭಾಗ್ಯವತಿ

" ವತ್ಸಲಾ........ ! " ನಿಟ್ಟುಸುರಿನೊಂದಿಗೆ ಕುಮಾರನು ಆರಾಮ ಕುರ್ಚಿಯ ಮೇಲೆ ದೊಪ್ಪನೆ ಬಿದ್ದುಕೊಂಡನು ಚಿಕ್ಕಬಾಲಕನೊಬ್ಬನು ಕಿಡಿಕಿಯಲ್ಲಿ ಹಣಿಕಿ ಹಾಕಿ " ಕುಮಾರಣ್ಣಾ " ಎಂದು ಕೂಗಿದಂತಾಯಿತು. ಎದ್ದು ನೋಡುತ್ತಾನೆ; ಕೆಂಪು ಮಸಿಯಿಂದ ವಿಳಾಸ ಬರೆದುದೊಂದು ಓಲೆ ಕಿಡಕಿಯ ಬಳಿಯಲ್ಲಿ ಬಾಲಕನು ಎಸೆದು ಓಡಿ ಹೋಗಹತ್ತಿದ್ದನು. ಓಲೆಯನ್ನು ಬಿಚ್ಚತೊಡಗಿದನು " ಕೊನೆಯ ಸಂದೇಶ " ವೆಂಬ ತಲೆಬರಹವು ಆತನನ್ನು ಗಾಬರಿಗೊಳಮಾಡಿತು.

" ಕುಮಾರ " ಎಂದು ಕೂಗುತ್ತ ತಂದೆಯು ಕೋಣೆಯ ಒಳಗೆ ಬಂದನು. ಗಾಬರಿಯಿಂದ ಕುಮಾರನು ಓಲೆಯನ್ನು ಮೇಜಿನ ಡ್ರಾಅರದಲ್ಲಿ ಇಟ್ಟನು ಪಾಪ! ಕಿಡಕಿಯಿಂದ ಓಲೆ ಒಗೆದುದನ್ನು ಕಂಡುಕೊಂಡೇ ತಂದೆಯು ಬಂದಿರುವನೆಂಬುದನ್ನು ಕುಮಾರನೇನು ಬಲ್ಲ?

" ಎಲ್ಲರ ಊಟವಾಗಿ ಎರಡು ತಾಸಾದರೂ ಇನ್ನೂ ನೀನು ಊಟಕ್ಕೇ ಏಳಲೊಲ್ಲೆಯಲ್ಲ. ಬೇಗನೆ ಊಟ ಮಾಡಿಕೋ ಸೋನೂನನ್ನು ಕರೆದುಕೊಂಡು ಗೋವಿಂದರಾಯರು ಬರುವ ಹೊತ್ತಾಗಿದೆ "

" ತಂದೆಯವರೇ ನನಗೇಕೋ ಇಂದು ದೇಹಾಲಸ್ಯವಾಗಿದೆ. ಊಟವನ್ನು ಸಹ ಅದಕ್ಕಾಗಿಯೇ ಮಾಡಿಲ್ಲ. ಸೋನೂ ಬೇಡ; ನೀನೂ ಬೇಡಾ; ಯಾರೂ ಬೇಡ. "

" ಹೌದು ಗೊತ್ತುಂಟು. ಆ ದರಿದ್ರ ಮುಂಡೆ ಅಖಂಡಸೌಭಾಗ್ಯವತಿ ವತ್ಸಲಾನ ಚಿಂತೆ ಹತ್ತಿದೆಯಲ್ಲವೇ? ಅಲ್ಲವೋ ಮೂರ್ಖ, ಸೋನೂನಂಥಾ ರೂಪವತಿ ಹುಡಿಗೆ ನಿನಗೆಲ್ಲಿಯಾದರೂ ದೊರೆಯುವದುಂಟೇ? ಇಷ್ಟೇ ಅಲ್ಲ. ೨ ಸಾವಿರ ರೂಪಾಯಿ ವರದಕ್ಷಿಣೆ ಕೊಡುವಂಥಾ ಮನೆ! "
" ಛೇ ನಿಜವಾದ ಪ್ರೇಮ ಹಾಗೂ ತತ್ವಗಳು ಸೌಂದರ್ಯ ಹಾಗು ಧನದ ಬೆನ್ನು ಹತ್ತುವದಿಲ್ಲ. ಪುನರ್ವಿವಾಹದ ತತ್ವಕ್ಕೆ ಸಮ್ಮತಿಯುಳ್ಳವನು.

ನಾನು, ವತ್ಸಲೆಗೆ ಪ್ರೇಮದಾನವನ್ನು ಮನಸ್ಸಿನಿಂದ ಮಾಡಿರುವೆನು ನಾನು ಹೀಗಿರಲು ನನಗೆ ತಾವು ಇಲ್ಲದ ಆಶೆ ಹಚ್ಚಬೇಕೆನ್ನುವಿರಾ ? ''

'' ಸಾಕು ನಿನ್ನ ತತ್ವ! ಗಂಡಸತ್ತೂ ಕುಂಕುಮವನ್ನು ಹಚ್ಚಿಕೊಂಡು ಮೆರೆಯುವ ಆ ದರಿದ್ರಮುಂಡೆ.......

'' ಹಿರಿಯರಾದರೇನಾಯಿತು. ತಡೆಯಿರಿ ನಿಮ್ಮ ಅಭದ್ರವಚನಗಳನ್ನು ! ಆ ಪವಿತ್ರ ಬಾಲಿಕೆಗೆ ಗಂಡನ ಪರಿಚಯವಾದರೂ ಇದೆಯೇನೆಂಬುದನ್ನು ನೀವೇ ಹೇಳಿರಿ ೮ ವರ್ಷದವಳಿರುವಾಗ ಲಗ್ನಮಾಡಿದ ನೀಚ ಸಮಾಜದ ತಪ್ಪಿಗಾಗಿ ಅವಳಿಗೆ ಮುಂಡೆಯನ್ನುವಿರಾ ? ಬೇಡ ತಂದೆಯವರೆ ನಾನವಳನ್ನು ಮದುವೆಯಾಗುವೆನು ತಾವು ಒಪ್ಪಿಗೆಯನ್ನು ಈಯಲೇಬೇಕು. ''

'' ಛೇ, ಅದೆಂದಿಗೂ ಆಗದು. ನನ್ನ ವಿರುದ್ಧ ವರ್ತನೆಮಾಡುವ ನೀನು ನನ್ನ ಮಗನೇ ಅಲ್ಲ. ಇದೇ ಕ್ಷಣಕ್ಕೆ ಮನೆಬಿಟ್ಟು ತೆರಳು. ''

'' ಇದೋ ಹೊರಟೆ '' ಎಂದವನೇ ಕುಮಾರನು ಹೊರಬಿದ್ದನು. ಪತ್ರದ ಅರಿವುಕೂಡ ಆತನಿಗುಳಿಯಲಿಲ್ಲ. ನೆಟ್ಟಗೆ ವತ್ಸಲೆಯ ಮನೆಗೆ ನಡೆದನು ವತ್ಸಲೆಯ ತಾಯಿಯೊಬ್ಬಳೇ ಅಲ್ಲಿದ್ದಳು. 'ವತ್ಸಲೆಯೆ'ಲ್ಲಿ ಎಂದು ಕೇಳಿದನು ಒಂದು ತಾಸಾಯಿತು. ಎಲ್ಲಿಯೋ ಹೋಗಿಬಿಟ್ಟಿದ್ದಾಳೆ ಎಂದು ಆಕೆ ಹೇಳಿದಳು.

'' ವತ್ಸಲೆ, ವತ್ಸಲೆ '' ಎಂದು ಧ್ಯಾನಿಸುತ್ತ ಅವಳನ್ನು ಹುಡುಕತೊಡಗಿದನು.

ಇತ್ತ ಕುಮಾರನ ತಂದೆಯು ಕುಮಾರನು ಹೊರಗೆ ಹೋಗುವದೊಂದೇ ತಡ ಡ್ರಾಅವರನ್ನು ಓಲೆಯನ್ನು ಬಿಚ್ಚಿದನು.

ಓಂ ಶಾಂತಿಃ ಶಾಂತಿಃ

**ಕೊನೆಯ ಸಂದೇಶ**

ಪ್ರಿಯ ಕುಮಾರ,

ನನ್ನ ಸಲುವಾಗಿ ನಿನಗೆ ೪-೬ ತಿಂಗಳಿಂದ ಬಹಳ ತೊಂದರೆಗೊಳಗಾಗಬೇಕಾಗಿದೆ. ನಮ್ಮಂಥ ಬಾಲವಿಧವೆಯರಿಗೆ ಈ ಕ್ರೂರಸಮಾಜವು

ದುಃಖದಲ್ಲಿಯೇ ಇಡಬೇಕೆನ್ನುತ್ತಿರುವಾಗ ನೀನು ವ್ಯರ್ಥ ನನಗೋಸುಗ ಬಹಿಷ್ಕೃತನಾಗದೆ ನಿಮ್ಮ ತಂದೆಯವರ ಆಜ್ಞೆಯಂತೆ ಬೇಕಾದವರ ಜೊತೆಗೆ ವಿವಾಹವನ್ನು ಮಾಡಿಕೋ ನೀನು ವಚನವನ್ನಿತ್ತದ್ದರಿಂದ ನಾನು ಈ ವರೆಗೆ ಪ್ರಾಣವನ್ನು ಹಿಡಿದಿದ್ದೆನು. ನಾನಿನ್ನು ಹೆಚ್ಚುಕಾಲ ಈ ಪೃಥ್ವಿಯ ಮೇಲೆ ಉಳಿಯಲಾರೆ, ಸಕೇಶಿಯರಿಗೆ ಈ ಭೂಮಿ ಮೇಲೆ ಯಾವಬಗೆಯ ಅಧಿಕಾರವೂ ಇಲ್ಲವಂತೆ. **ಕೆಂಪು ಸೀರೆಯನ್ನುಟ್ಟು ಕೊಂಡು** ಒಕ್ಕಲಗಿತ್ತಿಯರಂತೆ ವೈಮುರೆ ಕೆಲಸ ಮಾಡುತ್ತ ಒಂದು ಹೊತ್ತು ಕೂಳುತಿಂದು ನಾಯಿಯಂತೆ ಮನಿಹಿಡಿದುಕೊಂಡು ಬಿದ್ದಿರುವುದೆ ಅವರ ಕರ್ತವ್ಯವಂತೆ **ಕಾರ್ಯ**ಕಟ್ಟಳೆಗಳಲ್ಲಿ ನಮ್ಮ **ಮೋರೆ** ಅಶುಭ ನಾವು ಮುಟ್ಟಿದ ನೀರು-ನಿಡಿ ಮೈಲಿಗೆ; ಇದೆಲ್ಲಿಯ ಧರ್ಮ. ಪುನರ್ವಿವಾಹ **ಮಾಡಿ**ಕೊಳ್ಳುವದೆಂದರೆ ಧರ್ಮವು ಹಾಳಾಗಿ ಕಲಿಯುಗದ ಸಮಾಪ್ತಿ ಬೇಗನೆ ಆಗ ವದೆಂದು ಸ್ವಾರ್ಥಪರ ಸನಾತನಿಗಳ ಮತ ನಿಮ್ಮ ತಂದೆಯವರು ೬ನೇ ಮದುವೆಯಾದರೂ ಕೇಳುವವರಾರಿರುವರು. ಮುಳ ಗೊಳಿಕಿಯಲ್ಲಿ **ಶಿಶು**ವನ್ನು ಒಗೆದು ಅವಳು ಪಾರಾದಳು. ಇದನ್ನು ಅಡಗಿಸಿಡಲು ಧರ್ಮಿಷ್ಟರೆಂದು ಕೊಚ್ಚಿಕೊಳ್ಳುವ ಕ್ರೂರ ಪಿಶಾಚಿಗಳಿಗೆ ನಾಚಿಕೆಯೆಲ್ಲಿ ಬರಬೇಕು ಶಿಶುವನ್ನು ಪತ್ತೆಹಚ್ಚಿದ ಅಧಿಕಾರಿಯೊಬ್ಬನಿಗೆ ನಿಮ್ಮ ತಂದೆಯವರೇ ಮಧ್ಯಸ್ಥರಾಗಿ ಬಂದು ಲಂಚಕೊಟ್ಟು ಕಳಿಸಿಕೊಟ್ಟದ್ದನ್ನು ನಾನು ಪ್ರತ್ಯಕ್ಷ ಕಂಡಿದ್ದೇನೆ. ಮಾಡುವವೇನಿದೆ, ದುಡ್ಡಿದ್ದವರು ಏನು ಮಾಡಿದರೂ ಛಂದ. ಶಾಸ್ತ್ರಿಗಳು ನಿಮ್ಮ ತಂದೆಯವರ ಪುರೋಹಿತರು ನಾನು ಕುಲಕಂಟಕಿ……ಬೇಡ- ಪರರಿಗೆ ದೋಷಕೊಡದೆ ಇನ್ನು ಅರ್ಧ ತಾಸಿನೊಳಗೆ **ದೇವೀಘಟ್ಟಕ್ಕೆ** ಹೋಗಿ **ಗಂಗೆ**ಯ ಮೊರೆಹೋಗುವೆನು.

ನೀನು ಸುಖಿಯಾಗಿದ್ದರೆ ಸಾಕು,

**ಇದೇ ನನ್ನ ಕೊನೆಯ ಸಂದೇಶ**

**ನಿನ್ನ ವತ್ಸಲೆ**

ಪತ್ರವನ್ನು ಓದಓದುತ್ತಿದ್ದಂತೆ ಕುಮಾರನ ತಂದೆಗೆ ವಿಷಾದವೂ ಬೋಧನೆಯೂ ಆಗತೊಡಗಿತು. ಕೂಡಲೇ ದೇವೀಘಟ್ಟದ ಕಡೆಗೆ ನಡೆದರು.

ಇನ್ನು ನಮ್ಮ ಕುಮಾರನ ಅವಸ್ಥೆ ಏನಾಗಿದೆ ನೋಡೋಣ. ಕುಮಾರನು ಒಂದೆರಡು ಸ್ಥಳದಲ್ಲಿ ವತ್ಸಲೆಯನ್ನು ಹುಡುಕಿ ಕೊನೆಗೆ ದೇವೀಘಟ್ಟದ ಕಡೆಗೆ ನಡೆದನು. ದೇವೀಘಟ್ಟವೆಂದರೆ ಕುಮಾರ-ವತ್ಸಲೆಯರ ಮಿಲನ ಸ್ಥಾನ. ಬೇಸರ ಬಂದಾಗ ಅವರು ಆ ಬಂಡೆಗಲ್ಲ ಮೇಲೆ ಹೋಗಿ ಕುಳಿತುಕೊಳ್ಳುವರು. ಬಿಸಲಲ್ಲಿ ಹೋಗುವ ಸಂಭವವಿಲ್ಲದಿದ್ದರೂ ಸಂದೇಹದಿಂದ ಆತನು ಅಲ್ಲಿ ತೆರಳಿದ್ದ.

ವತ್ಸಲೆಯು ಸಮಾಜದಲ್ಲಿಯ ಅನೇಕ ವೈಷಮ್ಯಗಳನ್ನು ವಿಚಾರ ಮಾಡುವದರಲ್ಲಿ ಕುಳಿತವಳು ಎದ್ದೇಳಲಿಲ್ಲ. ಅವಳಿಗೆ ಇನ್ನೂ ಒಂದು ಘಂಟೆ ಗಂಗೆಯ ನೀರಿನ ತೆರೆಗಳ ನಿರೀಕ್ಷಣೆ ಮಾಡುವದರಲ್ಲಿಯೇ ಕಾಲ ಕಳೆಯಬೇಕೆಂದಾಗಿದ್ದರಿಂದ ಇನ್ನೂ ಅದರಲ್ಲಿ ಹಾರಿಕೊಂಡಿರಲಿಲ್ಲ ಕುಮಾರನು ಮೆಲ್ಲಗೆ ಅವಳ ಹತ್ತಿರದಲ್ಲಿ ಕುಳಿತುಕೊಂಡನು. ಒಮ್ಮೆಲೆ ಅವಳು ಬೆಚ್ಚಿಬಿದ್ದಳು. ಕೊನೆಗೆ ಕುಮಾರನು ಮನೆಯಲ್ಲಿ ನಡೆದ ವೃತ್ತಾಂತವನ್ನೆಲ್ಲಾ ವಿವರಿಸಿದನು. ಅವಳಿಗೆ ಆನಂದವಾಯಿತು "ಕುಮಾರ ನನ್ನ ಸಲುವಾಗಿ ನಿನಗೆ ಮುಂದೆ ಎಷ್ಟೊಂದು ಸಂಕಟ ಬರುವದೋ ಯಾರು ಬಲ್ಲರು" ಎಂದು ಮರುಗಿದಳು.


"ನಾನಿರುವ ವರೆಗೆ ಯಾವ ಸಂಕಟವೂ ಬರಲಾರವು. ಸೌಭಾಗ್ಯವತಿಯಾಗಿ ಬಾಳು" ದೂರದಿಂದ ಧ್ವನಿಯೊಂದು ಕೇಳಿಸಿತು ಅದಾರದಿರಬಹುದು? ಕುಮಾರನ ತಂದೆಯವರದಿರಬಹುದೆಂದು ವಾಚಕರು ತರ್ಕಮಾಡದೆ ಇರುವುದು ಸಾಧ್ಯವೆ?

# ವಿಧವೆಯ ತುಳಸೀ ಪೂಜೆ

ಗದಗು

ಶ್ರೀಕಾಂತ ತಾ॥ ೨೫-೧೦-೩೫

ಎಂದೂ ಇಲ್ಲದೆ ಆಕಸ್ಮಿಕವಾಗಿ ನಾನಿಂದು ಓಲೆ ಬರೆಯುತ್ತಿರುವದನ್ನು ಕಂಡು ನಿನಗೆ ಸೋಜಿಗವಾಗಬಹುದು; ಎಂದು ನಿನಗನಿಸಬಹುದು.



ಗೆಳೆಯಾ ಹಾಗೆ ಭಾವಿಸಬೇಡ ನೀನು ವಿಧವಾ ವಿವಾಹವನ್ನು ಮಾಡಿಕೊಂಡೆ ಯೆಂದು ನಾನು ನಿನ್ನ ಗೆಳೆತನವನ್ನು ಹರಿದುಕೊಂಡೆ. ಕಂಡ ಕಂಡವರೆದುರಿನಲ್ಲಿ "ಶ್ರೀಕಾಂತ ಧರ್ಮವನ್ನು ಹಾಳು ಮಾಡಿದ. ಬ್ರಾಹ್ಮಣ ಸಮಾಜಕ್ಕೆ ಕಲಂಕವನ್ನು ತಂದ" ಎಂದು ಕಿರುಚಿಕೊಂಡೆ ಶಾಸ್ತ್ರದ ಗಂಧ ಕೂಡ ಗೊತ್ತಿಲ್ಲದೆ. "ಶಾಸ್ತ್ರ-ಶಾಸ್ತ್ರವೆಂದು ಬೊಗಳಿ ಆಡುಗುಲಜ್ಜಿಯರ ಕಡೆಯಿಂದ ನಮ್ಮ ಕಿಟ್ಟ್ಯಾ ಬಲು ಧರ್ಮಿಷ್ಠ ನೋಡಿರಿ" ಎಂದೆನಿಸಿಕೊಂಡ ಉತ್ತರಕುಮಾರನು ನಾನು! ಕಿಟ್ಟ್ಯಾ

ನಾನೆಷ್ಟು ಸಂಭಾವಿತನೆಂಬುದು ನಿನ್ನಾಕೆಗೆ ಗೊತ್ತುಂಟು. ನಿನ್ನ ಮದುವೆ ಇನ್ನೂ ಆಗಿರಲಿಲ್ಲ. ಆಗೊಂದು ದಿನ ಓಣಿಯಲ್ಲಿ ಹಾಯ್ದು ಹೋಗುವಾಗ, ನಿನ್ನಾಕೆ ಒಬ್ಬಳೇ ಇರುವದನ್ನು ಕಂಡು ಭಾರೀ ಕೆಮ್ಮು ಬಂದವರ ಹಾಗೆ ಕೆಮ್ಮಿದನ್ನು ಅವಳು ನಿನಗೆ ಹೇಳದೆ ಇರಲಿಕ್ಕಿಲ್ಲ ನಾನು ಇದುವರೆಗೆ ಬೂದಿಮುಚ್ಚಿದ ಕೆಂಡದ ಹಾಗೆ ಒಳಗಿಂದೊಳಗೆ ಎಷ್ಟು ಘಾತಕಿಯಾಗಿ ದ್ದೇನೋ ದೇವರೇ ಬಲ್ಲ ಆದ್ದರಿಂದ ಗೆಳೆಯಾ ಬುದ್ಧಿ ಬಂದಿದೆ. ಸುಧಾರ ಣೆಯ ಅವಶ್ಯವಾಗಿದೆಯೆಂದು ತೋರುತ್ತಿದೆ. ನಿನ್ನನ್ನು ದುರಭಿಮಾನ ದಿಂದ ತಿರಸ್ಕರಿಸಿದುದಕ್ಕಾಗಿ ನಿನ್ನ ಕ್ಷಮೆಯನ್ನು ಯಾಚಿಸಬೇಕೆನ್ನು ತ್ತಿದ್ದೇನೆ ನನ್ನ ಇಚ್ಛೆಯನ್ನು ಪೂರ್ತಿಗೊಳಿಸುವಿಯಷ್ಟೇ? ಬುದ್ಧಿ ಬಂದುದಕ್ಕೆ ಪ್ರಮಾಣವೆಂದರೆ, ದೀಪಾವಳಿಯ ಉಡುಗೊರೆಯೆಂದು ಕಳಿಸಿದ ಈ ಚಿತ್ರ! ನಮ್ಮ ನೆರೆಮನೆಯ **ನರ್ಮದಾಬಾಯೀ** ಗಂಡ ತೀರಿಕೊಂಡದ್ದು ನಿನಗೆ ಗೊತ್ತಿರಲಿಕ್ಕಿಲ್ಲ. ಇಲ್ಲಿಯ ಸುದ್ದಿ ಗೊತ್ತಾಗುವ ಬಗೆಯಾದರೂ ಯೇನು? ಅವಳ ಗಂಡ ತೀರಿಕೊಂಡು ಮೂರು ವರ್ಷ ಗಳಾದವು. ಪಾಪ ಸಾತ್ವಿಕಳು. ಓದುಬರಹ ಕಲಿತ ಹುಡಿಗೆ ಕೇಶಮುಂಡ ನಕ್ಕೆ ಒಪ್ಪದ್ದರಿಂದ ಅತ್ತೆಯ ಮನೆಯವರು ಹೊರಗೆ ಹಾಕಿದ್ದಾರೆ. ಸಕೇಸಿಯರೆಂದರೆ ಅಪವಿತ್ರರೆಂದು ನಮ್ಮವರ ಭಾವನೆ. ಕೇಶಮುಂಡನ ಮಾಡಿಸುವದೆಂದರೆ ಪಾಪಾಚರಣೆ ಮಾಡಲು ಲಾಯಸೆನ್ಸ ಕೊಟ್ಟ ಹಾಗೆಯೋ ಏನೊ? ನಾನು ಕಾಣೆ ಇದೇ ನೋಡು ಸಕೇಶಿಯನ್ನು ಅಸ್ಪೃಶ್ಯಳಂತೆ ಭಾವಿಸುವ ಅವರ ಅತ್ತೆಯ ಮನೆಯಲ್ಲಿ ಅವರಜ್ಜನ ಶ್ರಾದ್ಧದ ದಿವಸ **ಹುಲಕೋಟಿಯ ಗೋದಾವರಿಯನ್ನು** ಅಡಿಗೆಗೆ ಕರಿ ಸಿದ್ದರು. ಹಾಯ್....ಹಾಯ್...ಅವಳು ಪಂಢರಪುರಕ್ಕೆ ಹೋಗಿ ನಾಲ್ಕು ಸಲ ಗುಪ್ತವಾಗಿ ದೇವರಿಗೆ ಶಿಶು ದಾನ....ಮಾಡಿಬಂದ ಸಂಗತಿ ಇಡೀ ಊರಿಗೆಲ್ಲ ಗೊತ್ತು! ಆದರೇನು ಲಾಯಸೆನ್ಸು ಬಂದಿದೆಯಲ್ಲ ಕೆಂಪುಸೀರೆ! ಅಂದು ನಾನು ಬ್ರಾಹ್ಮಣನಾಗಿ ಹೋಗಿದ್ದೆ. ಗೋದಾವರಿ ಬಡಿಸಿದ ಅಡಿಗೆ ಯೆಂದರೆ ಒಂದು ತುತ್ತು ನಮ್ಮೆಲ್ಲರಿಗೂ ಹೆಚ್ಚು ಹೋಗುವದು. ಒಳ್ಳೇ ಚಲುವೆಯಾದ ಅಮ್ಮ! ಹಾಸ್ಯ ಬೀಸ್ಯ ಚನ್ನಾಗಿ ಗೊತ್ತು. ಅವಳಿಗೆ.... ನಮಗೂ ಗೊತ್ತು! ಅಂದಮೇಲೆ ಕೇಳುವದೇನು! ಆಕೆಯ ವರ್ಣನೆ

ಮಾಡುವ ಉದ್ದೇಶ ನನ್ನದಲ್ಲ ನಮ್ಮ ಸಮಾಜದ ಸ್ಥಿತಿ ಹೀಗಿದೆಯೆಂಬದನ್ನು ತಿಳಿಸಿದೆ. ಮನೆಬಿಟ್ಟು ಹೊರಗೆ ಹಾಕಿದಂದಿನಿಂದ ನರ್ಮದಾಬಾಯಿ ಬೇರೊಂದು ಕಡೆ ಒಂದು ಚಿಕ್ಕಮನೆ ತೆಗೆದುಕೊಂಡು ಇರತೊಡಗಿದಳು. ಹೊಲಿಗೇ ಕೆಲಸ ಮಾಡಿ ಹೊಟ್ಟೆ ತುಂಬಿಕೊಳ್ಳುವಳು ತುಳಸೀಪೂಜೆಯೆಂದರೆ ಅವಳಿಗೆ ತುಂಬಾ ಪ್ರೀತಿ. ಹನ್ನೆರಡುವರುಷದ ಬಾಲಿಕೆ ಇದ್ದಾಗಾಯಿತು ಅವಳಿಗೆ ಅವರ ತಾಯಿ ಈ ಪೂಜೆಯ ಅಭ್ಯಾಸ ಮಾಡಿಸಿಬಿಟ್ಟಿದ್ದಳು. ಹಳ್ಳದ ದಂಡೆಯಮೇಲಿನ ಮರದ ಅಡಿಯಲ್ಲಿ ತುಳಸಿಕಟ್ಟೆ ಇದೆ. ಅಲ್ಲಿ ಅವಳು ನಿತ್ಯವೂ ಹೋಗುತ್ತಿದ್ದಳು. ಒಂದು ದಿನ ನಾನು ಕೆಲವು ಸನಾತನಿಗಳ ಟೋಳಿಯೊಂದಿಗೆ ನದಿಯಿಂದ ಬರುತ್ತಿದ್ದೆ ನಾವೆಲ್ಲರೂ ಹಣೆಗೆ ಭವ್ಯವಾಗಿ ನಾಮವನ್ನು ಬಡಿದುಕೊಂಡು (ಅದೊಂದು ಮಡಿಯ ಟ್ರೇಡ್‌ಮಾರ್ಕ) ನೀರಿನ ಥಾಲಿಯನ್ನು ಹಿಡಿದುಕೊಂಡು ಬರುತ್ತಿದ್ದೆವು ತುಳಸೀಪೂಜೆಗಾಗಿ ನರ್ಮದಾಬಾಯಿ ನಿಂತದ್ದು ಕಂಡಿತು. ಎಲ್ಲರೂ ಅವಳಿಗೆ ಹತ್ತುವಂತೆ ಅಭದ್ರಮಾತುಗಳನ್ನು ನಮ್ಮೊಳಗೆ ಆಡತೊಡಗಿದೆವು. ಅವಳು ಯಾವುದನ್ನು ಲೆಕ್ಕಿಸಲಿಲ್ಲ ನಾವು ಅಷ್ಟಕ್ಕೇ ಬಿಡಲಿಲ್ಲ.

"ಸಕೇಶಿಯಾಗಿ ತುಳಸಿಯನ್ನು ಮುಟ್ಟಲಿಕ್ಕೆ ನಾಚಿಕೆ ಬರುವಲ್ಲದೆ? ಮಡಿಹೆಂಗಸರೂ ಮುತ್ತೈದೆಯರೂ ಅದನ್ನು ಹೇಗೆ ಮುಟ್ಟಬೇಕು" ಎಂದು ಗದ್ದರಿಸಿದೆವು. ನಾನೊಂದು ಹೆಜ್ಜೆ ಮುಂದೆಯೇ ಹೋದೆ. ಗೆಳೆಯಾ ಈ ನೀಚನಿಗೆ ಅದೂ ಒಂದು ಆನಂದವೆನಿಸಬೇಕೆ? ಅವಳನ್ನು ಸ್ಪರ್ಶಿಸಿ ಕೆಳಕ್ಕೆ ತಳ್ಳಿದೆ. ಅವಳ ಕೈಯಲ್ಲಿಯ ಪೂಜೆಯ ತಟ್ಟೆ ಕೆಳಗುರುಳಿತು. ಅವಳು ಅಂದು ಎಷ್ಟು ದುಃಖಿಸಿರಬಹುದು? ನಾವು ಹೊರಟು ಹೋದೆವು. ಅವಳು ಮಾತ್ರ ಅಂದು ಅಲ್ಲಿಂದ ಏಳಲಿಲ್ಲ. ಇಡೀ ದಿವಸ ಉಪವಾಸದಿಂದ ಕಣ್ಣೀರು ಹರಿಸುತ್ತ ಕುಳಿತುಕೊಂಡಿದ್ದಳು. ನನಗೆ ಸಂಜೆಯಮುಂದೆ ಈ ಸಂಗತಿ ತಿಳಿಯಿತು ಅದೇಕೋ ಕೆಡಕೆನಿಸಿತು. ಅಂದು ಸಂಜೆ ಊಟವೇ ರುಚಿಸಲಿಲ್ಲ. "ನಾನು ಮಾಡಿದ್ದು ಒಳಿತೋ" ಎಂಬ ಪ್ರಶ್ನೆಯು ಕಂಣುಮುಂದೆ ಬಂದು ಕುಣಿಯಹತ್ತಿತು ಮನಸ್ಸಿಗೆ ಶಾಂತತೆಯಿಲ್ಲ. ಒಂದು ಹಳೇ 'ಸಮಾಜ' ಪತ್ರಿಕೆ ನಮ್ಮ ಕೋಣೆಯಲ್ಲಿ

ಬಿದ್ದಿತ್ತು. ಓದುತ್ತ ಕುಳಿತೆ. "ವಿಧವೆಯರ ಗೋಳು" "ಇತ್ತೀಚೆಗಿನ ಸನಾತನಿಗಳು" ಎಂಬೆರಡು ಲೇಖನಗಳನ್ನು ಓದಿದೆ ನನ್ನ ಮೇಲೆ ಬರೆದಿರ ಲಿಕ್ಕಿಲ್ಲವಷ್ಟೇ ಎಂಬ ಕಲ್ಪನೆ ಬಂದವು ಅವು ನನ್ನ ಹೃದಯಕ್ಕೆ ಬಾಣ ಚುಚ್ಚಿದಹಾಗೆ ಏಟು ಕೊಟ್ಟವು. ಅಂದಿನ ರಾತ್ರಿಯೆಂದರೆ ನನ್ನ ಜೀವನ ದಲ್ಲಿ ಮಾರ್ಪಾಟು ಮಾಡಿದ ರಾತ್ರಿ. ಮನುಷ್ಯತ್ವವನ್ನು ತಂದುಕೊಟ್ಟ ರಾತ್ರಿ! ಬೆಳಗಾದ ಬಳಿಕ ಮುಖಮಾರ್ಜನಾದಿಗಳನ್ನು ತೀರಿಸಿಕೊಂಡು ಹಳ್ಳದ ಕಡೆಗೆ ನಡದೆ. ಅವಳಿನ್ನೂ ಅಲ್ಲಿಯೇ ಇದ್ದಳು. ತುಳಸೀ ದೇವಿಗೆ ಭಕ್ತಿಪೂರ್ವಕವಾಗಿ ಬೇಡಿಕೊಳ್ಳತೊಡಗಿದಳು ಆಗಂತೂ ನನ್ನ ಪಾಪದ ಬಗ್ಗೆ ನನಗೆ ಬಹಳ ಕನಿಕರವೆನಿಸಿತು. ಹೋದವನೇ ಅವಳ ಕಾಲಿಗೆ ಬಿದ್ದೆ. ನಾನು ಅತ್ಯಾಚಾರ ಮಾಡಿದವನಾಗಿದ್ದರೂ ಅವಳಿಗೆ ಕೋಪವಿಲ್ಲ. ವಿನಯ ಪೂರ್ವಕವಾಗಿ ಕ್ಷಮಿಸಿದಳು. ಅವಳ ಆ ತುಳಸೀದೇವಿಯ ಮಹಿಮೆ ದೊಡ್ಡದು ನೋಡು ಆಕಸ್ಮಾತ್ ಸೂರ್ಯೋದಯದ ದೃಶ್ಯವನ್ನು ತೆಗೆ ಯಬೇಕೆಂದು ಬಂದ ಫೋಟೊಗ್ರಾಫರನೊಬ್ಬನು ನಮ್ಮ ಈ ದೃಶ್ಯವನ್ನು ಕಂಡು ಫೋಟೋ ತೆಗೆದುಕೊಂಡು ಬಿಟ್ಟನು. ನನಗೂ ಅದರಿಂದ ಕೆಡ ಕೆನಿಸಲಿಲ್ಲ. ಸ್ಮಾರಕವಿರಬೇಕೆಂದು ತಿಳಿದು ನಾನೂ ಕೆಲವು ಪ್ರತಿಗಳನ್ನು ತೆಗೆಸಿಕೊಂಡೆ. ಅವನ್ನೇ ಈಗ ನಿನಗೆ ಕಳಿಸಿರುವೆನು

ಇರಲಿ ಇನ್ನು ಮೊದಲಿನ ಕಿಟ್ಟೂ ನಾನೆಂದು ತಿಳಿಯಬೇಡ. ಎಂದಿ ನಂತೆ ನಿನ್ನ ಹೊಸ ಹೊಸ ವಿಚಾರಗಳನ್ನು ತಿಳಿಸುತ್ತಾ ಇರಬೇಕು. ನನ್ನ ಮೇಲಿನ ಸಿಟ್ಟನ್ನು ಮರೆತು ಮೊದಲಿನಂತೆ ಪ್ರೇಮವನ್ನು ತೋರು. ಇಷ್ಟೇ ನನ್ನ ಬೇಡಿಕೆ.

ನಿನ್ನ ಪ್ರೇಮಾಭಿಲಾಷಿ
"ಕಿಟ್ಟು"

# ಕನಸು

(ದುಡ್ಡೇ ಧರ್ಮ, ದುಡ್ಡೇ ನೀತಿ, ದುಡ್ಡೇ ನ್ಯಾಯ; ದುಡ್ಡೇ ದೊಡ್ಡಪ್ಪ ದುಡ್ಡಿಗಾಗಿ ಯಾವ ಹೇಸಿಕೆಲಸಕ್ಕೂ ಹಿಂಜರಿಯದ ಕೆಲವು ಸ್ವಾರ್ಥಿಗಳು ಇರುತ್ತಾರೆ ಸ್ವಾರ್ಥ ಸಾಧನೆಗಾಗಿ, ದುರಾಶೆಯನ್ನು ಈಡೇರಿಸಿಕೊಳ್ಳುವದಕ್ಕಾಗಿ, ಹೊತ್ತು ಸಾಧಿಸಿ ಕತ್ತೆಯ ಕಾಲನ್ನು ಕೂಡ ಹಿಡಿದುಕೊಳ್ಳಲು ಅವರು ಸಿದ್ಧರೇ ಅಂಥ ವರ್ಗದವರಲ್ಲೊಬ್ಬರು ನಮ್ಮ ರಾಮರಾಯರು ಇಲೆಕ್ಷನ್ನಿನ ಮೊದಲನೇ ದಿವಸ ಅವರಿಗೆ ಬಿದ್ದ ಕನಸಿದು )

...."ವಿಠಲ್ಯಾ, ಆ ಸ್ವಯಂಸೇವಕ ಯಾಕ ಬಂದಾನ ಬಾಗಲದಾಗ ? ಹೊರಗ ಹಾಕು ಅವನ್ನ. ನಿಶಾನಿ ಪಿಶಾನಿ ಕಿತಿಗೊಂಡು ಹೋಗನ್ನು ರಾವಬಹಾದ್ದೂರರು ಬರೋ ಹೊತ್ತಾಗೇದ ಆಗೋ ಅವರ ಪಟ್ಟಾವಾಲಾ ಬಂದ! ಏ...ಎಲ್ಲೆ ಇದ್ದಿಯೋ ಚಹಾಕ್ಕೆ ಎಸರಿಡು ಆಗೋ ಬಂದೇಬಿಟ್ಟರು ಬಹದ್ದೂರರು (ಮೆಲ್ಲಗೆ) ವಿಠಲ್ಯಾ, ನೂರಾರು ಮಂದಿ ದಿನಾ ನಮ್ಮಲ್ಲಿ ಚಹಾಕ್ಕೆ ಬರತಾರ ಅಂತ ಹೇಳೋಣ! ಆ! ಓಹೋ ಬನ್ನಿ ಬಹದ್ದೂರರೇ, ಛೇ, ಛೇ, ಅಷ್ಟು ದೂರ ಏಕೆ? ಮೇಲೆ ಬನ್ನಿರಿ. ವಿಠಲ್ಯಾ. ಆ ಆರಾಮ ಖುರ್ಚಿ ತಗೋ! ರಾಯ[illegible], ಇವನೇ ನಮ್ಮ ಮಗ ವಿಠಲ್ಯಾ ನಮ್ಮ ದುರ್ದೈವ, ಐದು ವರ್ಷ ಆಯ್ತು ಮ್ಯಾಟ್ರಿಕ್ಕು ನಪಾಸಾಗಲಿಕ್ಕೆ ಹತ್ತಿ, ಸತ್ಯನಾರಾಯಣ ಮಾಡಸತೇವಿ ಅಂತ ಬೇಡಿಕೊಂಡು ಆಯ್ತು ವೆಂಕಟರಮಣನ ಪಲ್ಲಕ್ಕಿ ಹೊಡಸತೇವಿ ಅಂತ ಕೇಳಿಕೊಂಡು ಆಯ್ತು ಆದರ ನಸೀಬ ಬೇಕಲ್ಲಾ.....ಏನಂದ್ರಿ! ಹೌದು! ಹೌದು! ನೀವು ಅಂದ್ಹಾಂಗ ಇದೊಂದು ಲಾಟರೀ ಇದ್ಹಾಂಗದ. ಮುಖ್ಯ ಏನು ನಸೀಬ ಬೇಕು ನೋಡ್ರಿ ನಿಮ್ಮಂಥವರ ಸಹಾಯ ಆದ ಅಂದಮ್ಯಾಲ ನಾವೇನು ಹೆದರೋ ಕಾರಣ ಇಲ್ಲ. ನಿಮ್ಮ ಪುಣ್ಯೇದಿಂದ ಎಲ್ಲರೆ ನೌಕರೀ ಸಿಕ್ಕೇ ಸಿಗತದ! ನೀವರ ಏನು ? ಮಗನಹಾಂಗ ತಿಳಕೊಂಡೀರಿ. ಅಂದ ಮ್ಯಾಲೆ ನಮಗ್ಯಾಕ ನೌಕರೀ ಕಾಳಜೀ? ನಾನೂ ಅವಗ ಬಜಾಯಿಸಿಟ್ಟೇನಿ ಹ್ಯಾಂಗರ ಒದ್ದಾಡಿ ನಿಮ್ಮನ್ನ ಆರಿಸಿತರಲಿಕ್ಕೇಬೇಕಂತ ಪಾಪ! ಅವನೂ ಬಹಾ

ದ್ದೂರ ಹುಡುಗ ನೋಡಿರಿ. ಊಟದ ಪರಿವೀನೇ ಇಲ್ಲ. ಫರಾಳಾ ಚಹಾ ಇದರ ಮ್ಯಾಲೆ ಇದ್ದಾನ. ನೂರಾರು ಜನರ್ನ ಕರಕೊಂಡು ಬರತಾನ, ಚಹಾಕುಡಸತಾನ ಬುರುಡೇ ಕೊಟ್ಟಿ ಅವರ ಮನಸ್ಸು ಒಲಸತಾನ, ನೀವು ನಮ್ಮ ಬಾಜೂದ ಹೋಟಿನ ಸಲುವಾಗಿ ಕಾಳಜೀನ ಮಾಡಬ್ಯಾಡ್ರಿ. ಇಲ್ಲೆ ನೀವು ಬರೋದೂ ಅವಶ್ಯ ಇದ್ದಿಲ್ಲ. ಇದೆಲ್ಲಾ ಹೇಳಲಿಕ್ಕೆ ವಿಠಲ್ಯಾನೇ ನಾಳೆ ಬರತಕ್ಕವ ಇದ್ದ. ಇನ್ನ ಮ್ಯಾಲೆ ಇವತ್ತ ನಾಳೆ ಎರಡೇ ದಿವಸ ಖರ್ಚಿಗೆ ಭಾಳ ಬೇಕಾಗತದ....ಆ ಎಷ್ಟು ಕೊಟ್ರಿ? ಐದನೂರು ರೂಪಾಯಿನ? ಸಾಕು! ಸಾಕು! ಮತ್ತೆ ಬೇಕಾದರೆ ನಾಳೆ ನೋಡೋಣಂತೀ ಡಾಯರ. ಮತ್ತೂ ಒಂದು ಮಾತು ನೀವು ಕೇಳತಿದ್ದಿರಲ್ಲಾ ಹಾರೂರು ಪಕ್ಕಾ ಅಂತ ಶುದ್ಧ ಸನಾತನಿಗಳ ಹೋಟು ಸಿಗತಾವೋ ಇಲ್ಲೋ ಅಂತ. ಹಾಂಗೇನು ತಿಳಿಯಬ್ಯಾಡ್ರಿ ನಾ ಸಹೀಮಾಡಿ ಒಂದು ಪತ್ರಿಕೆ ಹೊರಡಿಸಿ ಬಿಡತೇನಿ ಬಿಳೀ ಟೊಪ್ಗಿಯವರಿಗೆ ಹೋಟು ಕೊಡಬ್ಯಾಡ್ರಿ ಅಂತ "ಸೆರೆ ಸಿಂದಿ ಅಂಗಡಿ ಬಹಳ ಆಗ್ಯಾವ, ಸಾಲಿಕಡಿಮೆ ಆಗ್ಯಾವ, ತಂಬಾಕದ ಮೇಲೆ ಕರ ಹೆಚ್ಚಾಗೇದ, ರೈತರಿಗೆ ತುಂಬಾಗೋಳಾಟ ಆಗಿ ಜೀವ ಬೇಸರಾಗೇದ" ಅಂತ ಹೇಳಿ ಕಾಂಗ್ರೆಸ್ಸಿನವರು ಬೊಬ್ಬೀ ಹೊಡೀಲೊಲ್ಲರೇಕೆ? "ಕಾಂಗ್ರೆಸ್ಸಿನವರು ಅಂದ್ರುಧರ್ಮ ಲಂಡರು" ಅಂತ ನಾ ಶರಾ ಹೊಡದು ಬಿಟ್ಟರೆ ಅವರ ಆಟ ಯಾರು ನಡಸತಾರ? ಅಲ್ರೀ ನಿಮ್ಮಷ್ಟು ಭಕ್ತಿಯಾರಿಗದ? ನಮ್ಮ ಮಠಕ್ಕಿಷ್ಟು ದೊಡ್ಡನಿಧಿ ನಿಮ್ಮಿಂದ ಸಹಾಯ ಸಿಕ್ಕರೆ ಸಾಕು. ಸನಾತನಿಗಳ ಹೋಟು ದಿಂಡರಕೀ ಉಳ್ಳಿಕೋತ ಬರತಾವ ಆ....ಹೋಗಿ ಬರ್ರಿರಾ ಇನ್ನು ಕಾಳಜೀ ಬಿಟ್ಟು ಬಿಡಿರಿ! ಆ!....ಏನಂದ್ರೀ. ಇನ್ನೊಂದು ಐದುನೂರು ರೂಪಾಯಿ ಇರ್ಲೀ ಅಂತಿರಾ? ಹೌದು! ಹೌದು! ನೀವು ಅಂಬೋದು ಖರೆ! ಇಂಥಾ ಹೊತ್ತ್ಯಾಗ ಶಹಣೇತನಮಾಡಿ ಉಪಯೋಗ ಇಲ್ಲ, (ರಾವಬಹದ್ದೂರರು ಹೊರಟು ಹೋದ ಹಾಗೆ ಆಗುವದು.) ಏ....ಈ ಎಂಟನೂರು ರೂಪಾಯಿ ನಿನ್ನ ಟ್ರಂಕಿನ್ಯಾಗ ತಗದಿಡು ಬಾಕೀ ಎರಡನೂರು ರೂಪಾಯದಾಗ ಎಲ್ಲಾ ಮುಗಿಸಿ ಬಿಡುವದು. ನಗತೊಡಗುವನು ಅಷ್ಟರಲ್ಲಿಯೋ ಜಂತಿಯ ಮೇಲಿಂದ ಒಂದು ಚೇಳು ಹಾಗು ಹಲ್ಲಿಯು ಕಡಿದಾಟದಲ್ಲಿ ಚೇಳು ದೊಪ್ಪನೆ ರಾಮುರಾಯನ ಬಲಗೈ ಮೇಲೆ ಬೀಳುವದು. ಬಲ

ವಾಗಿ ಕುಟುಕಿ ಬಿಡುವದರಿಂದ ರಾಯನು ಎಚ್ಚತ್ತು, ಹಯ್ಯಯ್ಯೊ! ಎಂದು ಕೂಗ ತೊಡಗುವನು.

ಆಗ ನಸುಕು ಹರಿದಿತ್ತು. ಇಲೆಕ್ಶನ್ನ ಮೋಟಾರುಗಳ ಹಾರ್ನುಗಳ ವಾದ್ಯವು ಒಂದೆಡೆಗೆ ರಾಷ್ಟ್ರಧ್ವಜವನ್ನು ಕೈಯಲ್ಲಿ ತೆಗೆದುಕೊಂಡು "ಭಾರತ ಮಾತಾಕೀ ಜಯ" ಎಂದು ಉತ್ಸಾಹದಿಂದ ಜೈಕಾರದೊಂದಿಗೆ ಹೋಗುವ ಪ್ರಚಂಡ ಮೆರವಣಿಗೆ ಮತ್ತೊಂದೆಡೆಗೆ

ಚೇಳಿನ ಹೊಡತ ನಿಲ್ಲಿಸುವದಕ್ಕಾಗಿ ರಾಮರಾಯನು ಅನೇಕ ಉಪಾಯಗಳನ್ನು ಮಾಡಿಕೊಂಡನು. ಆದರೂ ಚೇಳು ಬಲವಾಗಿ ಕಡಿದದ್ದರಿಂದ ನಿರುಪಾಯನಾಗಿ ನರಳಾಡುತ್ತ ಬಿದ್ದುಕೊಂಡಿದ್ದನು. ಪೋಲಿಂಗ ಸ್ಟೇಶನ್ನಿನ ದಾರಿಯು ಅವರ ಮನೆಯ ಮೇಲಿಂದಲೇ ಹಾದು ಹೋಗಿದ್ದಿತು. ಅವನಿಗೆ ಜನಸಮೂಹವೆಲ್ಲವೂ ಒಡೆದು ಕಾಣುವಂತಿತ್ತು. ನೋಡುತ್ತಾ ಖಿಡಕಿಯ ಮೇಲೆ ಕುಳಿತುಕೊಂಡಿದ್ದ. ಎತ್ತ ನೋಡಿದತ್ತ ರಾಷ್ಟ್ರಧ್ವಜಗಳೇ ಕಾಣುತ್ತಿದ್ದವು. ಕಾಂಗ್ರೆಸ್ಸ ಜನರೊಡನೆ ನಡೆದಂಥ ಜನರೇ ತುಂಬಾ ಇದ್ದರು. ಕಾಂಗ್ರೆಸ್ಸೇತರರ ಮೋಟಾರುಗಳು ಬರಿದಾಗಿಯೇ ಇದ್ದವು ರಾಯನಿಗನಿಸಿತು. ನನ್ನಂಥ ಸ್ವಾರ್ಥಿಗಳ ಮನಸ್ಸಿನಲ್ಲಿದ್ದ ಕಲ್ಪನೆಗಳೆಲ್ಲ ಭ್ರಾಂತಿ! ಕನಸು! ಜನರು ಮೊದಲಿನಂತೆ ಪೊಳ್ಳುಮಾತಿಗೆ ಮೋಸಹೋಗುವ ದಿವಸಗಳಿನ್ನು ಉಳಿದಿಲ್ಲ. ಕಾಂಗ್ರೆಸ್ಸಿನ ಮುಂದೆ ಯಾರ ಆಟವೂ ನಡೆಯುವದಿಲ್ಲ. ದೇಶಕ್ಕಾಗಿ ಅದು ಜೇಲು ಅನಿಭವಿಸಿದೆ, ಪ್ರಾಣಕೊಡಲು ಸಿದ್ಧವಿದೆ.

ಇವೇ ಮೊದಲಾದ ಯೋಚನೆಗಳಲ್ಲಿ ರಾಮರಾಯ ಮುಳುಗಿ ಹೋಗಿದ್ದ, ಮುಂದೆ ಅವನ ವಿಚಾರಗಳು ಮಾರ್ಪಾಟಾಗಿ ಅವನು ಕಾಂಗ್ರೆಸ್ಸಿನವನಾದನೆಂದು ವದಂತಿಯೂ ಉಂಟು.

# ಬಹಿಷ್ಕಾರ

ಪ್ರತಿವರುಷವೂ ಶಿರ್ಶಿಯಲ್ಲಿ ಮಾರೆಮ್ಮನ ಜಾತ್ರೆಯು ಸೇರುತ್ತದೆ. ಆ ದೇವಿಯ ಮಹಿಮೆಯು ಅಗಾಧವಾದದ್ದೆಂದು ಎಲ್ಲಕಡೆಗೂ ವಾರ್ತೆ. ಜಾತ್ರೆಗಾಗಿ ದೂರದೂರದ ಜನರೆಲ್ಲ ಬರುತ್ತಾರೆ. ಕ್ರಿಸ್ತಮತ ಪ್ರಚಾರ ಸಂಬಂಧದಿಂದ ನಾನೂ ಅಲ್ಲಿಗೆ ಹೋದೆನು ನಾನೊಂದು ಮಾರ್ಗದಬದಿಗೆ ಕೈಯಲ್ಲಿ ಪ್ರಚಾರ ಪತ್ರಿಕೆಗಳನ್ನು ತೆಗೆದುಕೊಂಡು ಸುಮ್ಮನೆ ನಿಂತು ಕೊಂಡಿದ್ದೆನು. ಹಣ್ಣು-ಕಾಯಿ ಮಾಡಿಸಲಿಕ್ಕೆಂದು ಬರುವ ಜನರು ನನ್ನ ಕಡೆಗೆ ನೋಡಿ ಏನೂ ಮಾತನಾಡದೆ ಹೊರಟುಹೋಗುತ್ತಿದ್ದರು ದೇವಿಯ ಹರಕೆಯನ್ನು ಪೂರ್ತಿಗೊಳಿಸಿ ಪುಣ್ಯ ಪಡೆದೆವೆಂಬ ಸಂತೋಷವು ಕೆಲವರ ಮುಖದಲ್ಲಿ ಮೂಡಿದ್ದಿತು. ದಾರಿಗುಂಟ ಕುಳಿತುಕೊಂಡ ಭಿಕ್ಷುಕರ ತಂಡಕ್ಕೆಲ್ಲ ಒಂದೊಂದು ಕಾಸನ್ನು ಹೊತ್ತು ಹಾಕುತ್ತಾ ಬರುವವರಲ್ಲಿ ಕೆಲವರು ತೊಡಗಿದ್ದರು ಅಕಸ್ಮಾತ್ತಾಗಿ ನನ್ನ ಪುರಾತನ ಗೆಳೆಯರಾದ ಗಣಪತರಾಯರು ನನ್ನ ಕಣ್ಣಿಗೆ ಬಿದ್ದರು. ನಾನು ಮೌನವಾಗಿದ್ದೆ. ಅವರೂ ನನ್ನನ್ನು ತೀಕ್ಷ್ಣದೃಷ್ಟಿಯಿಂದ ಮಿಕಿ ಮಿಕಿ ನೋಡಿ ಗುರುತು ಹತ್ತದವರಂತೆ ತನ್ನ ಜೊತೆಗಾರರೊಂದಿಗೆ ಹೊರಟು ಹೋದರು. ಪಾಪ ನಾನೇ ಮಾತನಾಡಿಸಿ ಬಿಟ್ಟಿದ್ದರೆ ಒಳಿತಾಗುತ್ತಿತ್ತಲ್ಲವೇ ಎಂದು ನನಗೆ ಪಶ್ಚಾತ್ತಾಪವಾಯಿತು. ಆದರೆ ತುಸು ಹೊತ್ತಿನಲ್ಲಿಯೆ ತನ್ನ ಜೊತೆಗಾರರನ್ನು ಎಲ್ಲಿಯೋ ಬಿಟ್ಟು ನನ್ನ ಬಳಿಗೆ ಗಣಪತರಾಯರು ಬಂದು ಸಮಾಧಾನವನ್ನುಂಟು ಮಾಡಿದರು.

"ಇದೇನು ವೇಷ ಶಾಮು, ಪಾದ್ರಿಯ ನೌಕರೀ ಮಾಡುತ್ತಾ ಇಲ್ಲವಷ್ಟೇ? ಏನು ಹ್ಯಾಟು ಏನು ಬೂಟು, ನನಗಂತೂ ಒಮ್ಮೆಲೆ ಗುರುತು ಕೂಡ ಹತ್ತಲಿಲ್ಲ" ಗಣಪತರಾಯರು ಸೋಜಿಗವನ್ನು ವ್ಯಕ್ತಪಡಿಸಿದರು.

ಸೋಜಿಗವೇಕೆ? ನಿಜವಾಗಿಯೂ ನಾನು ಪಾದ್ರಿಯ ನೌಕರಿಯನ್ನೇ ಮಾಡುತ್ತಿದ್ದೇನೆ. ಹಿಂದೂ ಸಮಾಜವನ್ನು ಬಿಟ್ಟು ನಾನೀಗ ಕ್ರಿಶ್ಚನ್ನ

ನಾಗಿದ್ದೇನೆ. ಯಾವ ಹಿಂದೂ ಸಮಾಜವು ನನ್ನನ್ನು ಬಹಿಷ್ಕರಿಸಿತೋ ಅಂಥ ಹಿಂದೂ ಸಮಾಜಕ್ಕೆ ನಾನಾದರೂ ಬಹಿಷ್ಕಾರವನ್ನು ಹಾಕಿದ್ದೇನೆ.

ಗಣಪತರಾಯರಿಗೆ ಬಹಳ ವಿಷಾದವೆನಿಸಿತೋ ಏನೊ. ಖಿನ್ನಮುಖಿಗಳಾದರು. ನನಗೆ ನನ್ನ ಬಹಿಷ್ಕಾರದ ಕಾರಣವನ್ನು ವಿವರಿಸಬೇಕೆಂಬ ಹಟವನ್ನು ಹಿಡಿದರು. ನಿರುಪಾಯನಾಗಿ ನಾನು ಬಹಿಷ್ಕಾರದ ಕಥೆಯನ್ನು ಹೇಳತೊಡಗಿದೆ.

" **ಶಾರದೆ**ಯೊಡನೆ ನನ್ನ ವಿವಾಹವಾದ ಸಂಗತಿಯು ತಮಗೆ ಗೊತ್ತೇ ಇದೆ ನನ್ನ ವಿವಾಹವಾದ ತುಸು ದಿನಗಳಲ್ಲಿಯೇ ನಿಮ್ಮ ತಂದೆಯವರಿಗೆ ಬೆಳಗಾವಿಗೆ ವರ್ಗವಾಯಿತು ಅಂದಿನಿಂದ ನಮ್ಮಿಬ್ಬರ ಭೆಟ್ಟಿಯು ಆಗಲಿಲ್ಲ.

ಶಾರದೆಯೊಡನೆ ನನ್ನ ಮದುವೆ ಮಾಡುವ ಇಚ್ಛೆಯು ತಂದೆಯವರ ಮನಸ್ಸಿನಲ್ಲಿ ಎಳ್ಳಷ್ಟು ಇರಲಿಲ್ಲವಾದರೂ ಏನೋ ವಾಡಿಬಿಟ್ಟರು. ಆದರೀಗ ಯಾವಾಗಲೂ ಚಿಂತೆಯಲ್ಲಿ ಮುಳುಗಿರುತ್ತಾರೆ. ತಾಯಿಯು ಸಾಯುವ ಮುಂಚೆ ಶಾರದೆಯೊಡನೆ ನನ್ನ ಮದುವೆ ಮಾಡಲೇಬೇಕೆಂದು ಹೇಳಿದ್ದರಿಂದ ತಂದೆಯವರು ತಮ್ಮ ಮನದ ವಿರುದ್ಧವಿದ್ದರೂ ಒಪ್ಪಬೇಕಾಯಿತು. ಮತ್ತೆ ಯಾರಾದರೂ ಆಗಿದ್ದರೆ ನನ್ನ ಸ್ವರ್ಗಸ್ಥ ಮಾತೆಯ ಆಜ್ಞೆಯನ್ನು ಲೆಕ್ಕಿಸುತ್ತಿರಲಿಲ್ಲ. ಇಷ್ಟಾದಬಳಿಕ ಅವಳ ಕೊನೆಯ ಇಚ್ಛೆಯನ್ನು ಪೂರೈಸದೆ ಇರುವದುಂಟೇ?

ನನ್ನ ಮದುವೆಯಾದಂದಿನಿಂದ ನಮ್ಮ ಜಾತಿಬಾಂಧವರು ನಮ್ಮಲ್ಲಿ ಬರುಹೋಗುವದನ್ನು ನಿಲ್ಲಿಸಿದರು. ನಮ್ಮನ್ನು ತಮ್ಮ ಮನೆಗೆ ಕರೆಯುವದನ್ನು ಕೇಳಲೇಬೇಡಿ. ಇಷ್ಟೇ ಅಲ್ಲ; ನಮ್ಮ ಆಮಂತ್ರಣವನ್ನು ಸ್ವೀಕರಿಸಲಿಕ್ಕೆ ಸಹ ಯಾರೂ ಒಪ್ಪರು. ಇಷ್ಟು ಮಾತ್ರಕ್ಕೆ ಆ ಬಾಂಧವರಿಗೆ ಸಮಾಧಾನವಿಲ್ಲ. ನಮ್ಮ ವಿಷಯವಾಗಿ ಅಲ್ಲದ ಸಲ್ಲದ ವಾರ್ತೆಗಳನ್ನು ಹರಡುವರು. ' ಶಾರದೆಯೊಡನೆ ಮದುವೆಯಾಗಿ ತನ್ನ ತಂದೆಯ ಮೋರೆಗೆ ಮಸಿ ಹಚ್ಚಿದನು. ಶಾರದೆಯು ಜಾತಿಯಿಂದ ಹೊರಗೆ ಇಡಲ್ಪಟ್ಟಿದ್ದಳು. ಅವಳ ತಾಯಿಯು ಯೌವನಾವಸ್ಥೆಯಲ್ಲಿ ಒಬ್ಬ ತರುಣನೊಡನೆ ಸಂಬಂಧ

ಬೆಳೆಸಿದ್ದಳು. ವಿಧವೆಯಾದವಳು ಹೀಗೆ ವರ್ತಿಸುವದುಂಟೇ? ಇಂಥವಳ ಮಗಳನ್ನು ಗಣಪತರಾಯನು ಮದುವೆಯಾಗುವದು ಎಷ್ಟು ಅನ್ಯಾಯವು' ಎಂದು ಮುಂತಾಗಿ ಅನೇಕರು ಹುಯಿಲೆಬ್ಬಿಸಿದರು. ನಮ್ಮ ತಂದೆಯವರ ಕಿವಿಗಳ ಮೇಲೆ ಈ ಸಂಗತಿಗಳು ಬೀಳಲು ದುಃಖಿತರಾಗಿ ಹಣೆಯಮೇಲೆ ಕೈಯಿಕ್ಕಿಕೊಂಡು ಕುಳಿತುಕೊಳ್ಳುವರು. ಶಾರದೆಯು ಅವರಿಗೆ ಎಷ್ಟೋ ಪರಿಪರಿಯಿಂದ ತಿಳಿಸಿ ಹೇಳಿದರೂ ಸಮಾಧಾನವಾಗುತ್ತಿರಲಿಲ್ಲ ಕೊನೆಗೆ ಅವಳು ಭೋರ್ ಎಂದು ಕಂಣೀರಿನ ಹಳ್ಳ ಹರಿಸಿಬಿಡುವಳು.

ಇತ್ತೀಚೆಗೆ ಶಾರದೆಯು ಯಾವಾಗಲೂ ದುಃಖಸಾಗರದಲ್ಲಿಯೇ ಮುಳುಗಿಕೊಂಡಿರುವಳು. ನಾನು ಕಚೇರಿಗೆ ಹೋದಾಗ ಅವಳು ಏನೇನು ಯೋಚಿಸುವಳೋ ಎಷ್ಟೆಂದು ರೋದಿಸುವಳೋ ದೇವರೇಬಲ್ಲ. ಅವಳ ಮುಖದಲ್ಲಿಯ ಆ ಮುಗುಳು ನಗೆಯು, ಕಂಣುಗಳಲ್ಲಿಯ ಆ ದಿವ್ಯತೇಜವು ವಾಣಿಯಲ್ಲಿಯ ಆ ಮಾಧುರ್ಯವು ಎಲ್ಲಿಯೋ ಅಡಗಿ ಹೋಗಿದ್ದವು. ಅವಳು ಎಲ್ಲಿಯಾದರೂ ಕೂತುಕೊಳ್ಳಲಿಕ್ಕೆ ಹೋದರೆ ಪರಿಚಿತರೊಬ್ಬರೂ ಪ್ರೇಮಪೂರ್ವಕವಾಗಿ ಅವಳನ್ನು ಬರಗೊಡುತ್ತಿರಲಿಲ್ಲ. ಇಷ್ಟೇ ಅಲ್ಲ ಅವಳ ಮನಸ್ಸಿಗೆ ಹತ್ತುವಂತೆ ತಮ್ಮತಮ್ಮೊಳಗೆ ಗುಜು ಗುಜು ಮಾತನಾಡಿಕೊಳ್ಳುವರು. ಈ ರೀತಿ ಸಮಾಜವು ತನ್ನನ್ನು ತಿರಸ್ಕರಿಸುವದನ್ನು ಕಂಡು ಶಾರದೆಗೆ ಹೇಳಲಾರದಷ್ಟು ವಿಷಾದವೆನಿಸುತ್ತಿದ್ದಿತು. "ಪರಮೇಶ್ವರಾ, ಕೃತ್ರಿಮ ಬಂಧನಗಳಲ್ಲಿ ಸಿಲುಕಿ ಮನುಷ್ಯತ್ವವನ್ನು ಮರೆತುಬಿಟ್ಟಿರುವಂಥ ಈ ಜಗತ್ತಿನಲ್ಲಿ ನನ್ನಂಥವಳನ್ನು ಏಕೆ ಹುಟ್ಟಿಸಿದೆ?" ಎಂದು ಕಂಣೀರು ತರುವಳು.

ಒಂದು ದಿವಸ ನಾನು ಶಾರದೆಗೆ ಹೇಳಿದೆ. "ಪ್ರಿಯಳೆ ನಿನಗಾಗಿ ನಾನೆಲ್ಲರನ್ನೂ ಬಿಟ್ಟುಕೊಟ್ಟಿದ್ದೇನೆ. ಆದರೂ ನೀನು ಅಧೈರ್ಯಗೊಳ್ಳುತ್ತಿರುವದೇಕೆ? ನೀನು ಹೀಗೆ ದುಃಖಿಸಿ ನನ್ನ ಮನಸ್ಸನ್ನು ಖಿನ್ನನಾಗಿ ಮಾಡಬೇಡ"

ನನ್ನ ಈ ಮಾತುಗಳು ಸಮಾಧಾನದ ಬದಲು ದುಃಖವನ್ನೇ ಉಂಟು ಮಾಡಿದಂತೆ ಕಂಡಿತು.

"ದೇವರು ನನ್ನನ್ನು ಹುಟ್ಟಿಸಿದ್ದು ವ್ಯರ್ಥ ನನ್ನಿಂದ ಸುಖವು ಯಾರಿಗೂ ದೊರಿಯಲಿಲ್ಲ. ನನ್ನ ತಾಯಿಗೆ ನನ್ನಿಂದ ಸುಖದ ಲವಲೇಶ

ವಾದರೂ ದೊರೆಯಲಿಲ್ಲ. ಅತ್ತು ಅತ್ತು ಪ್ರಾಣವನ್ನು ನೀಗಿದಳು. ನಿಮ್ಮಲ್ಲಿ ಬಂದ ಮೇಲೆಯೂ ಅದೇ ಹಾಡು ನಿಮ್ಮ ತಂದೆಯವರಿಗೆ ಜೀವನವು ಭಾರವಾಗಿ ಹೋಗಿ ಅದೇ ಚಿಂತೆಯಲ್ಲಿ ಪರಲೋಕಕ್ಕೆ ಜಾರಿಕೊಂಡರು. ನನ್ನ ದೆಸೆಯಿಂದ ನೀವು ಸಮಾಜವನ್ನು ಬಿಟ್ಟು ಕಾಲಕಳೆಯಬೇಕಾಗಿದೆ. ಎಲ್ಲಕ್ಕೂ ಕಾರಣಳಾದ ನಾನು ಬದುಕಿ ಪ್ರಯೋಜನವಾದರೂ ಏನು? " ಶಾರದೆಯ ಕಂಠವು ಉಕ್ಕೇರಿಬಂದಿತು. ಬಿಕ್ಕಿ ಬಿಕ್ಕಿ ಅಳತೊಡಗಿದಳು. ನನಗಾದರೂ ಅವಳ ದುಃಖವನ್ನು ನೋಡುವದಾಗಲಿಲ್ಲ. ಕರವಸ್ತ್ರದಿಂದ ಆಕೆಯ ಕಂಣೀರನ್ನು ಒರಿಸುತ್ತಾ ಪರಿಪರಿಯಾಗಿ ಸಂತೈಸಿ ನೋಡಿದೆ. ಆದರೆ ಹೆಂಗಸು ಸ್ವಭಾವ. ಸಮಾಧಾನಕ್ಕೆ ಬದಲು ದುಃಖವೇ ಇಮ್ಮಡಿಯಾಗಿ ಹೋಯಿತು. ಇದಕ್ಕೆ ಮೌನವೇ ಮದ್ದೆಂದು ನಾನು ಹೊರಗಡೆ ಎದ್ದು ಹೋದೆ.

ಪರಮೇಶ್ವರನಿಗೆ ಅದೆಷ್ಟು ಕರುಣೆಯೆನಬೇಕು. ಅವಳ ಮೊರೆಯನ್ನು ಕೇಳಿದನೋ ಏನೋ ಎನ್ನುವಂತೆ ತುಸು ದಿವಸಗಳಲ್ಲಿಯೇ ಅವಳನ್ನು ತನ್ನೆಡೆಗೆ ಕರೆದೊಯ್ದನು ನನಗೆ ಮಾತ್ರ ಅವಳ ಈ ಮೃತ್ಯುವಿನಿಂದ ಎದೆಗೆ ಸಿಡಿಲುಬಡೆದವಷ್ಟು ಆಘಾತವಾಯಿತು ಅದೆಷ್ಟು ಯತ್ನಿಸಿದರೂ ಅವಳ ಆ ಕರುಣಾಮಯವಾದ ಮೂರ್ತಿಯ ನೆನಪು ಹೋಗುತ್ತಿರಲಿಲ್ಲ. ಈ ಚಿಂತೆಯ ಬೇಗೆಯಿಂದ ತನ್ನ ಉದ್ಯೋಗವು ಹಾಳಾಗಿ ಹೋಯಿತು. ಮೆಲಧಿಕಾರಿಯದು ನನ್ನ ಮೇಲೆ ಸಿಟ್ಟು ಇದ್ದುದರಿಂದ ನನಗೆ ರಜೆಯೂ ದೊರೆಯಲಿಲ್ಲ ನೌಕರಿಗೆ ಶರಣು ಹೊಡೆದು ಮನೆ ಹಿಡಿದೆನು ಒಬ್ಬಿಬ್ಬರನ್ನು ಬಿಟ್ಟು ನನ್ನನ್ನು ಮಾತಾಡಿಸುವವರು ಯಾರೂ ಇಲ್ಲದ್ದರಿಂದ ಮನೆಯಲ್ಲಿ ತುಂಬಾ ಬೇಜಾರು ಬರುತ್ತಿತ್ತು. ನಾನು ನನ್ನ ಅಸಮಾಧಾನವನ್ನು ಕಳೆದುಕೊಳ್ಳಬೇಕೆಂದು ಶೆರೆ ಕುಡಿಯುವದನ್ನು ಕಲಿತೆನು. ಆಗ ನನಗೇನೋ ಸಮಾಧಾನವಾಯಿತಾದರೂ ಕೊನೆಗೆ ಆ ದುಶ್ಚಟವು ನನ್ನ ಜೀವನವನ್ನು ಹಾಳುಮಾಡಿ ಬಿಟ್ಟಿತು. ಕೂಡಿಟ್ಟ ಹಣವೆಲ್ಲ ಗಡಂಗದ ಪಾಲಾಯಿತು. ತಂದೆ ಕಟ್ಟಿಸಿದ ಮನೆಯನ್ನು ಮಾರಿದೆನು. ಶೆರೆಗುಡುಕರಿಗೆ ಯಾವದು ಸಾಲುವದು? ಎಲ್ಲವನ್ನು ಕಳೆದುಕೊಂಡು ಬೀದಿ ಬೀದಿ ತಿರುಗಾಡುವ ಪ್ರಸಂಗ ನನಗೆ ಬಂದಿತು. ಆದರೆ ಇಷ್ಟರಲ್ಲಿಯೇ

ಸುದೈವದಿಂದ ನನಗೊಬ್ಬ ಡಾಕ್ಟರರ ಪರಿಚಯವಾಯಿತು. ಅವರು ಮೂವತ್ತು ರೂಪಾಯಿ ಸಂಬಳದ ಮೇಲೆ ತಮ್ಮಲ್ಲಿ ಕೆಲಸಕ್ಕೆ ಇಟ್ಟುಕೊಂಡರು. ನಾನು ಅವರ ದವಾಖಾನೆಯ ಬಳಿಯಲ್ಲಿಯೇ ಕೋಣೆಯನ್ನು ಭಾಡಿಗೆ ತೆಗೆದುಕೊಂಡು ಇರತೊಡಗಿದೆನು.

ಅಲ್ಲಿ ವಾಸಿಸುವವರೆಲ್ಲರೂ ಬಹುತರವಾಗಿ ಕ್ರಿಶ್ಚನ್ನರೇ ಇದ್ದರು. ಕೆಲವು ದಿನಗಳಲ್ಲಿಯೇ ನನಗೊಬ್ಬ ಕ್ರಿಶ್ಚನ್ನ ತರುಣಿಯ ಪರಿಚಯವಾಯಿತು. ಅವಳ ಹೆಸರು **ಲೂಸಿ.** ಅವಳು ಒಳ್ಳೇ ರೂಪವತಿ ದಯಾಳು ಹೃದಯ ಆಕೆಯದು. ನಾನಿದ್ದಲ್ಲಿ ಬಂದು ಆಗಾಗ್ಗೆ ಮಾತು-ಕತೆ ಮಾಡುವಳು. ನನಗೂ ಬರಬರುತ್ತ ಅವಳೊಡನೆ ಮಾತನಾಡುವದಕ್ಕೆ ಸಂಕೋಚವೆನಿಸುವದು ಕಡಿಮೆಯಾಯಿತು. ಅವಳೊಡನೆ ಮಾತನಾಡುವಾಗಲೂ, ಅವಳ ಮುಖಕಮಲವನ್ನು ನೋಡುವಾಗಲೂ ಒಂದು ಬಗೆಯ ಮಧುರ ಸುಖವನ್ನು ಅನುಭವಿಸಿದಂತಾಗುತ್ತಿತ್ತು. ಅವಳೊಬ್ಬ ಹಿಂದೂ ಕನ್ಯೆಯೆಂದೂ ತಂದೆ-ತಾಯಿಗಳು ಚಿಕ್ಕಂದಿನಲ್ಲಿಯೇ ತೀರಿಕೊಳ್ಳಲು ಯಾರೂ ಆಶ್ರಯ ಕೊಡದ್ದರಿಂದ ಕ್ರಿಶ್ಚನ್ನ ಧರ್ಮವನ್ನು ಸೇರಬೇಕಾಯಿತೆಂದೂ ನನಗೆ ಹಿಂದಿನಿಂದ ಗೊತ್ತಾಯಿತು. ಈ ಸಂಗತಿ ಗೊತ್ತಾದಮೇಲಂತೂ ಅವಳ ಬಗ್ಗೆ ನನ್ನಲ್ಲಿ ಮತ್ತಿಷ್ಟು ಸಹಾನುಭೂತಿಯು ಉಂಟಾಯಿತು. ನಾನು ಮನದಲ್ಲಿಯೇ ಯೋಚಿಸಿದೆನು :– "ನಮ್ಮ ಸಮಾಜವು ನಮಗೆ ಸ್ಥಾನವನ್ನು ಕೊಡುವದಿಲ್ಲ; ತಿರಸ್ಕಾರವನ್ನು ಮಾಡುತ್ತದೆ ಆದ್ದರಿಂದ ಈ ಸಮಾಜವನ್ನು ಬಿಟ್ಟು ಒಬ್ಬ ಮನುಷ್ಯನು ಮತ್ತೊಬ್ಬ ಮನುಷ್ಯನನ್ನು ಸಹೋದರನೆಂದು ಭಾವಿಸುವ ಬೇರೆ ಸಮಾಜದಲ್ಲಿ ಯಾಕೆ ಸೇರಿಸಿಕೊಳ್ಳಬಾರದು" ಎಂಬ ವಿಚಾರಗಳಿಂದ ನನ್ನ ಮನಸ್ಸು ತುಂಬಿಕೊಂಡಿತು. ಮರುದಿವಸ ಚರ್ಚಿನಲ್ಲಿ ನಾನು ಕ್ರೈಸ್ತಮತವನ್ನು ಸ್ವೀಕರಿಸಿ ಲೂಸಿಯೊಡನೆ ಮದುವೆಯಾದೆನು.

ಶಾಂತಚಿತ್ತನಾಗಿ ನನ್ನ ಬಹಿಷ್ಕಾರ ಕತೆಯನ್ನು ಆಲಿಸುತ್ತಿದ್ದ ನನ್ನ ಮಿತ್ರ ಗಣಪತರಾಯನ ಕಂಣಿನಿಂದ ಅವನಿಗೆ ತಿಳಿದೋ ತಿಳಿಯದೆಯೋ ಕಂಣೀರು ಧಾರೆ ಧಾರೆಯಾಗಿ ಹೋಗುತ್ತಿದ್ದವು.

"ಶಾಮು ನಿನ್ನ ಕರುಣಕತೆಯನ್ನು ಕೇಳಲಾರೆ" ಎಂದು ಹೇಳಿ ನನ್ನನ್ನು ಗಟ್ಟಿಯಾಗಿ ಬಿಗಿದಪ್ಪಿದನು.

# ಕಲಿತ ಹೆಂಡತಿ.

"ಮಗೂ ಸಾವಿತ್ರಿ, ಬೇಗನೆ ಸಿದ್ಧಳಾಗು. ಇನ್ನು ತಡಮಾಡ ಕೂಡದು. ಅಗೋ ಮಾಧವನ ಜೊತೆಗೆ ಆ ಗದುಗಿನ ಮಂದಿಬಂದು ಬಿಟ್ಟರು."

"ಮಾಧವನೇಕಮ್ಮಾ ಅವರ ಜೊತೆಗೆ."

"ಗೋಪಾಲ-ಮಾಧವರಿಬ್ಬರೂ ಕನ್ನಡ ಶಾಲೆಯಲ್ಲಿರುವಾಗ ಕೂಡಿ ಕಲಿತವರು. ಇರಲಿ. ನಾನು ಅವರಿಗೆ ಕಾಲಿಗೆ ನೀರು ಕೊಡುತ್ತೇನೆ. ನೀನು ಬೇಗ ಸಿದ್ಧವಾಗಿ ಕುಳಿತುಕೊ." ತಾಯಿ ಹೊರಟುಹೋದಳು

"ಸಿದ್ಧವಾಗಿ ಕುಳಿತುಕೊಳ್ಳಬೇಕಂತೆ. ದೇವಾ, ಕುಮಾರಿಕೆಯರ ಮೇಲೆ ಇದೆಂಥ ಆಪತ್ಕಾಲವನ್ನು ತಂದೆ. ಅದೆಷ್ಟು ಸಲ ಸಿಂಗರಿಸಿಕೊಳ್ಳ ಬೇಕು? ಸೂಳೆಯರ ಸಂಸಾರಕ್ಕಿಂತಲೂ ಕುಮಾರಿಕೆಯರ ಬಾಳು ಹಾಳಾ ಯಿತೇ ನಿನ್ನ ಪಾಲಿಗೆ. ಪುರುಷರು ಮಾತ್ರ ಹೇಗಿದ್ದರೂ ಮಾನ್ಯ. ಕೇವಲ ಅವರ ಉತ್ಪನ್ನವೊಂದನ್ನು ನೋಡಿ ಮರುಳಾಗುವರಲ್ಲ ನಮ್ಮ ಮೂಢ ಜನರು. ಬಹಳವಾದರೆ ಮೆಟ್ರಿಕ್ಕ ( ಅಥವಾ ಬಿ. ಎ. ) ಪಾಸಾದ ಹುಡುಗ ಬಹಳ ಹುಷಾರಿ ಎಂದು ಬಿಡುತ್ತಾರೆ. ಅವನ ನೀತಿ-ನಡಾವಳಿಗಳನ್ನು ಸೂಕ್ಷ್ಮರೀತಿಯಿಂದ ಯಾರು ನೋಡುವರು? ಉಪಾಯವಿಲ್ಲದೆ ಅವನ ಕೊರಳಿಗೆ ಗಂಟು ಬಿದ್ದ ದುರ್ಭಾಗ್ಯ ಕುಮಾರಿಯೊಬ್ಬಳು ಅವನ ಅನೀತಿ ಯಿಂದ ಸಂಕಟಕ್ಕೆ ಗುರಿಯಾದಾಗ ನೋಡುವಳು. ಅವನಿಗಾಗಿ ದುಃಖ ವನ್ನು ಭೋಗಿಸುವಳು." ಇವೇ ಮೊದಲಾದ ವಿಚಾರಗಳಲ್ಲಿ ಹುದುಗಿ ಕೊಂಡ ಸಾವಿತ್ರಿ ಕಣ್ಣೀರಿನ ಹಳ್ಳವನ್ನು ಹರಿಸತೊಡಗಿದಳು. ಅವಳು ಕುಳಿತುಕೊಂಡುದು ಕೂದಲು ಬಾಚಿಕೊಂಡು ಕುಂಕುಮ ಹಚ್ಚಿಕೊಳ್ಳುವ ದಕ್ಕಾಗಿ. ಆದರೆ ದುಃಖಾವೇಗದಲ್ಲಿ ಆ ಕೆಲಸವು ಹಾಗೇ ಉಳಿದುಬಿಟ್ಟಿತು. ಅವಳಿಗೀಗ ೧೮ ವರುಷ. ನಾಲ್ಕು ವರುಷಗಳಿಂದ ಒಂದೇ ಸವನೇ ಅವಳ

ತಾಯಿ ಲಗ್ನಕ್ಕಾಗಿ ಯತ್ನ ನಡೆಸಿದ್ದಳು. ಅದೆಷ್ಟೋ ಜನ ವರಪಕ್ಷದವರು ಹುಡಿಗೆಯನ್ನು ನೋಡಿಹೋದರು. ಕೆಲವರು ಹುಡಿಗೆ ಕಪ್ಪೆಂದೂ ಕೆಲವರು ವರದಕ್ಷಿಣೆ ಹೆಚ್ಚು ಸಿಗಲಾರದೆಂದೂ ತಿಳಿದು ನಾಪಾಸುಮಾಡಿಬಿಟ್ಟಿದ್ದರು. "ಅಮ್ಮಾ, ಸುಮ್ಮನೆ ನೀನು ಮದುವೆಮಾಡುವದಕ್ಕಾಗಿ ತೊಳಲಾಡಬೇಡ. ನಾನು ಕುಮಾರಿಯಾಗಿಯೇ ಉಳಿದು ನಿನ್ನ ಸೇವೆ ಮಾಡಬೇಕೆನ್ನುವೆನು" ಎಂದು ಅದೆಷ್ಟೋ ಸಲ ಸಾವಿತ್ರಿ ತನ್ನ ತಾಯಿಗೆ ಅರಿಕೆ ಮಾಡಿಕೊಂಡಿದ್ದಳು. ಆದರೆ ತಾಯಿಯು ಕರುಳು ಎಂದಾದರೂ ಸ್ವಾರ್ಥವನ್ನು ನೋಡುವದೇ? "ಜನರೇನೆಂದಾರವ್ವ, ನಾನೇನು ಇಂದು ಸಾಯುತಕ್ಕವಳೋ ನಾಳೆ ಸಾಯುತಕ್ಕವಳೊ ಸಾಯುವ ಮುಂಚೆ ನಿನ್ನ ಮದುವೆಯೊಂದನ್ನು ಮಾಡಿಬಿಟ್ಟರೆ ಗೆದ್ದಂತಾಗುವದು" ಎಂದು ಸಮಾಧಾನಪಡಿಸುವಳು

ವಧೂ ಪರೀಕ್ಷೆಗಾಗಿ ಬಂದವರ ಆದರಸತ್ಕಾರಗಳೆಲ್ಲವೂ ಯಥಾಸಾಂಗವಾಗಿ ನಡೆದವು. ಮಗಳನ್ನು ಕರೆತರುವದಕ್ಕಾಗಿ ತಾಯಿ ಒಳಗೆ ಹೋದಳು. ನೋಡುತ್ತಾಳೆ ಸಾವಿತ್ರಿ ಮೆಲ್ಲಮೆಲ್ಲಗೆ ಬಿಕ್ಕಿ ಅಳತೊಡಗಿದ್ದಳು.

"ಕಂದಾ, ಹೊರಗಡೆ ವರಪಕ್ಷದವರು ನಿನಗಾಗಿ ಕಾದು ಕುಳಿತುಕೊಂಡಿದ್ದಾರೆ. ನೀನು ಹೀಗೆ ಅಳುತ್ತ ಕುಳಿತರೆ ಹೇಗೆ ನೋಡು? ಏಳು ಈ ಕರವಸ್ತ್ರದಿಂದ ಮೋರೆ ಒರಸಿಕೊ."

ಮಾತೆಯು ಆಜ್ಞಾನುಸಾರವಾಗಿ ಮೋರೆಯೊರಿಸಿಕೊಂಡು ಸಾವಿತ್ರಿ ಅವಳ ಜೊತೆಗೆ ಹೊರಗೆ ಹೋದಳು. ರೂಢಿಯಂತೆ ಎಲ್ಲರಿಗೂ ನಮಸ್ಕರಿಸಿ ತನಗಾಗಿ ಕಾದಿಟ್ಟ ಸ್ಥಳದಲ್ಲಿ ಕುಳಿತುಕೊಳ್ಳಲು ಗೋಪಾಲನ ಚಿಕ್ಕಪ್ಪನು ಮಾತಿಗಾರಂಭಿಸಿದನು.

"ತಂಗೀ ನಿನ್ನ ಹೆಸರೇನು?"

"ಸಾವಿತ್ರಿ."

"ನೀನು ಎಲ್ಲಿಯವರೆಗೆ ಓದಿರುವೆ?"

"ಕನ್ನಡ ನಾಲ್ಕು ಇಯತ್ತೆ. ಇಂಗ್ಲೀಷು ಮೂರರ ವರೆಗೆ."

"ನಿನಗೆ ಸ್ಟೋ ಹೊತ್ತಿಸಲಿಕ್ಕೆ ಬರುತ್ತದೇನು?"

"ಇಲ್ಲ. ನಮ್ಮ ಮನೆಯಲ್ಲಿ ಸ್ಟೋ ಇದ್ದರೆ ಬರಬಹುದಾಗಿತ್ತು."

"ಎಂಟು ಕಪ್ಪು ಚಹಾಕ್ಕೆ ಸಕ್ಕರೆ ಎಷ್ಟು ಹಾಕಬೇಕು?"

"ಕ್ಷಮಿಸಿ. ಅದೂ ನನಗೆ ಗೊತ್ತಿಲ್ಲ. ಎಂದಿನಿಂದಲೂ ಎಲ್ಲರೂ ನಮ್ಮಲ್ಲಿ ಹಾಲನ್ನೇ ಕುಡಿಯುತ್ತ ಬಂದಿದ್ದಾರೆ ಚಹಾ ಮಾಡಿಯೇ ಗೊತ್ತಿಲ್ಲ ನಮ್ಮ ಮನೆಯಲ್ಲಿ ಮಾಧವನ ಮಿತ್ರರ ಸಲುವಾಗಿ ಎಂದೋ ಒಂದು ಸಲ ನಮ್ಮ ತಾಯಿ ಮಾಡಿದ್ದಳು. ನನಗೆ ಜ್ಞಾಪಕವಿಲ್ಲ."

"ಯಾವುದಾದರೊಂದು ಹಾಡನ್ನು ಹೇಳು ನೋಡುವಾ"

ಅದೆಷ್ಟೋ ಸಲ ಹೇಳಿ ಅವಳು ಮೌನವಾಗಿಯೇ ಇದ್ದಳು. ತಾಯಿಯು ಬಲುವೆ ಮಾಡಲು ಮೆಲ್ಲಗೆ ಒಂದು ಪದವನ್ನು ಆರಂಭಿಸಿದಳು. ಹೃದಯ ಪೂರ್ವಕವಾಗಿ ಹೇಳತೊಡಗಿದ "ಪೊರೆ ಮಾಧವಾ ದೇವಾ" ಎಂಬ ಪದವು ಮಾಧವನ ಹೃದಯವನ್ನು ಮಾತ್ರ ನಡುಗಿಸಿಬಿಟ್ಟಿತು ನಡುವೇ ಒಂದು ಸಲ ಮಾಧವನ ಕಡೆಗೆ ಮೆಲ್ಲಗೆ ದೃಷ್ಟಿಯನ್ನು ಬೀರಿದಳು ಮಾಧವನಾಗ ಮುಗ್ಧನಾಗಿ ಕುಳಿತುಕೊಂಡಿದ್ದ. ಆವನ ಮೈಮೇಲೆ ಪರಿವೆಯೇ ಇರಲಿಲ್ಲ. ಅವಳು ತನ್ನಲ್ಲಿ ಮೊರೆಯಿಡಬೇಕೆಂದೇ ಈ ಹಾಡು ಹಾಡು ಹಾಡತೊಡಗಿರುವಳೋ ಎಂದೆನ್ನಿಸಿರಬಹುದು ಒಂದೆರಡು ಕಣ್ಣೀರಿನ ಹನಿಗಳು ಕೂಡ ಆತನಿಗೆ ತಿಳಿದೋ ತಿಳಿಯದೆಯೋ ಉದುರಿಹೋದವು.

"ಮಾಧು, ಸುಮ್ಮನೆ ಹಟಹಿಡಿಯಬೇಡ. ಇನ್ನೆಷ್ಟುದಿನ ಅವಿವಾಹಿತನಾಗಿ ಉಳಿಯಬೇಕೆನ್ನುವೆ?'' ಎಂದು ಅದೆಷ್ಟೋ ಸಲ ದೈನ್ಯವಾಗಿ ಕೇಳಿಕೊಳ್ಳುತ್ತಿದ್ದ ಆಕೆಯ ಮಾತುಗಳೇ ಅವನ ಕಣ್ಣೆದುರಿಗೆ ಕಟ್ಟಿದಂತಾಗಿ ಆತನ ಮನಸ್ಸುಗಾಳದ ಕೊಕ್ಕೆಯನ್ನು ಕಚ್ಚಿದ ಮೀನಿನಹಾಗೆ ಆಗಿ ಹೋಯಿತು.

ಸಾವಿತ್ರಿಯ ಪದವು ಕೊನೆಗಂಡಿತು. ಗೋಪಾಲನಿಗೆ ಆ ಪದವೂ ಸರಿಬಂದಂತೆ ಕಾಣಲಿಲ್ಲ. "ಬಾಲಗಂಧರ್ವ" ನಾಟಕ ಪದಗಳ ಮುಂದೆ ಬೇರೆ ಪದವೇ ಇಲ್ಲವೆಂದು ಹೇಳುವವನಿಗೆ ಆಕೆಯ ಈ ಕನ್ನಡ ಪದ್ಯವೆಂತು ಸರಿ ಬರುವದು?

"ಚಹಾ ಮಾಡುವದು ಗೊತ್ತಿಲ್ಲ. ಸ್ಟೋ ಹೊತ್ತಿಸಲಿಕ್ಕೆ ಬರುವದಿಲ್ಲ. ಮೇಲಾಗಿ ಹುಡಿಗೆ ಕಪ್ಪು. ಇಂಥ ಕಗ್ಗ ಹುಡಿಗೆಯನ್ನು ತೆಗೆದುಕೊಂಡ್ರ ಮಾಡುವದೇನು. ಕಲಿತ ಹೆಂಡತಿ ಬೇಕು ನನಗೆ. ಹುಡಿಗೆ ಪಾಸಿಲ್ಲವೆಂದು ಹೇಳಿಬಿಡು'' ಗೋಪಾಲ ತನ್ನ ಕಕ್ಕನಿಗೆ ಹೇಳಿಬಿಟ್ಟ. ಆ ಹುಡಿಗೆಯ ತಾಯಿಯ ಬಳಿಯಲ್ಲಿ ಗಂಟಿದೆಯೆಂದು ಯಾರೋ ಹೇಳಿದ್ದರಂತೆ ಗೋಪಾಲನ್ನ ಕಕ್ಕನಿಗೆ. ದುಡ್ಡಿನ ಆಶೆಗಾಗಿ ಆತನು ಬಂದವನು. ದುಡ್ಡು ಸಿಗುವದೇ ಆಗಿದ್ದರೆ ಹೇಗಾದರೂ ಮಾಡಿ ಲಗ್ನ ಕೂಡಿಸಿಬಿಡುತ್ತಿದ್ದ.

“ಹುಡಿಗಿ ಕಪ್ಪಿದ್ದಾಳೆ. ಚುರುಕೂ ಕಾಣುವದಿಲ್ಲ. ಆದ್ದರಿಂದ ವರ ದಕ್ಷಿಣೆ ಎಷ್ಟು ಕೊಡತಕ್ಕವರು ?”

“ನಾವು ಬಡವರು. ಹಣವೇನೂ ಇಲ್ಲ ನಮ್ಮಲ್ಲಿ. ಇದೊಂದು ಚಿಕ್ಕ ಮನೆಯೇ ನಮ್ಮ ಸೊತ್ತು. ಅದನ್ನು ವರನಿಗೆ ದಾನಮಾಡಿಬಿಡಬಲ್ಲೆ” ಸಾವಿತ್ರಿಯ ತಾಯಿ ಹೇಳಿದಳು.

‘ಛೆ, ಇಂಥ ಕಪ್ಪು ಹುಡಿಗೆಯನ್ನು ಮದುವೆಯಾಗಬೇಕಾದರೆ ವರದಕ್ಷಿಣೆ ಇಲ್ಲದೆ ಒಗೆಹರಿಯುವ ಮಾತೇ ಅಲ್ಲ” ಎಂದು ಹೇಳಿ ಕಕ್ಕ-ಮಕ್ಕಳಿಬ್ಬರೂ ಎದ್ದು ಹೊರಟೇ ಬಿಟ್ಟರು

ಬೇಕೆಂತಲೇ ಸಾವಿತ್ರಿಗೆ ಕೇಳುವಂತೆ ಅವಳ ತಾಯಿಯ ಮುಂದೆ ಮಾಧವನೊಂದು ಮಾತನ್ನು ಹೇಳಿ ಹೋದ.

“ಇನ್ನೂ ಒಂದು ವರವುಂಟು. ನಾಳೆ ಸಾಯಂಕಾಲ ಕರೆದುಕೊಂಡು ಬರುತ್ತೇನೆ. ಸ್ವಲ್ಪ ಹೂವಿನ ಮಾಲೆಗೀಲೆ ಮುಡಿದುಕೊಂಡು ಚನ್ನಾಗಿ ಸಿಂಗರಿಸಿಕೊಳ್ಳಲಿಕ್ಕೆ ಹೇಳಿರಿ ಆಕೆಗೆ ನಿಶ್ಚಯಕ್ಕಾಗಿ ಒಂದು ಹೊಸ ಸೀರೆಯನ್ನು ಕೊಡುತ್ತೇವೆಂದೂ ಹೇಳಿದ್ದಾರೆ. ಮುಂಚಿತವಾಗಿಯೇ ಬೇಡಿಕೊಂಡು ಕಳಿಸಿಕೊಟ್ಟುಬಿಡುತ್ತೇನೆ ನಿಮ್ಮ ಕಡೆಗೆ. ಏನಾದರೂ ಹಂಚಿಕೆ ಮಾಡಿ ನಾಳೆ ಲಗ್ನ ಹೊಂದಿಸಿಬಿಡುವೆನು.”

ಮಾಧವನ ಈ ಮಾತುಗಳು ಸಾವಿತ್ರಿಯ ತಾಯಿಗೆ ಸಂತೋಷವನ್ನುಂಟು ಮಾಡಿದರೂ ಆಕೆಗೆ ಮಾತ್ರ ನಂಜಿನಂತೆ ತೋರುತ್ತಿದ್ದವು ಅಂತೆಯೇ ಆಕೆಯು ಸರ್ರನೆ ಒಳಗೆ ನಡೆದುಬಿಟ್ಟಳು.

ಅಂದು ರಾತ್ರಿ ಮಾಧವನು ಎಷ್ಟು ಯತ್ನಿಸಿದರೂ ನಿದ್ರಾದೇವಿಯು ಆತನಿಗೆ ಒಲಿಯಲೇ ಇಲ್ಲ ವಿಚಾರಗಳ ಮೇಲೆ ವಿಚಾರಗಳು ಬರತೊಡಗಿದವು. ಹಾಗೇಕೆ ಆಗಿರಬಹುದು ? ಸಾವಿತ್ರಿ-ಮಾಧವರ ಸಂಬಂಧವೇನಿರಬಹುದೆಂಬುದನ್ನು ಅರಿತುಕೊಳ್ಳಲು ವಾಚಕರು ಆತುರರಾಗಿರಬಹುದಲ್ಲವೇ ?

ಮಾಧವನು ಅವರ ನೆರೆಮನೆಯಲ್ಲಿಯೇ ಚಿಕ್ಕಂದಿನಿಂದಲೂ ವಾಸಿಸುತ್ತಿದ್ದ. ಆತನಿಗೆ ಈಗ ೨ ವರುಷಗಳಿಂದ ಮಾಳಗುಡ್ಡದ ಕನ್ನಡ ಶಾಲೆಯಲ್ಲಿ ೨೦ ರೂ. ಸಂಬಳವಾಗಿದ್ದಿತು. ಮೊದಲಿದ್ದ ಮನೆ ದೂರಾಗುವದೆಂದು ಆತನು ಶಾಲೆಯ ಹತ್ತಿರವೇ ಹೋಗಿ ಇದ್ದ. ಮಾಧವನೊಳ್ಳೇ ಗುಣಶಾಲಿ

ಹುಡುಗ. ನಾಲ್ಕು ಜನರಿಗೆ ಬೇಕಾದವ ಸಾವಿತ್ರಿಯ ತಂದೆ ಆತನನ್ನು ತುಂಬಾ ಪ್ರೀತಿಸುತ್ತಿದ್ದರು ಕೊರತೆ ಬಿದ್ದಾಗೆಲ್ಲ ಆತನ ಫೀ ಹಣವನ್ನು ಕೂಡ ತುಂಬುತ್ತಿದ್ದರಂತೆ. ಮನೆಯವನಂತೆಯೇ ಆತನನ್ನು ಅವರು ತಿಳಿದ್ಕೊಂಡಿದ್ದರು. ಇವರ ಉಪಕಾರಕ್ಕೆ ಪ್ರತಿಯಾಗಿ ಆತನು ಸಾವಿತ್ರಿಗೆ ನಿತ್ಯವೂ ಪಾಠಹೇಳಿಕೊಡುತ್ತಿದ್ದ. ಮಾಧವನು ಮ್ಯಾಟ್ರಿಕ್ ಪಾಸಾದ ವರುಷವೇ ಸಾವಿತ್ರಿಯ ತಂದೆ ತೀರಿಕೊಂಡಿದ್ದ. ಸಾವಿತ್ರಿ–ಮಾಧವರಿಬ್ಬರೂ ಒಳ್ಳೇ ಸಲುಗೆಯಿಂದ ನಡೆದವರು ಆ ಸಲುಗೆಯನ್ನು ಶಾಶ್ವತವಾಗಿ ಉಳಿಸಬೇಕೆಂದು ಆಕೆಯ ಸಾಹಸ. ದೊಡ್ಡವಳಾಗಿ ಲಗ್ನದ ಪ್ರಸ್ತಾಪ ಬಂದ ಲಾಗಾಯ್ತು ನೀನು ನನ್ನನ್ನು ಲಗ್ನವಾಗಬೇಕೆಂದು ಅನೇಕ ಬಾರಿ ಬಿನ್ನವಿಸಿಕೊಂಡಳು. ಆದರೆ ಎಲ್ಲವೂ ವ್ಯರ್ಥ ಆತನ ವಿಚಾರಗಳೇ ಒಂದು ಬಗೆಯಾಗಿದ್ದವು. ಕೊನೆಯವರೆಗೆ ಬ್ರಹ್ಮಚಾರಿಯಾಗಿ ಉಳಿಯುವ ವಿಚಾರವೇನೂ ಇರಲಿಲ್ಲ. ಇಷ್ಟೇ ಅಲ್ಲ ಆತನು ಸಾವಿತ್ರಿಯನ್ನು ಮನಸಾರೆ ಪ್ರೀತಿಸುತ್ತಲೂ ಇದ್ದ. ಆದರೆ ತಾನು ಬಡವ. ಇಪ್ಪತ್ತು ರೂಪಾಯಿಗಳಲ್ಲಿ ಸಂಸಾರ ಹೇಗೆ ಸಾಗಿಸಬೇಕು? ಹೆಂಡತಿಯನ್ನು ಕಷ್ಟಕ್ಕೆ ಗುರಿಮಾಡಿ ಪಾಪವನ್ನೇಕೆ ಕಟ್ಟಿಕೊಳ್ಳಬೇಕು ಎಂದೆನ್ನುತ್ತಿದ್ದ. ಆದಕ್ಕಾಗಿ ಆತನು ಸಾವಿತ್ರಿಯನ್ನು ಯಾವನೊಬ್ಬ ಇದ್ದುಳ್ಳವನಿಗೆ ಕೊಟ್ಟು ಮದುವೆಮಾಡಿಸಿ ಅವರ ತಂದೆ ತನ್ನ ಮೇಲೆ ಮಾಡಿದಉಪಕಾರ ಋಣದಿಂದ ಮುಕ್ತನಾಗಬೇಕೆಂದು ವಿಚಾರ ನಡೆಸಿದ್ದ ತನ್ನ ಬಾಲ್ಯಮಿತ್ರ ಗೋಪಾಲನಂತಹ ಸುಶಿಕ್ಷಿತನು ಹೀಗೆ ಸಾವಿತ್ರಿಯ ಪರೀಕ್ಷೆಯನ್ನು ಮಾಡಿ ಅವಳ ಹೃದಯಕ್ಕೆ ನೋವನ್ನುಂಟುಮಾಡುವದು ಎಷ್ಟು ಮಾತ್ರವೂ ಸರಿಯಲ್ಲವೆಂದೆನ್ನಿಸಿತು. ಒಪ್ಪಿಗೆ ಕೊಟ್ಟು ಬಿಡಲು ನಿರ್ಧರಿಸಿಕೊಂಡ. ತನ್ನಿಂದ ಮುಂದೆ ಅವಳಿಗೆ ದುಃಖವಾಗಲಿಕ್ಕಿಲ್ಲವಷ್ಟೆ? ಮಕ್ಕಳುಮರಿಗಳ ಪಾಡೇನು? ಈ ಯೋಚನೆಗಳು ಮಾತ್ರ ಆತನನ್ನು ಅಂಟಿಕೊಂಡೇ ಇದ್ದವು. ಹಾಗೂ ಹೀಗೂ ರಾತ್ರಿಯನ್ನು ಕಳೆದನು. ಮರುದಿವಸ ಮಧ್ಯಾಹ್ನವೂ ದಾಟಿತು

ಸಂಜೆ ಮೂರು ಘಂಟೆಯ ಸಮಯ ಸಾವಿತ್ರಿಯ ತಾಯಿ ಪುರಾಣಕ್ಕೆ ಹೋದವಳು ಇನ್ನೂ ಬಂದಿರಲಿಲ್ಲ. ತಾಯಿಯ ಅಪ್ಪಣೆಯ ಮೇರೆಗೆ ಸಾವಿತ್ರಿಯು ಮನಸ್ಸಿಲ್ಲದಿದ್ದರೂ ಮಾಧವನು ಕಳಿಸಿದ ಹೊಸ ಸೀರೆಯನ್ನುಟ್ಟು

ಕೊಂಡಿದ್ದಳು. ಅದೇ ಆಗ ಹಿತ್ತಲ ಮನೆಯಲ್ಲಿ ಹೋಗಿ ತನ್ನ ಅರಿಷಿಣ ಕುಂಕುಮದ ಚಿಕ್ಕಪೆಟ್ಟಿಗೆಯನ್ನೆ ಳೆದುಕೊಂಡಳು. ಅವಳಿಗೆ ಜಡವಾಗಿದ್ದಿತು ತನ್ನ ದೇಹ ಜೀವವೇ ಬೇಸರವಾಗಿ ಹೋಗಿದ್ದಿತು ಬೇಸರಿಕೆಯಿಂದ ಹಿಂಜರಿಯುತ್ತಿದ್ದ ಕೈಗಳಿಗೆ ಶಕ್ತಿಯ ಹುಕುಮನ್ನು ಕೊಟ್ಟು ಕೈಯಲ್ಲಿ ಹಣಿಗೆ ತೆಗೆದುಕೊಂಡು ಬಾಚಿಕೊಳ್ಳತೊಡಗಿದಳು.

'ಸಾಕು ಸಾಕೀ ಹೆಣ್ಣಿನ ಜನುಮ' ಎಂಬ ಪದವು ಸ್ವಯಂ ಸ್ಫೂರ್ತಿಯಿಂದ ತನ್ನಾರೆ ಹೊರಡುತ್ತಲಿದ್ದಿತು ಮುಂಬಾಗಿಲನ್ನು ದೂಡಿ ಮಾಧವನು ಪ್ರವೇಶಿಸಿದನು. ಅವಳು ಒಮ್ಮೆಲೆ ಬೆಚ್ಚಿಬಿದ್ದಳು ಮಾಧವನೆಂದು ತಿಳಿದೊಡನೆ ಅರಿಯದವರಂತೆ ಕೆಳಗೆ ಮೋರೆ ಹಾಕಿಕೊಂಡು ಸುಮ್ಮನೆ ಕುಳಿತುಕೊಂಡಳು.

"ಯಾಕೆ ಬಾಯಿಯವರು ಮಾತನಾಡುವದಿಲ್ಲೆಂದು ಕಾಣುತ್ತದೆ"

ಅವಳು ಮೌನವಾಗಿಯೇ ಇರುವಳು.

'ಈಗಿನಿಂದಲೇ ಹೀಗೆ ಮರೆತು ಬಿಡಹತ್ತಿದರೆ ಮುಂದೆ ಗತಿಯೇನು? ನಾಳೆ ಗಂಡನಮನೆಗೆ ಹೋದ ಬಳಿಕ ನಮ್ಮ ಕಡೆಗೆ ಹಣಿಕಿ ಹಾಕಿ ಸಹ ನೋಡಲಿಕ್ಕಿಲ್ಲ.

ಇನ್ನೂ ಅವಳು ಮೌನವಾಗಿಯೇ ಇರುವಳು ಮಾಧವನ ಈ ಹುಡುಗಾಟದ ಮಾತುಗಳಿಂದ ಮತ್ತಿಷ್ಟು ಅವಳ ದುಃಖಃಕ್ಕೆ ಪುಟಕೊಟ್ಟಂತಾಯಿತು

"ಹೀಗೆ ಮೂಕರಂತೆ ಕುಳಿತುಕೊಂಡು? ನನ್ನ ಪರೀಕ್ಷೆ-ಮಾಡಬೇಕೆಂದಿರುವೆಯೇನು?"

"ಮಾಧವಾ, ನಿನ್ನಂತೆ ನಿಷ್ಠುರಳೆಂದು ಮಾತ್ರ ತಿಳಿಯಬೇಡ. ದೇವರ ದಯದಿಂದ ಮೂಕಳಾಗಿದ್ದರೆ ಅಪಮಾನಕರವಾದ ಈ ಸ್ಥಿತಿಯಾದರೂ ಬರುತ್ತಿರಲಿಲ್ಲ. ಸುಮ್ಮನೆ ನನ್ನನ್ನು ಪೀಡಿಸಬೇಡ ಹೋಗು" ಸಾವಿತ್ರಿ ನುಡಿಯುವಷ್ಟರಲ್ಲಿಯೇ ಇವನು ಹೋದವನಂತೆ ನಟಿಸಿ ನಡುಮನೆಗೆ ಹೋದನು. ಆದರೆ ಮನಸ್ಸೊಂದು ಹೇಳಬೇಕಲ್ಲ. ಹೇಗೆ ಹೋದನೋ ಹಾಗೆಯೇ ಬಂದು ಬಿಟ್ಟನು. ಸಾವಿತ್ರಿ ಆಗ ಅಲ್ಲಿರಲಿಲ್ಲ. ಹಿತ್ತಲದಲ್ಲಿದ್ದ ಪಾರಿಜಾತ ವೃಕ್ಷದ ಅಡಿಯಲ್ಲಿ ಕುಳಿತುಕೊಂಡಿದ್ದಳು. ಮಾಧವನ ಒಂದೊಂದು ಮಾತುಗಳು ಆಕೆಯ ಕಿವಿಗೆ ಕಾದು ಕರಗಿಸಿದ ಸೀಸದಂತೆ ತೋರುತ್ತಿದ್ದವು.

"ಕ್ರೂರ, ಕಠಿಣ— ಮಾಧವಾ, ನೀನೆಷ್ಟು ನಿಷ್ಠುರನಾದೆಯಲ್ಲ? ಪ್ರೇಮ ವಿವಾಹವೆಂದು ಬಡಕೊಳ್ಳುತ್ತಿರುತ್ತಾರೆ ಜನರು. ಆದರೆ ನೀನು ಆಕಸ್ಮಿಕವಾಗಿ ಕೂಡಿದ ಪ್ರೇಮವನ್ನು ಭಂಗಮಾಡಿ ನೀನೇ ನಿನ್ನ ಕೈಯಿಂದ ನನ್ನ ಕೈಗಳನ್ನು ಬೇರೆಯವರ ಕೈಯಲ್ಲಿ ಕೊಡಬೇಕೆನ್ನು ವಿಯಾ?" ಎಂದು ತಲೆ ತಲೆ ಬಡಿದುಕೊಂಡು ಅಳತೊಡಗಿದಳು.

ಮಾಧವನ ಕರುಳು ಉಕ್ಕೇರಿಬಂದಿತು. ಓಡಿಬಂದು "ಸಾವಿತ್ರೀ, ಹೀಗೇಕೆ ಹುಚ್ಚಳಂತ ಮಾಡುವೆ? ನಿನ್ನ ದುಃಖನಿವಾರಣೆಗಾಗಿಯೇ ನಾನಿಲ್ಲಿಗೆ ಬಂದದ್ದು" ಎಂದ.

«ಬೇಡ. ನನ್ನ ದುಃಖವನ್ನು ಹೋಗಲಾಡಿಸುವದು ಬೇಡ. ನೀನು ಯಾವ ಸಿರಿವಂತನ ಕೊರಳಿಗೆ ನನ್ನನ್ನು ಕಟ್ಟಿದರೂ.... ನನ್ನ.... ದುಃಖ..."

ಕುತ್ತಿಗೆ ಬಿಗಿದು ಬಂದು ಮಾತು ಕುಂಠಿತವಾದವು. ಮಾಧವನ್ನು ೧ೀರ ಸಮೀಪಕ್ಕೆ ಹೋಗುವಷ್ಟರಲ್ಲಿಯೇ ಅವಳ ಮೈ ಮೇಲೆ ಪರಿವೆಯೇ ಇರಲಿಲ್ಲ ಅವನು ಅವಳನ್ನು ತನ್ನ ತೊಡೆಯ ಮೇಲೆ ಮಲಗಿಸಿಕೊಂಡು ತನ್ನ ಕರವಸ್ತ್ರದಿಂದ ಕಣ್ಣೀರಿನಿಂದ ಒದ್ದೆಯಾದ ಅವಳ ಗಲ್ಲಗಳನ್ನು ಒರಿಸಿದನು ಗಾಳಿಬೀಸಿ ಉಪಚರಿಸಲು ತುಸು ಹೊತ್ತಿನಲ್ಲಿಯೇ ಎಚ್ಚರಬಂದಿತು ಕಣ್ಣುತೆರೆಯುತ್ತಾಳೆ ತಾನು ಮಾಧವನ ತೊಡೆಯ ಮೇಲೆ.

"ಮಾಧವಾ ನೀನಿನ್ನು ದೊಡ್ಡವನು. ಏಕಾಂತದಲ್ಲಿ ಪರಸ್ತ್ರೀಯ ಳೊಂದಿಗೆ ಹೀಗೆ ವರ್ತಿಸುವದು ಸರಿಯಲ್ಲ" ಎಂದು ನುಡಿದಳು.

"ಇಲ್ಲಿ ಪರಸ್ತ್ರೀಯರು ಯಾರು ಇದ್ದಾರೆ"

"ಇದೇನು ಕೇಳುತ್ತಿರುವೆನು. ನಾನೇನು ಸ್ವಪ್ನದಲ್ಲಿಲ್ಲವಷ್ಟೇ? ಮಾಧವಾ ನಿನ್ನ ಮಾತಿನಮೇಲೆ ನಂಬಿಗೆಯನ್ನಿಡಲಾ? ನೀನು ನನ್ನನ್ನು ಮದುವೆಯಾಗುವದು ಖಂಡಿತವಷ್ಟೇ?"

'ಆಗಬೇಕೆಂದಿರುವೆನು. ಆದರೆ—'

'ಆದರೆ ಎಂಬ ಮಾತನ್ನು ತಿಳಿಸಿ ನನ್ನ ಮನಸ್ಸನ್ನು ನೋಯಿಸಿ ಹೋಗಬೇಕೆಂದು ಮಾಡಿರುವಿಯಾ?' ಸಾವಿತ್ರಿ ಸಿಟ್ಟಿನಿಂದ ದೂರಸಿಡಿದು ನಿಲ್ಲುವಳು.

"ಹಾಗಲ್ಲ ಸಾವಿತ್ರಿ. ನನ್ನ ಮಾತನ್ನಾದರೂ ಕೇಳು. ಲಗ್ನ ಮಾಡಿಕೊಂಡ ಮೇಲೆ ಹೆಂಡತಿಗೆ ಸುಖಕೊಡುವದು ನಮ್ಮ ಕರ್ತವ್ಯವಲ್ಲವೇ? ಆಗಾಗೆ

ಬೆಲೆಯುಳ್ಳ ಹೊಸ ಹೊಸ ಸೀರೆತಂದು ಕೊಡಬೇಕು. ನಾಟಕ-ಸಿನೇಮಾಗಳಿಗೆ ಕರೆದೊಯ್ಯಬೇಕು. ತಿಂಡಿ ತಿನಸು ಪೂರೈಸಬೇಕು. ಅದನ್ನೆಲ್ಲ ಬಿಟ್ಟು ಒಕ್ಕಲಗಿತ್ತಿಯಂತೆ ಮನೆ ಕೆಲಸಕ್ಕಾಗಿ ಮದುವೆ ಮಾಡಿಕೊಳ್ಳುವದು ನನಗೇನೂ ಸರಿದೋರುವದಿಲ್ಲ. ನನಗೆ ಬರತಕ್ಕ ಸಂಬಳ ೨೦ ರೂಪಾಯಿ, ಅಷ್ಟರಲ್ಲಿ ಹಾಲು-ಮೊಸರು ಕಟ್ಟಿಗೆ ಇವೆಲ್ಲಾ ಆಗಬೇಕಾದರೆ ಸಾಕು ಬೇಕಾಗಿ ಹೋಗುತ್ತವೆ. ಅಂದ ಬಳಿಕ ನಿನ್ನನ್ನು ಸುಖಿಯನ್ನಾಗಿ ಹೇಗೆ ಮಾಡಬಲ್ಲೆ ”

“ ಮಾಧೂ, ಅಜ್ಞಾನಿಯಂತೆ ಹೀಗೇನು ಹೇಳುವೆ. ನಿನಗೆ ಇಷ್ಟಾದರೂ ಸಂಬಳ ದೊರೆಯುತ್ತದೆ ಇದೇ ಹೆಚ್ಚಿನದು. ಬರೀ ದಿನಗೂಲಿಮಾಡಿಕೊಂಡು ಸಂಸಾರ ಸಾಗಿಸುವವರು ಅದೆಷ್ಟು ಜನರಿಲ್ಲ ನಾಟಕ-ಸಿನೇಮಾಗಳನ್ನು ಹುಟ್ಟ್ಯಾ ನೋಡದೆ ಇರುವ ಜನರೇನು ಇಲ್ಲವೇ ಏನು ? ಎರಡು ರೂಪಾಯಿ ಬೆಲೆ ಬಾಳುವ ಪತ್ತಲವನ್ನುಟ್ಟರೆ ಮರ್ಯಾದೆ ಹೋಗುವದೇನು ? ಏನಾದರೂ ನೆವಹೇಳಬೇಡ. ಪುರಾಣಕಾಲದ ಸಾವಿತ್ರಿಯು ತನ್ನ ಗಂಡನ ಪ್ರಾಣವನ್ನು ತಂದು ಕೊಟ್ಟಿದ್ದರೆ ಈ ಸಾವಿತ್ರಿಯು ತನ್ನ ಗಂಡನ ಬಡತನವನ್ನು ಹೋಗಲಾಡಿಸಲು ಯತ್ನಿಸದೆ ಇರುವಳೆಂದು ಭಾವಿಸಿದೆಯೇನು ?”

“ ಹಾಗಾದರೆ ಮಾಧವನು ಧನ್ಯನಾದೆನೆನ್ನಬಹುದು ಬಾ, ಸಾವಿತ್ರಿ. ಲಗ್ನದ ನಿಶ್ಚಯವಾಯಿತು. ನಿಶ್ಚಯದ ಸೀರೆ ಕೊಡುವದಿಲ್ಲೇನು ” ಹರ್ಷಯುಕ್ತವಾಗಿ ನುಡಿದನು ಸಾವಿತ್ರಿಗೆ ಹೊಟ್ಟೆತುಂಬ ಆನಂದವೇ ಆನಂದ.

“ ಸೀರೆ ಬೇಡ ದೇಸಿ-ಪರದೇಶಿ ಗೊತ್ತಾಗುವದಿಲ್ಲ. ಬೆಲ್ಲಾ ಕೊಡುತ್ತೇನೆ ” ಎಂದು ಗೋಣಲ್ಲಾಡಿಸುತ್ತ ಆನಂದದಿಂದ ಮಾಧವನನ್ನು ಅಪ್ಪಿಕೊಂಡಳು. ಅಳುವಿನ ಕಡಿಲಿನಿಂದ ಆ ಬೆಲ್ಲ ಉಪ್ಪಾಗಿದ್ದರೂ ಆತನಿಗೆ ಅಮೃತಕ್ಕಿಂತಲೂ ರುಚಿಯಾಗಿ ಹತ್ತಿತು.

ಈ ಹೊಸ ಸೀರೆ ನಿನಗೆ ಚನ್ನಾಗಿ ಒಪ್ಪುತ್ತಿದೆ ನೋಡು ಮಾಧವನು ಬೇಕೆಂತಲೇ ನುಡಿದ. ನಿಃಸ್ಸೀಮವಾದ ಮಮತೆಯ ಮಹಾಸಾಗರದಲ್ಲಿ ತೇಲಾಡುತ್ತಿದ್ದ ಸಾವಿತ್ರಿಯು ತನಗೆ ಯಾರೋ ನೋಡಲಿಕ್ಕೆ ಬರತಕ್ಕವರಿದ್ದಾರೆಂಬ ಸಂಗತಿಯನ್ನು ಮರೆತುಬಿಟ್ಟಿದ್ದಳು. ಹೊಸ ಸೀರೆಯೊಂದೊಡನೆ ನೆನಪಾಯಿತು.

" ಮಾಧವಾ, ಆ ಯಮದೂತರು ಕಳಿಸಿದ ಈ ಸೀರೆಯನ್ನು ಮೊದಲು ಬಿಟ್ಟು ಬರುತ್ತೇನೆ. ಅವರು ಬಂದೊಡನೆ ನೀನು ಏನಾದರೂ ಹೇಳಿ ಅವರನ್ನು ಅಟ್ಟಿಬಿಡು " ಎಂದು ಲಗುಬಗೆಯಿಂದ ಹೊರಡಲನುವಾದಳು.

ಮಾಧವನಿಗೆ ಬಹಳ ವ್ಯಥೆಯಾಯಿತು. ಎಷ್ಟೋ ಜನರು ಬಂದು ಆಕೆಯನ್ನು ನೋಡಿ ನಿರ್ದಯಿಗಳಂತೆ ಮೋರೆ ತಿರುವಿ ಹೋದ ಸಂಗತಿಗಳೆಲ್ಲ ಕಣ್ಣಿಗೆ ಕಟ್ಟಿದಂತಾಗಿ, ಇವೆಲ್ಲಕ್ಕೂ ತಾನೇ ಕಾರಣನಲ್ಲವೇ ಎಂದು ಹಳಿದುಕೊಂಡ.

" ಸಾವಿತ್ರೀ ಸಾಕ್ಷಾತ್ ಆ ಯಮದೂತನೇ ನಿನ್ನೆದುರಿನಲ್ಲಿ ನಿಂತಿದ್ದಾನೆ. ಬೇಡವೆಂದರೂ ಆತನು ಬಿಡಲಾರ. ಯಮನ ಪಾಶವು ಎಂದಿಗೂ ಹುಸಿಹೋಗದೆಂಬುದನ್ನು ಮರತೆಯಾ ? " ಅವಳನ್ನು ಗಟ್ಟಿಯಾಗಿ ಅಪ್ಪಿಕೊಂಡನು.

ತಾಯಿಯ ಒಪ್ಪಿಗೆಯಂತೂ ಇದ್ದೇ ಇದ್ದಿತು. ರೂಢಿಗನುಸರಿಸಿ ಲಗ್ನವಿಧಿಯೂ ಆಗಿಹೋಯಿತು. ಆ ಮಾತಿಗೀಗ ನಾಲ್ಕು ವರುಷ ಸಂದಿರಬಹುದು. ಈಗ ಮೋಹನನೆಂಬ ಪುತ್ರರತ್ನವೊಂದನ್ನು ಹೆತ್ತಿದ್ದಾರೆ.

ಸಾವಿತ್ರಿಯೊಳ್ಳೇ ಕಾರ್ಯದಕ್ಷಳು, ಕಲಾಕೌಶಲ್ಯಗಳಲ್ಲಿ ಕುಶಲಳು. ಇತ್ತೀಚೆಗೆ ಹೊಲಿಗೇ ಕೆಲಸವೊಂದನ್ನು ಉತ್ತಮವಾಗಿ ಕಲಿತುಬಿಟ್ಟಿದ್ದಳು. ಮನೆಯಲ್ಲಿ ಒಂದು ಹೊಲಿಗೆಯ ಯಂತ್ರ. ಹೊಲಿಗೇ ಕೆಲಸ ಕಲಿಯುವದಕ್ಕಾಗಿ ಚಿಕ್ಕಮಕ್ಕಳು ತಂಡತಂಡವಾಗಿ ಬರುತ್ತಿದ್ದರು ತಿಂಗಳಿಗೆ ೩೦ ರೂಪಾಯಿಗಳಿಗೆ ಕಡಿಮೆ ಇರಲಿಲ್ಲ ಆಕೆಯ ಗಳಿಕೆ. ಮಾಧವನಿಗೂ ಈಗ ೪೦ ರೂಪಾಯಿ ಸಂಬಳ. ಮನೆಯಲ್ಲಿ ಚಿಕ್ಕದೊಂದು ವಾಚನಾಲಯ. ಎಳೆ ಮಕ್ಕಳಿಗೆ ಸದ್ವಿದ್ಯೆಯನ್ನು ಕೊಡುವದರಲ್ಲಿಯೂ, ಉದ್ಯೋಗವಂತರನ್ನಾಗಿ ಮಾಡುವದರಲ್ಲಿಯೂ ದಂಪತಿಗಳಿಬ್ಬರಿಗೂ ಆನಂದವಾಗುತ್ತಿದ್ದಿತು. ಆದರ್ಶ ದಂಪತಿಗಳಾಗಿ ಅವರು ಕಾಲಹರಣ ಮಾಡುತ್ತಿದ್ದರು.

ಇಂದು ಸಂಕ್ರಮಣದ ನಿಮಿತ್ತ ಮಾಧವನಿಗೆ ರಜೆ ಇದ್ದಿತು ಸಂಜೆ ೫ ಗಂಟೆಯಾಗಿರಬಹುದು. ಸಾವಿತ್ರಿ-ಮಾಧವರಿಬ್ಬರೂ ತೂಗಮಂಚದ ಮೇಲೆ ವಿಹರಿಸುತ್ತಿದ್ದರು. ಆ ಸುದ್ದಿ ಈ ಸುದ್ದಿ ಎಲ್ಲವೂ ಹೊರಟಿದ್ದವು

" ಸಾವಿತ್ರೀ ನೀನು ನಿಜವಾಗಿ ನುಡಿದಂತೆ ನಡದೆ ದಯವಿಟ್ಟು ಹೆಚ್ಚು ಶ್ರಮವನ್ನು ಮಾತ್ರ ಪಟ್ಟುಕೊಳ್ಳಬೇಡ. ತೊಂದರೆಪಡಬೇಡ. "

“ ತೊಂದರೆ ಎಂಬ ಶಬ್ದವೇ ಗೊತ್ತಿಲ್ಲ ನನಗೆ. ಉದ್ಯೋಗಿಯಾಗಿ ಸಂತೋಷದಿಂದ ಕಾಲಕಳೆಯುವವರಿಗೆ ತೊಂದರೆಯು ಎಂದಿಗೂ ಆಗಲಾರದು” ಎಂದು ಹೇಳಿದಳು.

ಸಮಯಕ್ಕೆ ಸರಿಯಾಗಿ ಅಂಚೆಯವನು ಒಂದು ಕವ್ಹರನ್ನು ಒಗೆದು ಹೋದನು. ಅದು ಗೋಪಾಲನದಾಗಿರಬೇಕೆಂದು ಮಾಧವನು ಅಕ್ಷರದ ಮೇಲಿಂದ ಮೊದಲೇ ತರ್ಕಿಸಿದ್ದನು. ಕವ್ಹರು ಒಡೆದು ಓದತೊಡಗಿದ.

ಗದಗು,

ತಾ. ೧೪-೧-೧೯೩೫.

ಗೆಳೆಯ,

ನಿನ್ನೊಲೆ ಕೈಸೇರಿ ಹಿಡಿಸಲಾರದಷ್ಟು ಆನಂದವಾಯ್ತು. ನೀನು ಸುಖಿಯಾಗಿರುವೆಯೆಂದು ಈ ಮೊದಲೇ ನಾನು ತಿಳಿದುಕೊಂಡಿದ್ದೆ. ಸಂತೋಷ ನಿನ್ನ ಸುಖಮಯವಾದ ಜೀವನಕ್ಕೆ ಕಾರಣಳಾದ ನಿನ್ನ ಮೋಹದ ಮಡದಿಯನ್ನು ನಾನು ತಿರಸ್ಕಾರಪೂರ್ವಕವಾಗಿ ನೋಡಿದ್ದಕ್ಕಾಗಿ ಕ್ಷಮಿಸಲಿಕ್ಕೆ ಅಂಗಲಾಚಿ ಬೇಡಿಕೊಂಡಿದ್ದೇನೆಂದು ಆಕೆಗೆ ತಿಳಿಸು. ಚೈನಿಯಲ್ಲಿ ದುಂದುಗಾರಿಕೆ ಮಾಡಿ ನಿರ್ಧನನಾಗಿ-ನಿರುದ್ಯೋಗಿಯಾಗಿ ಬಳಲುತ್ತಿರುವ ಈ ಸಮಯದಲ್ಲಿ “ಕಲಿತ ಹೆಂಡತಿ” ಎಂಬ ಶಬ್ದದ ಮರ್ಮವು ಸರಿಯಾಗಿ ತಿಳಿಯಿತು. ಯೌವನದ ದಾಂಪತ್ಯದ ಎಳೆಯ ದಿನಗಳನ್ನೆಲ್ಲ ಅವಿಚಾರತನದಲ್ಲಿ ಕಳೆದ್ದುದಕ್ಕಾಗಿ ನನಗೀಗ ತುಂಬಾ ಪಶ್ಚಾತ್ತಾಪವಾಗಿದೆ. ರೂಪ ಹಾಗು ವರದಕ್ಷಿಣೆಗೆ ಮರುಳಾದೆ. ಮ್ಯಾಟ್ರಿಕ್ಕು ಪಾಸಾದವಳೆಂಬ ಮೋಹಕ್ಕೆ ಬಲಿಬಿದ್ದೆ. ಆದರೆ ಈಗ ಆ ಬಣ್ಣದ ಬೀಸಣಿಕೆಗೆ ಯಾರು ಬುದ್ಧಿಯನ್ನು ಹೇಳಬೇಕು? ಪಾಪ! ಅವಳನ್ನು ಹಳಿಯುವದು ನನ್ನದೇ ತಪ್ಪು. ಯಾವ ಕೆಲಸದಲ್ಲಿಯೂ ತೊಡಗಿಸದೆ ಬಣ್ಣದ ಬೀಸಣಿಕೆಯಂತೆ ನನ್ನಂತೆಯೇ ಅವಳನ್ನು ಆಲಸ್ಯಳನ್ನಾಗಿ ಮಾಡಿದವನು ನಾನೇ. ಆದ ಮಾತಿಗೆ ಮಾಡುವದೇನು? ಇಲ್ಲಿ ನನಗೇನೂ ಉದ್ಯೋಗ ದೊರೆಯುವ ಲಕ್ಷಣ ಕಾಣುವದಿಲ್ಲ. ನಿಮ್ಮ ಊರಿಗೇ ನನ್ನ ಬಿಡಾರ ತಗೆದುಕೊಂಡು ಬರಬೇಕೆಂದು ಮಾಡಿರುವೆ. ಎಷ್ಟೆಂದರೂ ನೀನು ಬಲ್ಲವನು, ನಿನ್ನ ಹೆಂಡತಿಯೂ ಹುಷಾರಿ. “ ಕಲಿತ

ಹೆಂಡತಿ" ನಿಮ್ಮ ಸಹವಾಸದಲ್ಲಿದ್ದರೆ ನನ್ನಾಕೆಯೂ ಬಡತನದ ಬಾಳುವೆಯನ್ನೇ ಸವಿಯಾಗಿ ಮಾಡಿಕೊಳ್ಳುವದನ್ನು ಕಲಿಯಬಹುದು. ಯಾವುದಕ್ಕೂ ಓಲೆ ಬರೆ ನಿನ್ನೋಲೆಯ ದಾರಿಯನ್ನೇ ಸಿರೀಕ್ಷಿಸುತ್ತಿರುವ

ನಿನ್ನ ದುರ್ದೈವೀ ಗೆಳೆಯ,

**ಗೋಪಾಲ.**

ಗೋಪಾಲನ ಓಲೆಯೆಂದು ಗೊತ್ತಾದಾಗ, ಸ್ಟೋವ ಹೊತ್ತಿಸಲಿಕ್ಕೂ ಚಹಾ ಮಾಡುವುದಕ್ಕೂ ಬಾರದಿದ್ದುದಕ್ಕಾಗಿ ತನ್ನನ್ನು ತಿರಸ್ಕರಿಸಿ ಆತನು ತೋರಿದ ಅಪಮಾನಕ್ಕಾಗಿ ಸ್ವಲ್ಪ ಕೋಪಭಾವವನ್ನು ತಾಳಿರಬಹುದು ಕ್ಷಣಹೊತ್ತು ಸಾವಿತ್ರಿ ಆದರೆ ಎಷ್ಟೆಂದರೂ ಸ್ತ್ರೀ ಹೃದಯ ಮಾತೃ ಹೃದಯ. ಓಲೆ ಮುಗಿಯುವಷ್ಟರಲ್ಲಿಯೇ ತುಂಬಾ ಕನಿಕರ ಬಂದುಬಿಟ್ಟಿದ್ದಿತು.

"ಅವರಿಬ್ಬರನ್ನೂ ಕರಿಸಿಬಿಡಿರಿ. ಏನಾದರೂ ಮಾಡಲಿಕ್ಕೆ ಬಂದೀತು" ಎಂದು ನುಡಿದಳು.

"**ಕಲಿತ ಹೆಂಡ**ತಿಯೆಂಬ ಪದವಿ ದೊರೆತದ್ದಕ್ಕಾಗಿ ಬಾಯೀಸಾಹೇಬರಿಗೆ ಖುಷಿ ಆದಂತೆ ಕಾಣುತ್ತದೆ" ಮೂದಲಿಸುವ ದನಿಯಲ್ಲಿ ಅವಳ ಮುಂದೆ ಗೋಣು ಮಾಡಿ ಹೇಳತೊಡಗಿದ.

"ಹೌದೂ ಅಂದೆ." ಅವಳೂ ಅಣಿಕಿಸುತ್ತ ಅವನ ಇಮ್ಮಡಿ ಜೋರಿನಿಂದ ಹೇಳತೊಡಗಿದಳು. ಅವರಿಬ್ಬರ ತುಟಿಗಳೂ ಅದೆಷ್ಟುವೇಳೆ ಕಾದಾಡಿದವೋ, ಯಾರು ಸೋತರೋ, ಯಾರು ಗೆದ್ದರೋ ಅಥವಾ ಇನೂ ಈರ್ಷೆಗೆ ಬಿದ್ದು ಹಾಗೇ ಹೋರಾಡುತ್ತಲೇ ಇರುವರೋ ಯಾರು ಬಲ್ಲರು

# ಕಾರ್ಯಸಾಧು

" ಕಲಿತವರ ಹಣೇಬರಹವೇ ಇಷ್ಟು. ದೇವರಿಲ್ಲ, ದಿಂಡರಿಲ್ಲ, ದಾನ-ಧರ್ಮವಿಲ್ಲ, ಸಾಧೂಸಂತರ ಮಹಿಮೆ ಎಷ್ಟೆಂಬುದು ಗೊತ್ತಿರುವಹಾಗಿಲ್ಲ" ತಾವೇ ದೊಡ್ಡ ಪಂಡಿತರೆಂದು ತಿಳಿದುಬಿಡುತ್ತಾರೆ ನೋಡಿದಿರಾ ಈ ಸರೋಜಿನಿಯೂ ನಿಮ್ಮಂತೆಯೇ ಕುಣಿಯುತ್ತಿದ್ದಾಳೆ. ನಾಲ್ಕಾರು ಇಯತ್ತೆ ಓದಿರುವಳೋ ಇಲ್ಲವೋ ಎಂ. ಎ ಪಂಡಿತರ ಹಾಗೆ ದೊಡ್ಡ ದೊಡ್ಡ ಲೆಚ್ಚರ್ರು ಹೇಳುವಳು, ಎಷ್ಟೆಂದರೂ ಅಣ್ಣಂದಿರಂತೆಯೇ ತಂಗಿಯಲ್ಲವೆ ? ''

" ಸಾಕು ಎಷ್ಟಾದು ಹಂಟು ಬಡ್ಕ್ಯೋದು. ಹೊಟ್ಟೆಪಾಡಿಗಾಗಿ ನಾಲ್ಕು ಜನರು ಯಾವನನ್ನಾದರೂ ಒಬ್ಬನನ್ನು ಸಾಧುವಿನ ವೇಷ ಹಾಕಿ ಕೂಡ್ರಿಸಿದ ಮಾತ್ರಕ್ಕೆ ಅವನು ಸಾಧುವಾಗಬಲ್ಲನೇ? ಯಾರಾದರೂ ಒಮ್ಮೆ ಚೆನ್ನಾಗಿ ಕೈತೋರಿಸಿದರೆ ತಿಳಿದೀತು ಸಾಧುವಿನ ಆಟ. " ಮುಂತಾಗಿ ಸತ್ಯಪಾಲನು ಹೇಳುತ್ತಿರುವಷ್ಟರಲ್ಲಿಯೇ " ಸಾಕದು ಕೇಳಲಾರೆ ನಿಮ್ಮ ಅಭದ್ರ ಮಾತುಗಳನ್ನು. ಸುಮ್ಮನೆ ಸಜ್ಜನರನ್ನು ನಿಂದಿಸಿ ಪಾಪ ಕಟ್ಟಿಕೊಳ್ಳಬೇಡಿರಿ. ಬಾರಿಬಾರಿಗೂ ಭೀಮಾನಂದರಿಗೆ ದೇವರ ದರುಶನವಾಗುತ್ತಿದೆಯೆಂದೂ ಆಗಾಗ್ಗೆ ಕನಸಿನಲ್ಲಿ ದೇವರು ಪ್ರತ್ಯಕ್ಷವಾಗುತ್ತಿರುತ್ತಾನೆಂದೂ ಸ್ವಾಮಿಗಳ ಬಳಿಯಲ್ಲಿದ್ದ ವಿಶ್ವಾಸಿಕ ಶಿಷ್ಯರೇ ಹೇಳುತ್ತಾರೆ ಸ್ವಾಮಿಗಳು ಈ ಊರಲ್ಲಿ ಅನೇಕರಿಗೆ ಹೇಳಿದ ಭವಿಷ್ಯಗಳೆಲ್ಲವೂ ಸತ್ಯವಾಗಿ ಬಂದಿವೆ. " ಎಂದು ಸುಶೀಲಾಬಾಯಿ ನುಡಿದಳು.

ಸರೋಜಿನಿಯೂ ನಡುವೇ ಬಾಯಿ ಹಾಕಿ ಕೇಳಿದಳು. "ಅತ್ತಿಗೇ ನೀವು ಇಷ್ಟಾದರೂ ಏಕೆ ವಿಚಾರ ಮಾಡುವದಿಲ್ಲ. ಬಾರಿಬಾರಿಗೂ ಪರಮಾತ್ಮನು ದರ-ಶನವನ್ನು ಕೊಡುತ್ತಿರುವದೇ ಆಗಿದ್ದರೆ ಹೊಟ್ಟೆಗಿಲ್ಲದೆ ಬಳಲುತ್ತಿರುವ ಕೋಟ್ಯಾವಧಿ ಭಾರತೀಯರಿಗೆ ಸುಖವಾಗಿ ಅನ್ನ ದೊರೆಯುವಂತೆ ಮಾಡೆಂದು ಪರಮಾತ್ಮನನ್ನು ಏಕೆ ಬೇಡಿಕೊಳ್ಳಬಾರದು ? ಸಾಧುವಂತೆ ಸಾಧು ಅವನಿಗೆ ತಂಬಾಕದ ಚಟವೇಕೆ ? ಆವನ ಬಳಿಯಲ್ಲಿ ಸೂಳೆಯರ ಸುಳಿದಾಟವೇಕೆ ? ದೊಡ್ಡ ದೊಡ್ಡ ಜರದಂಚಿನ ಪರದೇಶೀ ಧೋತರಗಳೇಕೆ ? "

“ ರಾಜಯೋಗಿಗಳ ಮಾತೇ ಬೇರೆಯಿರುತ್ತದೆ. ಅವರು ಏನು ಮಾಡಿದರೂ ಸೈ. ನಿಷೇಧವೇ ಇಲ್ಲ. ಬಹಳ ದಿವಸಗಳಿಂದಲೂ ನಡೆದು ಬಂದಂತೆ ಅವರು ಮಠದ ರೂಢಿಗನುಸಾರವಾಗಿ ಆ ಸ್ವಾಮಿಗಳ ಪಾದಸೇವೆಗಾಗಿ ಆ ಸೂಳೆಯರು ಇರುತ್ತಾರಂತೆ. ’’

“ ಇರಬಹುದು ಅತ್ತಿಗೆಯವರೇ, ಅವರ ಸೇವೆಗಾಗಿ ಬಂದಿಳಿದ ರಾಧಾಸಾನಿಗೇನೋ ಗಂಡು ಮಗು ಹುಟ್ಟಿರುವದಂತಲ್ಲ ? ಆ ಹುಡುಗನ ಮುಖವು ಸ್ವಾಮಿಗಳ ಮುಖವನ್ನೇ ತುಂಬಾ ಹೋಲುತ್ತಿದೆಯಂತೆ ಇಷ್ಟೇ ಅಲ್ಲ ಸ್ವಾಮಿಗಳ ತರುವಾಯ ಆ ಹುಡುಗನನ್ನೇ ಪಟ್ಟಕ್ಕೆ ಕೂಡಿಸುವದು ನಿಶ್ಚಯವಾಗಿದೆಯೆಂದು ಊರಲ್ಲೆಲ್ಲ ಸುದ್ದಿಯೋ ಸುದ್ದಿ. ಇವರೆಂಥ ಸನ್ಯಾಸಿಗಳವ್ವ ಸರೋಜಿನಿ ಮೂಗು ಮುರಿದಳು.

“ ಛೀ, ಏನಾದರೂ ಬೊಗಳಬೇಡ. ದೊಡ್ಡವರಿಗೆ ಕಂಡ ಕಂಡ ಹಾಗೆ ಮಾತನಾಡಬಾರದು. ಅಂಜನೆಯುನ ಬೆವರಿನ ಹನಿಯಿಂದ ಮಗು ಹುಟ್ಟಿತೆಂದು ಅವನು ಬ್ರಹ್ಮಚರ್ಯ ಭ್ರಷ್ಟನಾದನೇನು ? ಸಾಧುಗಳ ಮಹಿಮೆ ಅಗಾಧವಾದದ್ದಿರುತ್ತದೆ. ಭೀಮಾನಂದರಾದರೂ ಸಾಮಾನ್ಯ ವ್ಯಕ್ತಿಗಳಲ್ಲ. ಮಾರುತಿಯ ಅವತಾರವೇ ಸರಿ. ರಾಧಾಸಾನಿಯ ಮಗನನ್ನೇ ಪಟ್ಟಗಟ್ಟಬೇಕೆಂದು ಕನಸಿನಲ್ಲಿ ದೇವರು ಹೇಳಿರುವನಂತೆ. ಅದರಂತೆ ಅವರು ಮಾಡಬಹುದು. ಇದರಲ್ಲೇನು ತಪ್ಪಿದೆ. ”

ಸುಶೀಲೆ ಸರೋಜಿನಿಯರ ಸಂವಾದಗಳಿಂದ ಸತ್ಯಪಾಲನಿಗೆ ಬೇಜಾರ ಬಂದಿತು. “ ಸರೋಜಿನೀ, ವಿಚಾರಶೂನ್ಯಳಾದ ಅವಳೊಡನೆ ಸುಮ್ಮನೆ ಯಾಕೆ ವಾದಿಸುವೆ? ಮಹಾರಾಜರ ಮುಂದೆ ಕಾಯಿಯೊಡೆದು ಮೂಗು ತಿಕ್ಕಿ ಆರ್ತೀ ದ್ದಾಡಿ ಧನ್ಯಳಾಗಿ ಬರಲೊಲ್ಲಳೇಕೆ. ”

ಸುಶೀಲಾಬಾಯಿ ತನ್ನ ಹಟವನ್ನು ಬಿಡಲಿಲ್ಲ. ಸ್ವಾಮಿಗಳ ದರುಶನ ತೆಗೆದುಕೊಂಡಳು. ನಿತ್ಯವೂ ಸ್ವಾಮಿಗಳ ಬಳಿಯಲ್ಲಿ ಹೋಗಿ ಬರುತ್ತಿದ್ದಳು. ಭೀಮಾನಂದರು ಬೇಗನೆ ಆ ಊರಲ್ಲಿ ಪ್ರತಿಷ್ಠಿತರಾದರು. ಒಳ್ಳೊಳ್ಳೆ ಸುಶಿಕ್ಷಿತರು ಕೂಡ ಅವರ ಮಾತಿಗೆ ಮರುಳಾಗತೊಡಗಿದರು. ನಾಸ್ತಿಕರು ಸಹ ಸ್ವಾಮಿಗಳನ್ನು ಕಾಣಲಿಕ್ಕೆ ಹೋಗುವರು.

ಸಂಜೆಯ ಮೂರು ಗಂಟೆಯ ಸಮಯ. ಸತ್ಯಪಾಲನ ಕಚೇರಿಗಿಂದು ಸಂಕ್ರಮಣದ ಮೂಲಕ ಬಿಡುವು. ಅಂದು ತಾನೇ ಹೊರಟ 'ಸಮಾಜ' ಮಾಸಪತ್ರಿಕೆಯನ್ನು ಕೈಯಲ್ಲಿ ತೆಗೆದುಕೊಂಡು ಅದರಲ್ಲಿಯ 'ದೇವರಿಗೂ ಲಂಚ?' ವೆಂಬ ಕತೆಯನ್ನು ಸರೋಜಿನಿಗೆ ಓದಿ ತೋರಿಸುತ್ತ ಕುಳಿತು ಕೊಂಡಿದ್ದ. ಸತ್ಯಪಾಲನ ಗೆಳೆಯ ಸೋಮನಾಥನು ಅಕಸ್ಮಾತ್ತಾಗಿ ಬಂದನು

"ಸತ್ಯಪಾಲ ಇಂದು ನೀನೂ ಸರೋಜಿನಿ ಇಬ್ಬರೂ ಭೀಮಾನಂದರ ಕಡೆಗೆ ಬರಲೇಬೇಕು. ಇಂದು ಸಂಕ್ರಮಣವಾದ್ದರಿಂದ ಸ್ವಾಮಿಗಳು ಎಲ್ಲರಿಗೂ ವರ್ಷಭವಿಷ್ಯ ಹೇಳುವರಂತೆ. ಭವಿಷ್ಯ ಹೇಳುವದರಲ್ಲಿ ಅವರು ಕುಶಲರೆಂದು ಗೋಪಾಲನು ಕೂಡ ನಿನ್ನೆ ನನಗೆ ಹೇಳಿದನು"

"ಹೆಂಗಸರಂತೆ ನಿನಗೂ ಹುಚ್ಚು ಹಿಡಿಯಿತೇನು? ಗೋಪಾಲನು ಹುಡುಗಾಟಿಕೆ ಮಾಡಿರಬಹುದು. ದುಡ್ಡು ಸೆಳೆಯುವದಕ್ಕಾಗಿ ಸ್ವಾಮಿಗಳದು ಇದೊಂದು ಯುಕ್ತಿ." ಸತ್ಯಪಾಲ ನುಡಿದ.

ಅದೆಷ್ಟೋ ವೇಳೆ ಅವರಿಬ್ಬರಲ್ಲಿಯೂ ಚರ್ಚೆಯಾಯಿತು. ಸರೋಜಿನಿಯೇನೂ ಹೋಗಲಿಕ್ಕೆ ಒಪ್ಪಲಿಲ್ಲ ಸೋಮನಾಥನ ಜೊತೆಗೆ ಸತ್ಯಪಾಲನು ಸಹಜವಾಗಿ ಹೋಗಬೇಕೆಂದು ನಿರ್ಣಯವಾಯಿತು. ಗೂಢವನ್ನಾದರೂ ಅರಿತುಕೊಳ್ಳಲನುವಾಯಿತೆಂದು ಸತ್ಯಪಾಲನು ಅವನ ಜೊತೆಗೆ ಹೋದನು. ಊರಿನ ಅಂಧಶ್ರದ್ಧೆಯ ಜನರಿಂದ ಮಠವು ಕಿಕ್ಕಿರಿದಿದ್ದಿತು ಸ್ವಾಮಿಗಳ ಅಗಾಧ ಚಮತ್ಕಾರಗಳನ್ನು ಕುರಿತು ಅಲ್ಲಿ ಜನರು ಪ್ರಶಂಸೆ ಮಾಡಿಕೊಳ್ಳುತ್ತಾ ಇದ್ದರು. ಮಧ್ಯದಲ್ಲಿ ಭವ್ಯವಾಗಿ ಕಂಗೊಳಿಸುತ್ತಿದ್ದ ಕಿರೀಟಧಾರೀ ಸ್ವಾಮಿಗಳನ್ನು ಕಂಡು ಸಾಕ್ಷಾತ್ ದೇವೇಂದ್ರನೇ ಭೂಲೋಕಕ್ಕೆ ಇಳಿದು ಬಂದಿದ್ದಾನೆ ಎಂದು ಕೆಲವು ಮೂರ್ಖರು ಆಡಿಕೊಳ್ಳುತ್ತಾ ಇದ್ದರು. ಸೋಮನಾಥನು ಸ್ವಾಮಿಗಳ ಜೊತೆಗೆ ಮಾತನಾಡುತ್ತಿದ್ದಾಗ್ಗೆ ಸತ್ಯಪಾಲನು ಸಮೀಪದಲ್ಲಿಯೇ ನಿಂತುಕೊಂಡಿದ್ದನು.

"ಬರ್ರಿ. ಸತ್ಯಪಾಲ. ನಿಮ್ಮನ್ನು ಕಾಣಬೇಕೆಂದು ಮೊನ್ನೆಯೇ ವಿಚಾರ ಮಾಡಿದ್ದೆ. ಯಾಕೆ ನಿಮ್ಮ ತಂಗಿಯು ಊರಲ್ಲಿಲ್ಲವೇನು? ಅವಳನ್ನೂ ಕರೆತರಬೇಕಿತ್ತು? ಅವಳ ಗಂಡನ ಕ್ಷಯರೋಗ ನಿವಾರಣೆಗಾಗಿ ಒಂದು ಉಪಾಯವನ್ನು ಹೇಳುತ್ತೇನೆ ಕೇಳಿರಿ. ಇಂದು ಸಂಜೆಗೆ ಅವರ ಮೇಲಿನ ಶನಿಯ ವಕ್ರವು ಇಲ್ಲದಂತಾಗುತ್ತದೆ. ನಿಮ್ಮ ಭಾವಿಯು ಹತ್ತಿರದಲ್ಲಿರುವ ಆಳಲೇ ಗಿಡದ ಪೂಜೆಯನ್ನು ಮೂರು ದಿವಸ ಮಾಡಿರಿ. ನಿಮ್ಮ ಮೊದಲಿನ

ಹೆಂಡತಿಯು ತೀರಿ ನಾಳಿಗೆ ೧೭ ವರ್ಷಗಳಾಗುತ್ತವೆ. ಅವಳು ಸಿಟ್ಟಿನಿಂದ ಭಾವೀ ಬಿದ್ದು ಸತ್ತದ್ದರಿಂದ ನಾಳಿನ ದಿವಸ ಬ್ರಾಹ್ಮಣರಿಗೆ ಭೋಜನ ಹಾಕಿರಿ. ನಾಳಿನಿಂದ ಆವಳ ಶಾಪವು ಸಂಪೂರ್ಣ ಇಲ್ಲದಂತಾಗುವದು. ಇವಿಷ್ಟು ಸಂಗತಿ ನಿಮಗೆ ತಿಳಿಸಬೇಕೆಂದು ದೇವಾಜ್ಞೆಯಾಗಿದೆ" ಭೀಮಾನಂದರು ಭವಿಷ್ಯವಾಣಿಯನ್ನು ಮುಗಿಸಿದರು

ಸ್ವಾಮಿಗಳ ಆ ವಾಕ್ಪಾಂಡಿತ್ಯವು ಸತ್ಯಪಾಲನಂಥ ವಿಚಾರಶೀಲನನ್ನು ಕೂಡ ದಂಗುಬಡಿಸಿತು ಸತ್ಯಪಾಲನಿಗೆ ತುಂಬಾ ಸೋಜಿಗವೆನಿಸಿತು ನಿಜವಾಗಿಯೂ ಇವನಲ್ಲಿ ದೇವಾಂಶವಿರಬಹುದೇನು? ಹೆಂಡತಿ ಭಾವಿ ಬಿದ್ದ ಸಂಗತಿ ತಂಗಿಯು ಗಂಡನಿಗೆ ಕ್ಷಯರೋಗವಿದ್ದ ಸಂಗತಿ, ಇವೆಲ್ಲಾ ಹೇಗೆ ಗೊತ್ತಾಗಿರಬಹುದು? ಇವೇ ಮೊದಲಾದ ವಿಚಾರಗಳಿಂದ ಆವನ ಮನಸ್ಸು ಅಲ್ಲೋಲ ಕಲ್ಲೋಲವಾಗಿ ಕೊನೆಗೆ ಸ್ವಾಮಿಗಳ ಮುಂದೆ ಸಾಷ್ಟಾಂಗ ನಮಸ್ಕಾರ ಮಾಡಿಸಲಿಕ್ಕೆ ಹಚ್ಚಿತು.

" ಕಲ್ಯಾಣಮಸ್ತು " ಭೀಮಾನಂದರು ವರದಹಸ್ತವನ್ನಿಟ್ಟರು.

ತನ್ನ ಪತಿಯು ತನ್ನ ಮಾರ್ಗವನ್ನೇ ಅವಲಂಬಿಸಿದ್ದುದಕ್ಕಾಗಿ ಅಂದು ಸುಶೀಲೆಗೆ ಹಿಡಿಸಲಾರದಷ್ಟು ಹಿಗ್ಗು!

"ಇಂದಾದರೂ ನನ್ನ ಹೇಳಿಕೆಯು ಸತ್ಯವಾಯಿತೇ? ಯಾಕವ್ವಾ ಸರೋಜಿನಿ. ಇನ್ನು ಮೇಲಾದರೂ ಮಠಕ್ಕೆ ಬಂದು ಸ್ವಾಮಿಗಳ ಸೇವೆ ಮಾಡುವಿಯಾ?"

"ಯಾರಾದರೂ ನಮ್ಮ ಮನೀ ವಿಷಯ ಹೇಳಿಕೊಟ್ಟಿದ್ದಾರು ಹೇಳಿದ್ದಾನು ಭವಿಷ್ಯವಂತೆ ಬೆಂಕೀ ಹಚ್ಲಿ ಆತನ ಭವಿಷ್ಯಕ್ಕೆ ಪ್ರತಿಯೊಬ್ಬರ ಭವಿಷ್ಯವೂ ಅವರವರ ಕೈಯಲ್ಲಿಯೇ ಇರುತ್ತದೆ. ಸತ್ಕಾರ್ಯವನ್ನು ಮಾಡುವವನು ಸದ್ಗತಿಯನ್ನೂ ದುಷ್ಕೃತ್ಯವನ್ನು ಮಾಡುವವನು ದುರ್ಗತಿಯನ್ನೂ ಪಡೆಯುವದು ಸಾಮಾನ್ಯವಾದ ನಿಯಮವೇ ಆಗಿದೆ. ಆತನೇನು ಹೇಳುತ್ತಾನೆ ಹೆಚ್ಚಿನದು?"

ಸುಶೀಲಾಬಾಯಿಯೊಬ್ಬಳೇ ಆಗಿದ್ದರೆ ಹೇಗಾದರೂ ಆಗುತ್ತಿತ್ತು ಸತ್ಯಪಾಲನೂ ಸ್ವಾಮಿಗಳ ಪರಿಯಿಂದಲೇ ಮಾತನಾಡತೊಡಗಿದಬಳಿಕ ಮಾಡುವದೇನು?

"ಈ ವರೆಗೆ ನೀನು ಸ್ವಾಮಿಗಳ ಮುಖವನ್ನು ಕೂಡ ನೋಡಿಲ್ಲ. ಸುಮ್ಮನೆ ಯಾಕೆ ತಿಳಿಯದೆ ಮಾತನಾಡುವೆ. ಮಠದವರೆಗೆ ಬಂದು ನನ್ನ ಮಾತು ಸತ್ಯವೋ ಅಸತ್ಯವೋ ಎಂಬದನ್ನಾದರೂ ನೋಡು·" ಎಂದು ಸತ್ಯಪಾಲನು

ಆವಳಿಗೆ ಉಪದೇಶ ಮಾಡಿದನು. ಅಣ್ಣ ಅತ್ತಿಗೆಯರ ಒತ್ತಾಯಕ್ಕಾಗಿ ಮರುದಿವಸ ಅವಳು ಅವರ ಜೊತೆಗೆ ಮಠಕ್ಕೆ ತೆರಳಿದಳು.

ಮಠದಲ್ಲಿ ಸ್ವಾಮಿಗಳ ಪಾದಪೂಜೆ ನಡೆದಿತ್ತು. ಭಕ್ತರು ಭಜನೆ ಮಾಡುತ್ತಿದ್ದರು. ಸ್ವಾಮಿಗಳ ಪೀಠದ ಬಳಿಯಲ್ಲಿಯೇ ಕುಳಿತುಕೊಂಡು ರಾಧಾಸಾನಿಯು ಅವರ ಕಾಲನ್ನೊತ್ತುತ್ತಿದ್ದಳು. ಸುತ್ತಲೂ ಶಿಷ್ಯರ ತಂಡ

ಸ್ವಾಮಿಗಳನ್ನು ಕಂಡೊಡನೆಯೇ ಸರೋಜಿನಿಗೆ ಒಂದು ಬಗೆಯ ಆಶ್ಚರ್ಯವಾಯಿತು. 'ಖಂಡಿತವಾಗಿಯೂ ಇವನೇ ಮಲ್ಲಪ್ಪನಿರಬಹು ದಷ್ಟೇ ? ಎಂದು ಯೋಚಿಸುತ್ತಿರುವಷ್ಟರಲ್ಲಿಯೇ ಶಿಷ್ಯವರ್ಗದಲ್ಲಿ ಪೈಲ ವಾನನಂತೆ ಕಾಲು ಚಾಚಿ ಕುಳಿತುಕೊಂಡ ಕಲ್ಲಪ್ಪನು ಕಾಣಿಸಿದನು. ಆಗಂತೂ ಅವಳ ಸಂಶಯವು ಉಳಿಯಲೇ ಇಲ್ಲ. ಕಣ್ಣನ್ನು ಕದಲಿಸದೆ ತುಸು ಹೊತ್ತಿನವರೆಗೆ ಸ್ವಾಮಿಯನ್ನೂ ಶಿಷ್ಯರನ್ನೂ ಚೆನ್ನಾಗಿ ನೋಡಿದಳು.

"ಸತ್ಯಪಾಲ, ನಿಮ್ಮ ತಂಗಿಯ ಭವಿಷ್ಯವನ್ನು ಹೇಳಬೇಕೆ ? ಹಿಂದೆ ನಡೆದ ಸಂಗತಿಗಳನ್ನೆಲ್ಲಾ ಹೇಳುತ್ತೇನೆ ಕೇಳಿರಿ'' ಭೀಮಾನಂದರು ನುಡಿದರು.

« ನಿಮ್ಮ ಭವಿಷ್ಯದ ಆವಶ್ಯಕತೆಯೇನೂ ನನಗೆ ಇರುವದಿಲ್ಲ ನಿಮ ಗಿಂತಲೂ ನಾನು ಚೆನ್ನಾಗಿ ಭವಿಷ್ಯ ಹೇಳಬಲ್ಲೆ. ಬೇಕಾದರೆ ನಾನೇ ಹೇಳುತ್ತೇನೆ ಕೇಳಿರಿ ''

ಭೀಮಾನಂದರು ಖೊಳ್ಳೆಂದು ನಕ್ಕು "ಹೇಳು ನೋಡುವಾ" ಎಂದರು

ಸರೋಜಿನಿಯು ಪೀಠದ ಹತ್ತಿರವೇ ಬಂದು ಜನಸಮೂಹದ ಕಡೆಗೆ ಮುಖ ಮಾಡಿಕೊಂಡು ನಿಂತಳು.

'ಕೇಳಿರಿ, ಬಂಧು ಭಗಿನಿಯರೇ. ಕೇಳಿರಿ ಇನ್ನುಮೇಲೆ ಭೀಮಾ ನಂದರಿಗೆ ಶನಿಯ ಬಲವು ಸುರುವಾಗುವದರಿಂದ ಮಲ್ಲಪ್ಪನ ವೇಷ ಹಾಕಿ ಕೊಂಡು ಓಡಿ ಹೋಗಬೇಕಾಗುವದು. ೪-೬ ತಿಂಗಳಿಂದ ನಿಮ್ಮೆಲ್ಲರಿಗೆ ಶನಿಯು ಹತ್ತಿದ್ದರಿಂದ ಇವರು ನಿಮ್ಮ ಹಣ ಸೆಳೆದು ಚೈನೀ ಹೊಡೆದರು. ಜೇಲಿನಿಂದ ಹೊರಗೆ ಬಂದ ಒಳಿಕ ಇವರಿಗೆ ಕಷ್ಟಕಾಲ ಬಂದಿರಬಹುದು ಅಂತೆಯೇ ಈ ಸಾಧುವೇಷ ಧರಿಸಿದ್ದಾರೆ. ಇವರಿಗೆ ಗುರುಬಲವು ಚೆನ್ನಾ ಗಿದ್ದ ಮೂಲಕ ನಿಮ್ಮೆಲ್ಲರ ಕಣ್ಣಲ್ಲಿಯೂ ಚೆನ್ನಾಗಿ ಬಟ್ಟೆ ಒತ್ತಿ 'ಕಾರ್ಯ ಸಾಧು' ನಾಟಕವನ್ನು ಜಯಶಾಲಿಯನ್ನಾಗಿ ಮಾಡಿ ತೋರಿಸಿದರು. "

ಸರೋಜಿನಿಯ ಭಾಷಣಕ್ಕೆ ಆರಂಭವಾದಾಗಲೇ ಗಲಾಟೆಗಾರಂಭ ವಾದದ್ದು ಈಗ ಮತ್ತಿಷ್ಟು ಜೋರಾಯಿತು ಭೀಮಾನಂದರ ಒಬ್ಬ ಕಟ್ಟಾ ಭಕ್ತನು ಮುಂದೆ ಬಂದು “ ಏನಾದರೂ ಹುಚ್ಚರಂತೆ ಬಡಬಡಿಸಿ ಸ್ವಾಮಿ ಗಳ ಹೆಸರಿಗೆ ಕಪ್ಪು ಹಚ್ಚಬೇಡಾ ” ಎಂದು ಗರ್ಜಿಸಿದನು. ಸರೋಜಿ ನಿಯು ಮತ್ತೆ ಹೇಳಲಾರಂಭಿಸಿದಳು:

“ ಶಾಂತರಾಗಿರಿ. ನಾನು ಸ್ವಾಮಿಯ ಮೋರೆಗೆ ಕಪ್ಪು ಹಚ್ಚಲಿಕ್ಕೆ ಬಂದವಳಲ್ಲ ಸ್ವಾಮಿಯು ಮೋಸದಿಂದ ನಿಮ್ಮೆಲ್ಲರ ಮೋರೆಗೆ ಹಚ್ಚಿದ ಕಪ್ಪನ್ನು ಅಳಿಸಲಿಕ್ಕೆ ಬಂದಿದ್ದೇನೆ ” ಎಂದು ನುಡಿದಳು.

ಈ ಎಲ್ಲ ಕೂಗಾಟ ನಡೆಯುವ ಸಂಧಿಯನ್ನು ಸಾಧಿಸಿ ಭೀಮಾನಂ ದರು ತಮ್ಮ ಪರಿವಾರ ಸಹಿತವಾಗಿ ಮೆಲ್ಲನೆ ಪಲಾಯನ ಮಾಡಿಬಿಟ್ಟರು ನೋಡುತ್ತಾರೆ ಸ್ವಾಮಿಗಳೇ ಇಲ್ಲ. ಜನರಿಗೆಲ್ಲ ಸೋಜಿಗವಾಯಿತು.

“ ಸ್ವಾಮಿಗಳು ಓಡಹತ್ತಿದ್ದಾರೆ ” ಬಾಗಿಲಲ್ಲಿ ನಿಂತ ಕೆಲವರು ಕೂಗಿ ಹೇಳಿದರು.

ಜನ ಮರುಳೋ ಜಾತ್ರೆ ಮರುಳೋ ಎಂಬುದು ಸುಳ್ಳಲ್ಲ. ಊರಿಗೆ ಊರೇ ಆ ಸ್ವಾಮಿಯ ವರದ ಹಸ್ತಕ್ಕೆ ಮರುಳಾಗಿತ್ತು. ಎಷ್ಟೋ ಜನರು ಅವರ ಎಂಜಲವನ್ನು ತಿಂದರು. ಅವರ ಹೇಸಿ ಕಾಲನ್ನು ತೊಳೆದ ನೀರು ಕುಡಿದರು. ಸ್ತ್ರೀಯರು ತಮ್ಮ ಪತಿಯ ಸೇವೆಯನ್ನು ಮಾಡಿರಲಿಕ್ಕಿಲ್ಲ. ಅಷ್ಟು ವಿಜೃಂಭಣೆಯಿಂದ ಆ ಸಾಧುವಿನ ಪೂಜೆ ಮಾಡಿದರು ಎಲ್ಲರಿಗೂ ಈಗ ಅದೆಷ್ಟು ವಿಷಾದವಾಗಿರಬಹುದು.

“ ಸರೋಜಿನೀ, ನೀನು ನಿಜವಾಗಿಯೂ ಧನ್ಯಳು. ಇವನ ವೃತ್ತಾಂತ ಗಳೆಲ್ಲ ಹೇಗೆ ತಿಳಿದವು ” ಸುಶೀಲೆ ಸತ್ಯಪಾಲರಿಬ್ಬರೂ ಆತುರದಿಂದ ಕೇಳಿದರು.

“ ಶಾಸನಭಂಗ ಚಳವಳಿಯಲ್ಲಿ ನಾವು ಜೇಲಿಗೆ ಹೋಗಿದ್ದೆವಷ್ಟೇ? ಆಗ ನಮ್ಮ ಬಿಡುಗಡೆಯ ದಿವಸವೇ ಈತನ ಬಿಡುಗಡೆಯೂ ಇದ್ದಿತು. ಈತನು ವಿಜಾಪುರದವನಂತೆ. ಖೂನೀ ಖಟ್ಲೆಯಲ್ಲಿ ಇವನಿಗೆ ೧೫ ವರುಷ ಶಿಕ್ಷೆಯಾಗಿದ್ದಿತು. ಅಕೆಯು ಅವನ ವೃತ್ತಾಂತವನ್ನೆಲ್ಲ ತಿಳಿಸಿದಳು. ಆತನ ಹೆಸರು ಮಲ್ಲಪ್ಪ ಬಿಡುಗಡೆಯ ದಿವಸ ಸುಪರಿಂಟೆಂಡೆಂಟ ಸಾಹೇಬರು ಬರ

ಲಿಕ್ಕೆ ತ್ರಾಸವಾದ್ದರಿಂದ ನಮಗೆ ಎಷ್ಟೋ ಹೊತ್ತು ತಡೆಯಬೇಕಾಯಿತು. ನಾವೆಲ್ಲರೂ ಸ್ತ್ರೀಯರ ಕೋಣೆಯಲ್ಲಿ ಕುಳಿತು ಕೊಂಡಿದ್ದೆವು. ಆಗ ನಾನು ಮಲ್ಲಪ್ಪನನ್ನು ಚೆನ್ನಾಗಿ ನೋಡಿದೆನು ಅಂತೆಯೇ ನನಗೆ ಅವನ ಗುರುತು ಸಿಕ್ಕದ್ದು.''

"ಹಾಗಾದರೆ ಅನೇಕರಿಗೆ ಕೆಲವು ಸಂಗತಿಗಳನ್ನು ಸತ್ಯವಾಗಿ ಹೇಳಿದ ನಲ್ಲ. ಅದು ಹೇಗೆ?'' ಸತ್ಯಪಾಲನು ಮಧ್ಯದಲ್ಲಿಯೇ ಕೇಳಿದನು.

"ಅದರ ಕಾರಣವನ್ನೂ ಹೇಳುತ್ತೇನೆ ಕೇಳು ಮಲ್ಲಪ್ಪನು ಎಷ್ಟೋ ದಿವಸ ನಮ್ಮೂರಲ್ಲಿ ಇದ್ದನಂತೆ. ಅವನು ಚೆನ್ನಾಗಿ ಈಸಬಲ್ಲನು ಬಾವಿಯಲ್ಲಿ ಬಿದ್ದ ಕೊಡಗಳನ್ನು ತೆಗೆಯುವದೇ ಅವನ ವ್ಯವಸಾಯವಾಗಿದ್ದಿತು. ಊರಲ್ಲೆಲ್ಲ ನಳಗಳಾಗಿ ವ್ಯವಸಾಯ ಕಡಿಮೆಯಾಗಲು ತಮ್ಮೂರಿಗೆ ಹೊರಟುಹೋದನು: ನಮ್ಮ ಮೊದಲಿನ ಅತ್ತಿಗೆಯನ್ನು (ಅಣ್ಣನ ಮೊದಲ ಹೆಂಡತಿ) ಬಾವಿಯಿಂದ ತೆಗೆದವನು ಈತನೇ ಅಂತೆ."

ಸತ್ಯಪಾಲನಿಗೆ ಮಲ್ಲಪ್ಪನ ಜೋತಿಷ್ಯ ಶಾಸ್ತ್ರದ ಜ್ಞಾನದ ಬಗ್ಗೆ ಎಲ್ಲವೂ ಪರಿಕೆಯಾಯಿತು. ತಾನು ಕೂಡ ಆ ಕಾರ್ಯ ಸಾಧುವಿನ ಜಾಲದಲ್ಲಿ ಸಿಕ್ಕೆನಲ್ಲ ಎಂದು ಅವನಿಗೆ ತುಂಬಾ ಪಶ್ಚಾತ್ತಾಪವಾಯಿತು.

"ನೋಡಿದೆಯಾ, ಸಾಧುವಿನ ಪರಮಾತ್ಮಸಾಕ್ಷಾತ್ಕಾರದ ಮಹಿಮೆ!" ಹಂಗಿಸುವ ದನಿಯಲ್ಲಿ ಬೇಕೆಂತಲೇ ಸುಶೀಲೆಯನ್ನು ಕುರಿತು ನುಡಿದನು ಪವಳಿಗೀಗ ಜ್ಞಾನಚಕ್ಷುಗಳು ಚೆನ್ನಾಗಿ ಕಾಣತೊಡಗಿದ್ದವು.

"ನೀರಿನ ನೆಲೆ ಕುದುರೆಯ ನೆಲೆ, ........ಮತ್ತೆಂಥದೋ ನೆಲೆಯೆಂದು ಮೊನ್ನೆ ಯಾವುದೋ ಮಾತು ಹೊರಟ ಕಾಲಕ್ಕೆ ತಾವು ಹೇಳುತ್ತಿದ್ದಿರಲ್ಲ ಹಾಗೆಯೇ ಸಾಧುಸಂತರ ನೆಲೆ ಕೂಡ ಹತ್ತುವದು ಅಸಾಧ್ಯವಿದೆ" ಎಂದು ಸುಶೀಲೆ ನುಡಿದಳು.

ಅಂದಿನ ದಿವಸ ಆ ಊರ ತುಂಬ ಈ ಸುದ್ದಿಯೇ ಸುದ್ದಿ! ಅಂದಿನಿಂದ ಆ ಊರವರೆಲ್ಲರೂ ಸಾಧು-ಸಂತರ ಬಗ್ಗೆ ಹುಷಾರಾಗಿರತೊಡಗಿದರು. ಸಾಧುವೆಂದು ಹೇಳಿ ಕಾಶಿ-ರಾಮೇಶ್ವರಕ್ಕೆ ಹೊರಟದ್ದೇನೆನ್ನುವವರಿಗೆಲ್ಲ ಫಜೀತಿಮಾಡಿ ಕಳಿಸತೊಡಗಿದರು

ಪಾಪ! ಸಾಧು-ಸಂತರಿಗೆ ಸಾಡೆಸಾತಿ ಹತ್ತಿತಲ್ಲವೇ?

# ರೈತನ ಸನ್ಯಾಸ

**ಮಾಣಿಕ :**—ಚಿನ್ನಾ ಇಂದು ಸಂಜೆಯೊಳಗಾಗಿ ಹಣ ತಂದುಕೊಡ ಬೇಕು. ಇಲ್ಲದೆ ಹೋದರೆ ನಿನ್ನ ಮೇಲೆ ದಾವೆ ಮಾಡಬೇಕಾಗುವದು· ಇಂದಿಗೆ ನಿನ್ನ ಮುದ್ದತು ಮೀರಿ ಹೋಗುವದು.

**ಚಿನ್ನ :**—ದೇವರೂ ತಮ್ಮಂಥವರು ಹೀಗೆ ಮಾಡಿದರೆ ಉಪಾಯ ವಿಲ್ಲ. ನನ್ನ ದೀನ ಹೀನ ಪರಿಸ್ಥಿತಿಯನ್ನು ತಾವು ಬಲ್ಲವರೇ ಇರುವಿರಿ

ಮಾಣಿಕ :—ಆದೇನೂ ನಡೆಯುವಂತಿಲ್ಲ. ಕೋರ್ಟಿನಲ್ಲಿ ಬೇಕಾ ದದ್ದು ಹೇಳು.

ಸೊಕ್ಕಿದ ಗೂಳಿಯಂತೆ ಮೈಯುಬ್ಬಿಸಿಕೊಂಡು ಮಾಣಿಕನು ಹೊರ ಟುಹೋದನು. ಚಿನ್ನನ ಕಣ್ಣಿನಿಂದ ಧಾರೆಯಾಗಿ ನೀರು ಹರಿಯತೊಡಗಿ ದವು ದೇವಾ ಯಾವ ಅಪರಾಧವನ್ನು ನಾನು ಮಾಡಿ ಈ ರೈತನ ಜನ್ಮ ತಾಳಿದೆನು? ಭೂದೇವಿ ಹಗಲಿರುಳು ದುಡಿದು ದುಡಿದು ಸಣ್ಣಾಗಿ ನಿನ್ನ ಸೇವೆಮಾಡುವ ರೈತನಿಗೆ ಉಪವಾಸ! ಒಡೆಯನಿಗೆ ಸುಖವಾಗಿ ಊಟ! ವಿಚಿತ್ರ ಕಾಲವಿದು! ಚಿನ್ನನು ಬಿಕ್ಕಿ ಬಿಕ್ಕಿ ಅಳತೊಡಗಿದನು ಅಲ್ಲಿಯೇ ಸಮೀಪದಲ್ಲಿದ್ದ ನನಗಾದರೂ ತುಂಬಾ ದುಃಖವಾಯಿತು. ದುಃಖದಲ್ಲಿದ್ದ ವರಿಗೆ ಆಗಲೆ ಮಾತಾಡಿಸಲಿಕ್ಕೆ ಹೋದರೆ ಮತ್ತಿಷ್ಟು ಹೆಚ್ಚು ದುಃಖವಾಗು ವದೆಂದ ತಿಳಿದು ನಾನು ಹಾಗೆಯೇ ಹೊರಟು ಹೋದೆ.

ಚಿನ್ನ ನಾಗೇಶರಾಯರ ಹೊಲದಲ್ಲಿ ದುಡಿಯ ಹತ್ತಿ ಸುಮಾರು ಇಪ್ಪತ್ತು ವರ್ಷಗಳಾಗಿರಬಹುದು. ಇಪ್ಪತ್ತು ವರ್ಷದಲ್ಲಿ ನಾಗೇಶರಾಯರು ಎಷ್ಟೋ ದುಡ್ಡು ಸಂಗ್ರಹಿಸಿದರು- ಬಡ್ಡಿಯ ವ್ಯವಹಾರವನ್ನು ನಡೆಸಿದರು ಎಷ್ಟು ಬೆಳೆಬಂದರೂ ಚಿನ್ನನ ಪಾಲಿಗೆ ಗಂಜೀತಿಳಿ ತಪ್ಪಿದ್ದಲ್ಲ. ಪಾಪ! ಅವನ ಪ್ರಪಂಚವೂ ದೊಡ್ಡದು. ಒಡೆಯರು ಕೊಡುವ ಅಲ್ಪ ಸಂಬಳ ದಿಂದಲೇ ಅವನು ಸಂಸಾರ ಸಾಗಿಸಬೇಕಾಗಿತ್ತು.

ಚಿನ್ನ ನೀಗ ಅಶಕ್ತನಾಗಿದ್ದಾನೆ. ದಮ್ಮು, ಕೆಮ್ಮುಗಳ ಕಾಟಗಳಿಂದ ಆಗಾಗ್ಗೆ ಹಾಸಿಗೆ ಹಿಡಿಯುತ್ತಿದ್ದನು. ಇದು ನಾಗೇಶರಾಯರ ಮಗ ಮಾಣಿಕನಿಗೆ ಸರಿ ಬೀಳಲಿಲ್ಲ. ತನ್ನ ಆಳಿಕೆಯಲ್ಲಿ ಅವನು ಚಿನ್ನನನ್ನು ಕೆಲಸದಿಂದ ದೂರ ಮಾಡಿಬಿಟ್ಟನು. ಇಪ್ಪತ್ತು ವರ್ಷಗಳಿಂದ ಸತತ ಶ್ರಮ ಬಟ್ಟು ಸೇವೆ ಮಾಡಿದ್ದಕ್ಕಾಗಿ ಇದು ಪ್ರತಿಫಲವೆಂದು ಕಾಣುತ್ತದೆ! ವಾಚಕರೇ ಇದೇ ರೀತಿ ನಮ್ಮ ಸಮಾಜದಲ್ಲಿ ಅನ್ಯಾಯಗಳು ನಡೆದಿವೆ ಮಾಡುವದೇನು? ತನ್ನ ಮಗಳ ಮದುವೆಯ ಕಾಲಕ್ಕೆ ಚಿನ್ನನೇನೋ ನಾಗೇಶರಾಯರಿಂದ ನೂರು ರೂಪಾಯಿ ಸಾಲ ತಂದಿದ್ದನಂತೆ. ಅದಕ್ಕಿಂದು ಮಾಣಿಕರಾಯರು ವಸೂಲಿಗೆ ಆರಂಭ ಮಾಡಿದರು ಒಳ್ಳೇ ಉದಾರತನ!

ಮರುದಿವಸ ಬೆಳಿಗ್ಗೆ ನಾನು ಚಿನ್ನನ ಮನೆಗೆ ಹೋದೆ ಬಡವನಾದರೂ ಚಿನ್ನನು ನನ್ನ ಮೇಲೊಂದು ದೊಡ್ಡ ಉಪಕಾರ ಮಾಡಿದ್ದನು. ಆದಕ್ಕಾಗಿ ನಾನು ನನ್ನ ಮಿತ್ರರೊಬ್ಬರಿಂದ ಸಾಲ ತಂದು ಚಿನ್ನನಿಗೆ ಕೊಡಬೇಕೆಂದು ನಿಶ್ಚಯಿಸಿದ್ದೆ.

“ಚಿನ್ನಾ . ಚಿನ್ನಾ” ಕೂಗಿದೆ. ಜೋರಾಗಿ ಕೂಗಿದೆ. ಗುಡಿಸಲಿನ ಒಳಗೆ ನುಗ್ಗಿದೆ ಒಂದು ಹಾಸುಗಲ್ಲ ಮೇಲೆ ತುಂಬಾ ಕ್ಯಾವೀ ತೆಯ್ದಂತೆ ಕಂಡಿತು. ಲಂಗೋಟಿಗೆಂದು ಹರಿದ ಒಂದು ವಸ್ತ್ರದ ತುಂಡಾದರೂ ಅಲ್ಲಿ ಬಿದ್ದಿತ್ತು. ‘ಅಯ್ಯೋ ಚಿನ್ನಾ. ಸನ್ಯಾಸವನ್ನು ತೆಗೆದುಕೊಂಡು ಅದೃಶ್ಯನಾದೆಯಾ?’ ಹೃದಯವು ತುಂಬಿ ಬಂದು ಅದೆಷ್ಟೋ ವೇಳೆ ಆ ಗುಡಿಸಿಲಿನಲ್ಲಿಯೆ ಬಿದ್ದುಕೊಂಡು ರೈತರ ದುರವಸ್ಥೆಯನ್ನು ಕುರಿತು ವಿಚಾರಿಸತೊಡಗಿದೆನು. ಆದರೇನು... ಶ್ರೀಮಂತರೆ!

# ರಾವಬಹದ್ದೂರ

( ಚಿಕ್ಕ ಕತೆ )

ನನಗಾಗ ಸಾಹೇಬರೆಂದರೆ ದೇವರಿಗಿಂತಲೂ ಮಿಗಿಲಾದವರೆಂದು ಭಾವನೆ. ನನಗೊಬ್ಬನಿಗೇ ಯಾಕೆ ನಮ್ಮೂರವರೆಲ್ಲರಿಗೂ ಹ್ಯಾಟ್ ಬೂಟ್ ಹಾಕಿಕೊಂಡು ಟಿಸ್ ಪಿಸ್ ಎನ್ನುತ್ತ ತಿರುಗಾಡುವವರು ದೊಡ್ಡ ಮನುಷ್ಯರೆಂದು ಅನ್ನಿಸುತ್ತಿದ್ದಿತು. ಮುಸಾಫಿರ ಬಂಗ್ಲೆಯಲ್ಲಿ ಯಾವನೊಬ್ಬ ಸಾಹೇಬನು ಬಂದಿಳಿದೊಡನೆ ಮೋಟಾರ ಸುತ್ತಲೂ ನೊಣ ಮುಕರಿದಂತೆ ಜನರೆಲ್ಲರೂ ಸುತ್ತುಗಟ್ಟುತ್ತಿದ್ದರು. ಮೋಟಾರ ಹತ್ತರ ನಿಂತುಕೊಳ್ಳುವಷ್ಟು ನಾನೇನೂ ಕೀಳು ತರಗತಿಯ ಮನುಷ್ಯನಾಗಿರಲಿಲ್ಲ. ಚಹಾ, ರೋಟಿ ಬಿಸ್ಕೀಟು ಮುಂತಾದ ಖಾದ್ಯೋಪಾದ್ಯ ನೈವೇದ್ಯಗಳನ್ನು ತೆಗೆದುಕೊಂಡು ಬಂಗ್ಲೆಯ ಒಳಗಡೆಯಲ್ಲಿಯೇ ನುಗ್ಗುತ್ತಿದ್ದೆನು. ದೇವರ ಮೇಲೆ ಹೂ ತಪ್ಪಬಹುದು-ಬಹುದು ಏಕೆ ಪೂಜೆಪುನಸ್ಕಾರಗಳಿಗೆ ತಿಲಾಂಜಲಿಯನ್ನಿತ್ತು ಎಷ್ಟೋ ವರ್ಷಗಳಾಗಿದ್ದವು ನನಗೆ. ಆದರೆ ಬಂಗ್ಲೆಯಲ್ಲಿ ಬಂದಿಳಿಯುವ ಯಾವ ಸಾಹೇಬನಿಗೂ ನನ್ನ ನೈವೇದ್ಯದ ಎಡೆ ತಪ್ಪಿಲ್ಲ. ಅವರು ನನ್ನನ್ನು ಬಳಿಯಲ್ಲಿ ಕರೆದು ಕುಳ್ಳಿರಿಸಿಕೊಂಡರೆ ಒಳ್ಳೇ ಆನಂದವಾಗುತ್ತಿತ್ತು. ಅವರೊಡನೆ ಮಾತನಾಡಿದೆನಲ್ಲ ಎಂಬ ಜಂಬ. ತಿಂಗಳಗಟ್ಲೆ ನಮ್ಮ ಹಳ್ಳಿಗರ ಮುಂದೆ "ಸಾಹೇಬವಾಕ್ಯ" ಅಂದರೆ ಅವರ ಬಾಯಿಂದ ಬಂದ ಮಾತುಗಳ ವಿಷಯವಾಗಿ ಪಂಟುಬಡಿಯುವದು ನನ್ನ ಉದ್ಯೋಗವಾಗಿದ್ದಿತು. ಉಪ್ಪುಕಾರ ಹಚ್ಚಿ ಮಾತನಾಡುವ ಕುಶಲತೆಯಾದರೂ ಚೆನ್ನಾಗಿ ನನ್ನ ಕೈವಶವಾಗಿದ್ದಿತೆಂದರೆ ಏನೂ ತಪ್ಪಾಗಲಾರದು.

ಹೀಗಾಗಿ ನನ್ನ ಯೋಗ್ಯತೆಯು ಹಳ್ಳಿಗಳಲ್ಲೆಲ್ಲ ಹರಡಿದ್ದಿತು. ಎಲ್ಲರೂ ನನ್ನ ಮುಖಾಂತರ ನ್ಯಾಯನಿಗದಿಗಳನ್ನು ಕೋರ್ಟಿನಲ್ಲ ನಡೆಸಿದರೆ ಲಾಭವಾಗುವದೆಂದು ನಂಬುತ್ತಿದ್ದರು. 'ಲಂಚ' ದೇವತೆಯು ನನ್ನ ಮೇಲೆ

ತುಂಬಾ ಪ್ರಸನ್ನಳಾಗಿದ್ದಳು. ಏನಿಲ್ಲ ಎಂತಿಲ್ಲ ಇಷ್ಟು! ನಾನು ವಕೀಲನಾಗಿದ್ದರಂತೂ ನನ್ನ ಕೈ ಹಿಡಿಯುವವರೇ ಉಳಿಯುತ್ತಿರಲಿಲ್ಲ!

* * * *

ನಮ್ಮೂರು ಕುರ್ತಕೋಟಿ. ಗದಗಿಗೆ ತೀರ ಸಮೀಪ ಅಲ್ಲಿಯ ಗೌಡರು ನಾವಾಗಿದ್ದೆವು. ನಮ್ಮ ತಂದೆ ಬಲು ಜಾಣರು. ಹಾಗೂ ಅತಿ ಜೀನರು. 'ನೊಣ ಚೀಪುವವ' ಯೆಂದು ಅವರಿಗೆ ಅವರ ಜೊತೆಗಾರರು ಹಾಸ್ಯಮಾಡುತ್ತಿದ್ದರು. ಆದರೆ ಅವರಿಗೆ ತಕ್ಕಂತೆ ಅವರ ಮಗ ನಾನಾಗಲಿಲ್ಲ ನಾನು ಬಲು ದುಂದುಗಾರಿಕೆ ಮಾಡುವವ ನನ್ನ ಸಲುವಾಗಿ ನಮ್ಮ ತಂದೆ ಬೇಸತ್ತು ಹೋಗಿದ್ದನು. ಅದೇ ಹೊಟ್ಟೆಯ ಬೇನೆಯಲ್ಲಿ ಎಲ್ಲಿ ಅವರು ಸತ್ತಿರಬಹುದೋ ಎಂದು ನನಗೆ ಇನ್ನೂ ಕೂಡ ಸಂದೇಹ

ಕನ್ನಡ ನಾಲ್ಕು ಇಯತ್ತೆ ಮುಗಿದೊಡನೆ ನಾನು ಗದಗಿನ ಹಾಯಸ್ಕೂಲಿಗೆ ಸೇರಿದೆನು. ಆ ಸ್ಕೂಲಿಗೆ ನಾಲ್ಕಾರು ಕ್ರಿಶ್ಚನ್ನ ಹುಡುಗರೂ ಬರುತ್ತಿದ್ದರು ಸಾಹೇಬರ ವಿಷಯವಾಗಿದ್ದ ನನ್ನ ಭಾವನೆಯನ್ನಂತೂ ಮೇಲೆಯೇ ಹೇಳಿದ್ದೇನಷ್ಟೇ. ನಾನೂ ಸ್ಕೂಲಿನಲ್ಲಿ ಮಿಕ್ಕ ಎಲ್ಲರಿಗಿಂತಲೂ ಕ್ರಿಶ್ಚನ್ನ ಬಾಲಕರೊಡನೆಯೇ ಹೆಚ್ಚು ಸ್ನೇಹ ಬೆಳಿಸಿದೆ ಅಭ್ಯಾಸದ ಮೇಲೆ ನನ್ನ ಲಕ್ಷವು ಇರುತ್ತಿರಲಿಲ್ಲ. ಅವರ ಉಡಿಗೆ-ತೊಡಿಗೆಗಳನ್ನು ನೋಡುತ್ತ ಬೆಪ್ಪನಂತೆ ವರ್ಗದಲ್ಲಿ ಕುಳಿತುಕೊಳ್ಳುತ್ತಿದ್ದೆ ಆ ಸಾಹೇಬ ತೊಡಪುಗಳು ನನ್ನ ಮನವನ್ನು ತುಂಬಾ ಸೆಳೆದುಕೊಂಡವು. ನಾನು ಅಪ್ಪನಿಗೆ ಕಾಟ ಕೊಟ್ಟು ಬೂಟು ಕೊಂಡೆ ಕೆಲವು ದಿವಸಗಳಲ್ಲಿಯೇ ಸೂಟು ಹೊಲಿಸಿದೆ. ಹ್ಯಾಟು ಮಾತ್ರ ಬೇಗನೆ ಸಂಪಾದಿಸಲಿಲ್ಲ. ಕೇಳಲಿಕ್ಕೆ ಧೈರ್ಯ ಬರಲಿಲ್ಲ. ಜನರೇನೆಂದಾರೋ ಎಂಬದೊಂದು ಬೆದರಿಕೆ ಬೇರೆ. ನಮ್ಮಪ್ಪ ಬೇಗನೆ ಸತ್ತು ಹೊದರೆ ಇವೆಲ್ಲಕ್ಕೂ ಸ್ವತಂತ್ರನಾಗಬಹುದಲ್ಲವೆ" ಎಂಬ ಕೀಳು ವಿಚಾರವು ಕೂಡ ಮನದಲ್ಲಿ ಬಾರದೆ ಇರಲಿಲ್ಲ ಇವೆಲ್ಲ ಆ ಸಾಹೇಬ ಪದ್ಧತಿಯೆಂಬ ಮಾಟವು ನನ್ನ ಮೇಲೆ ಮಾಡಿದ ಪ್ರಭಾವ! ಆ ಸಾಹೇಬಮಕ್ಕಳಂತೆ ಅಭ್ಯಾಸಮಾಡುವ ಕುತೂಹಲ ಬುದ್ಧಿ ಮಾತ್ರ ನನ್ನಲ್ಲಿರಲಿಲ್ಲ. ಅವರು ಮಾಟ್ರಿಕ್ ಪಾಸಾಗಿ ನಾಲ್ಕು ವರುಷಗಳಾಗಿದ್ದರೂ ನಾನು 'ಹಾಡಿ

ದ್ದೇ ಹಾಡೋ ಕಿಸಬಾಯಿದಾಸಾ" ಎಂಬಂತೆ ಇನ್ನೂ ಅದರಲ್ಲಿಯೇ ತೊಳಲಾಡುತ್ತಿದ್ದೆ. ಅಷ್ಟರಲ್ಲಿಯೇ ನನ್ನಿಷ್ಟವನ್ನರಿತೋ ಏನೋ ಎಂಬಂತೆ ನನ್ನ ತಂದೆ ಸ್ವರ್ಗಸ್ಥರಾದರು. ಅಷ್ಟೇನೆವಸಾಕಾಯಿತು ನನಗೆ ಕೇಳುವದೇನು ಶಾಲೆಗೆ ಶರಣು ಹೊಡೆದೆನು. ನಮ್ಮ ತಂದೆಯ ತರುವಾಯ ನಮ್ಮೂರ ಪಟೇಲಕಿಯು ನನ್ನದೇ. ಅದರಲ್ಲಿಯೂ ಇಂಗ್ಲೀಷು ಓದಿದ ಸುಧಾರಕ. ಅಂದ ಬಳಿಕ ನನ್ನ ಕೈ ಹಿಡಿದವರಾರು? ನಮ್ಮೂರ ದೊರೆ ಆದೆನು ನಾನು. ದೊರೆಯಾದೊಡನೆಯೇ ಕಿರೀಟ ಧರಿಸಲು ಸ್ವತಂತ್ರನಾದೆನೆಂದೆನಿಸಿತು. ಕಿರೀಟವೆಂದರೆ ಬೇರೆ ಏನೂ ಅಲ್ಲ. ಮೊದಲಿನಿಂದಲೂ ನಾನು ಬಯಸುತ್ತಿದ್ದ ಸಾಹೇಬರ ಟೊಪ್ಪಿಗೆ! ಅದಕ್ಕೆ ಇಂಗ್ಲೀಷದಲ್ಲಿ ಹ್ಯಾಟ್ (Hat) ಎನ್ನುತ್ತಾರೆ ನಮ್ಮ ಹಳ್ಳಿಯವರು ಬುಟ್ಟಿಯೆನ್ನುತ್ತಿದ್ದರು. ಕಿರೀಟ ಒಂದನ್ನೇ ಯಾಕೆ ಯುರೋಪಿಯನ್ನ ಸಾಹೇಬರನ್ನು ಮೀರಿಸುವಷ್ಟು ಉಡಿಗೆ ತೊಡಿಗೆಗಳನ್ನು ಕೂಡ ತಂದುಕೊಂಡೆ. ಆ ಮೇಲೆ ಮೊದಲಿದ್ದ ಮನೆ ನನಗೆ ತುಚ್ಛವೆನಿಸಿತು. ಒಂದು ಬಂಗ್ಲೆ ಕಟ್ಟಿಸಿ ಅದಕ್ಕೆ ಮುಂದೆ ಬಾಗಬಾಗಾಯತ್ತು ಮೊದಲಾದವುಗಳನ್ನು ಮಾಡಿಸಿ ಅದರಲ್ಲಿ ಇರತೊಡಗಿದೆ. ನನಗೆ ಯಾವ ಕೊರತೆಯೂ ಉಳಿಯಲಿಲ್ಲ ಕೈಯೊಳಗೆ ಬೇಕಾದಷ್ಟು ಜನ ದಾಸದಾಸಿಯರು ಗಂಟೆ ಬಾರಿಸಿದೊಡನೆ "ಸರಕಾರ" ಎಂದು ಮುಂದೆ ಬಂದು ಸಿದ್ಧರಾಗಿರುತ್ತಿದ್ದರು ಇದೆಲ್ಲ ನಿಜ. ಆದರೆ ಒಂದು ವಿಷಯದಲ್ಲಿ ಮಾತ್ರ ನನಗೆ ಯುರೋಪಿಯನ್ನರನ್ನು ಸರಿಗಟ್ಟುವದಾಗಲಿಲ್ಲ. ಯಾಕಂದರೆ ನಾನು ಕಪ್ಪುವರ್ಣದವ ಎಷ್ಟು ಬಗೆಯ ಬಿಳಿ ಹುಡಿಗಳನ್ನು ಬಡಿದುಕೊಳ್ಳುತ್ತಿದ್ದೆನಾದರೂ ಅವರಷ್ಟು ಕೆಂಪಗೆ ಮಾತ್ರ ಕಾಣುತ್ತಿರಲಿಲ್ಲ. ಅದನ್ನುಳಿದು ಬೇರೆ ಯಾವ ವಿಷಯದಲ್ಲಿಯೂ ನನ್ನಲ್ಲಿ ಕುಂದಿರಲಿಲ್ಲ. ಕೆಂಪು ಮೋರೆಯವರನ್ನು ಕಂಡರೆ ಹಳ್ಳಿಯವರು ಹೇಗೆ ಬೆದರುವರೋ ಹಾಗೆಯೇ ನನ್ನನ್ನು ಕಂಡರೂ ಬೆದರುವರು. ನನ್ನ ಮಾತುಗಳೇನು ಸಾಮಾನ್ಯವಲ್ಲ. ಕರುಳು ಕೊಯ್ಯುವಂಥ ಕಠೋರವಾದ ಮಾತುಗಳು. ಅಧಿಕಾರವನ್ನಾದರೂ ಜೋರಾಗಿ ನಡಿಸುತ್ತಿದ್ದೆ. ನಾನಾಡಿದ ಮಾತೇ ಮಾನ್ಯವಾಗಬೇಕು ಇಲ್ಲದಿದ್ದರೆ ನನ್ನ ಕಣ್ಣು ಕೆಂಪೇರುತ್ತಿದ್ದವು. ಹಳ್ಳಿಗರ ವಿಷಯವಾಗಿ ಕೊಂಚವೂ ಕೂಡ ಉದಾರಬುದ್ಧಿ ನನ್ನಲ್ಲಿರಲಿಲ್ಲ. ಅವರು ಉಪ

ವಾಸ ಸಾಯುತ್ತಿರುವದನ್ನು ಕಣ್ಣಾರೆ ಕಂಡರೂ ಅವರಿಗೆ ಗೋಳಾಟ ಕೊಟ್ಟೇ ತೀರುತ್ತಿದ್ದೆನು. ನಮ್ಮ ಹಳ್ಳಿಯಲ್ಲಿ ನನ್ನ ಗೋಳಾಟದ ಜಾಲ ದಲ್ಲಿ ಶಿಲುಕದೆ ಇದ್ದವರು ವಿರಳ. ಹಳ್ಳಿಗರನ್ನು ಸುಲಿಗೆ ಮಾಡುವದರಲ್ಲಿ ಅಗ್ರಸ್ಥಾನವು ನನಗೇ ದೊರೆತಿತ್ತೆನ್ನಬಹುದು. ಬಲಾತ್ಕಾರ ಮಾಡಿ ಅವ ರಿಂದ ಲಂಚ ವಸೂಲು ಮಾಡುತ್ತಿದ್ದೆನು. ಇಷ್ಟೆಲ್ಲ ಜೋರು ಮಾಡುತ್ತಿದ್ದೆ ನೆಂದು. ನಾನೊಬ್ಬ ವೀರ ಬಹದ್ದೂರನೆಂದು ಮಾತ್ರ ಯಾರೂ ತಿಳಿಯ ಬೇಡಿ! ಹಳ್ಳಿಯ ಕೆಂಚರ ಮುಂದೆಯೇ ನನ್ನೆಲ್ಲ ಅಧಿಕಾರ. ಸರಕಾರೀ ಅಧಿಕಾರಿಗಳೆದುರಿನಲ್ಲಿಯೂ ಸಾಹೇಬರೆದುರಿನಲ್ಲಿಯೂ ನಾಯಿಯಂತಿರು ತ್ತಿದ್ದೆ. ಅವರ ಮಾತಿಗೆ ಮರುಳಾಗಿ ಅವರು ಹೇಳಿದಷ್ಟು ಹಣ ಸುರುವು ತ್ತಿದ್ದೆ. ಹೇಗಾದರೂ ಮಾಡಿ "ರಾವಸಾಹೇಬ" ಅಥವಾ "ರಾವಬಹ ದ್ದೂರ" ಎಂಬ ಪದವಿಯನ್ನು ಸಂಪಾದಿಸಬೇಕೆಂದು ಎಂದಿನಿಂದಲೂ ಯತ್ನಿ ಸುತ್ತ ಇದ್ದೆ. ಅಧಿಕಾರಿಗಳಿಂದ ಪ್ರತಿಷ್ಠೆ ಪಡೆಯಬೇಕೆಂದು ಎಲ್ಲ ಬಗೆಯಿಂ ದಲೂ ಅವರ ಸೇವೆ ಮಾಡುತ್ತಿದ್ದೆ, ಅವರನ್ನು ಪೂಜಿಸುತ್ತಿದ್ದೆ, ವಕೀಲ ರಂತೂ ನನ್ನ ಹೆಸರಿನಿಂದ ದಿನಾಲು ಹಾಲುತುಪ್ಪ ತಿನ್ನುತ್ತಿದ್ದರು. ಅವ ರೆಲ್ಲರ ದಲಾಲನಾಗಿದ್ದೆನೆನ್ನಬಹುದು ನಾನು. ವಕೀಲರ ಪಾಲಿಗೆ ದಲಾಲ ನಾಗಿದ್ದೆನಾದರೂ ರೈತರ ಪಾಲಿಗೆ ನಾನು ಕೊಲೆಗಡಕ! ದರೋಡೆಖೋರ! ವಕೀಲರಿಗೂ ಅಮಲದಾರರಿಗೂ ನಾನು ತಿನ್ನಿಸುತ್ತಿದ್ದುದು ಹಾಲುತುಪ್ಪ ವಲ್ಲ! ಅನ್ನಅನ್ನವೆಂದು ಬಾಯ್ಬಿಡುತ್ತ ದೈನ್ಯಾವಸ್ಥೆಯಿಂದ ತೊಳಲಾಡು ತ್ತಿರುವ ಬಡಜನರ ಬಡಕಾದ ಶರೀರದೊಳಗಿನ ರಕ್ತದ ಹನಿ! ಅಯ್ಯೋ, ನನಗೆ ಈಗ ಇದು ತಿಳಿಯುತ್ತಿದೆ. ವಿಲಾಸಮದದಲ್ಲಿ ಕುರುಡನಾಗದಿದ್ದರೆ ಇಂಥ ಪಾಪವನ್ನು ಮಾಡುತ್ತಿರಲಿಲ್ಲವೇನೋ! ಅಯ್ಯೋ ಅದೆಲ್ಲನಿಜ ಮಾಡ ಲೇನು? ಏಟು ಬಿದ್ದ ಹಾಗೆಲ್ಲ ಬುದ್ಧಿ ಬರುತ್ತಲಿದೆ. ಆದರೆ ಇಂಥ ಬುದ್ಧಿಯ ಪ್ರಯೋಜನವಾದರೂ ಏನು? ಎಲ್ಲರೂ ಸರಕಾರದ ನಾಯಿ, ಸರಕಾರದ ನಾಯಿ ಎಂದು ಕರೆದು ಹುಚ್ಚು ಹಿಡಿಸಿಬಿಟ್ಟಿರುವರಲ್ಲ. ಬೀದಿ ಯಲ್ಲಿ ಓಡಾಡುವದೇ ಪೇಚಾಗಿದೆ. ಚಿಕ್ಕ ಮಕ್ಕಳನ್ನು ಮೊದಲ್ಗೊಂಡು ಮುದುಕರವರೆಗೂ "ಸರಕಾರದ ನಾಯಿ" ಎಂದು ನನಗೆ ಕೂಗದೆ ಇದ್ದ ವರಿಲ್ಲ. ಸರಕಾರೀ ಅಧಿಕಾರಿಗಳಾದರೂ ಸುಮ್ಮನಿರುವರೋ ಇಲ್ಲ! 'ನಾಯಿ'

ಎಂದು ಕೂಗುವದಿಲ್ಲವೆನ್ನೋ ನಿಜ. ಆದರೆ ನಾಯಿಗಿಂತ ಕಡೆಯಾಗಿ ನಡೆಸಿಕೊಳ್ಳುತ್ತಿದ್ದಾರೆ. ಇದೆಲ್ಲ ನಾನುಗೈದ ಮನೆಮುರಕತನದ ಫಲವಾಗಿದೆಯಲ್ಲವೆ? ಹೆಂಡತಿಯಾದರೂ ಗಂಡನೆಂಬ ಸಂಬಂಧದಿಂದಾದರೂ ನಾನು ಹೇಳಿದಂತೆ ಕೇಳಿಕೊಂಡು ನಡೆಯಬೇಡವೇ? ಕೇಳಬೇಡಿ! ಅವಳು ಕೂಡ ಎಲ್ಲ ಕೆಲಸಗಳಲ್ಲಿಯೂ ನನ್ನ ವಿರುದ್ಧವೇ ವರ್ತಿಸುವಳು. ಅಯ್ಯೋ ನನ್ನ ಹೆಂಡತಿಯ ನೆನಪನ್ನು ತೆಗೆದೊಡನೆ ತುಂಬಾ ಖೇದವಾಗುತ್ತದೆ. ಕೋಮಲ ಹೃದಯದ ಕಾಂತೆಯನ್ನು ವಿಚಾರವಿಲ್ಲದೆ ಹೊಡೆದು ಉಪವಾಸ ಕೆಡವಿದ ನನ್ನನ್ನು ನಾಯಿ ಎಂದು ಜನರು ಕರೆಯುವದೇನಾಶ್ಚರ್ಯ? ಬರೀ ನಾಯಿಯಲ್ಲ, ನಾನು ಹುಚ್ಚನಾಯಿ। ಹೆಂಡತಿಯನ್ನು ಹೊಡೆಯುವಾಗಿನ ಸನ್ನಿವೇಶಗಳನ್ನರಿತುಕೊಳ್ಳಲು ವಾಚಕರು ಉತ್ಸುಕರಾಗಿರಬಹುದಲ್ಲವೇ? ಕೇಳಿ ನಿಮ್ಮ ಸಲುವಾಗಿ ಕಷ್ಟಪಟ್ಟು ಉಸುರ್ಗರೆಯುವೆನು. ಮಧ್ಯದಲ್ಲಿಯೇ ಕುಂಠಿತವಾದರೆ ಕ್ಷಮಿಸಿರಿ.

ನನ್ನ ಹೆಂಡತಿ ಒಳ್ಳೇ ಚಲುವೆ. ಬಂಗಾರವರ್ಣದ ಮೈಬಣ್ಣ. ಈಗ ತಾನೆ ಅರಳಿದ ಗುಲಾಬೀ ಬಣ್ಣದಂತೆ ಕಂಗೊಳಿಸುವ ತೇಜಃಪೂರಿತ ಕಪೋಲಗಳು. ಮೈಸೂರ ತಾಂಬೂಲವನ್ನು ಮೆದ್ದಂತೆ ಕಾಣುವ ಹವಳದುಟಗಳು. ಸಾಕು! ಎಷ್ಟು ವರ್ಣನೆ ಮಾಡಿದರೂ ಮುಗಿಯದವಳ ಸೌಂದರ್ಯದ ಮಹಿಮೆ. ನಾನೇ ನನ್ನ ಹೆಂಡತಿಯ ರೂಪನ್ನು ವರ್ಣಿಸಿದರೆ ನಕ್ಕುಬಿಟ್ಟೀರಿ. ಸುರೂಪಿಯಿದ್ದಂತೆ ಸುಗುಣಿಯೂ ಇದ್ದಳು ಸಾರಾಸಾರ ವಿಚಾರಗಳಲ್ಲಿ ನುರಿತವಳು. ಒಳ್ಳೇ ಕರುಣಾಳು ಹೃದಯ ಆಕೆಯದು. ನಾನು ಬಡವರನ್ನು ಪೀಡಿಸುತ್ತಿದ್ದೆ; ಅವಳು ಪ್ರೀತಿಸುತ್ತಿದ್ದಳು. ನಾನು ಭೋಗವೃತ್ತಿಯವನು. ಅವಳು ತ್ಯಾಗವೃತ್ತಿಯವಳು. ಇಷ್ಟೇ ನಮ್ಮಿಬ್ಬರಲ್ಲಿಯ ವೈಷಮ್ಯ. ಇದಕ್ಕಾಗಿಯೇ ಆಗಾಗ್ಗೆ ನಮ್ಮಿಬ್ಬರಲ್ಲಿಯೂ ಕಲಹ ನನ್ನ ದುರಾಗ್ರಹತನವನ್ನು ಸಾಧಿಸುವದಕ್ಕಾಗಿ ಅವಳನ್ನು ಅನೇಕಸಲ ಬಾಸಾಳು ಮೂಡುವಂತೆ ಹೊಡೆದಿರುವೆನು. ಆದರೂ ಅವಳು ಬೇರೆಯವರ ಮುಂದೆ ಈ ವಿಷಯವನ್ನು ಪಿಟ್ಟೆಂದು ಒಡೆನುಡಿದಿಲ್ಲ.

‡ ‡ ‡ ‡

ಒಂದುದಿನ ಮಧ್ಯಾಹ್ನ ೧೧ ಘಂಟೆಗೆ ಖಾದೀ ಮಾರುವವನೊಬ್ಬನು ನಮ್ಮ ಮನೆಗೆ ಬಂದ. ನಾನು ಮನೆಯಲ್ಲಿರಲಿಲ್ಲ. "ಖಾದಿ ಬೇಕೇನಮ್ಮ" ಯೆಂದು ನನ್ನ ಹೆಂಡತಿಯನ್ನು ಕೇಳಿದ ಆವಳಿಗೆ ಖಾದಿಯೆಂದರೆ ಬಹಳ ಆದರ. ನನ್ನ ಬೆದರಿಕೆಗಾಗಿ ಸುಮ್ಮನಿರುತ್ತಿದ್ದಳು. ಇಂದು ನಾನಿಲ್ಲದ ಮೂಲಕ ಅವಳಿಗೆ ಅನುವು ದೊರೆಯಿತೋ ಎನೋ, ಖಾದೀಮಾರುವವ ನನ್ನು ಆದರದಿಂದ ಬರಮಾಡಿಕೊಂಡಳು ಒಂದೆರಡು ರೂಪಾಯಿಗಳ ಖಾದೀಬಟ್ಟೆಯನ್ನಾದರೂ ಕೊಂಡಳು.

"ಅಮ್ಮಾ ನಾನು ಪರಸ್ಥಳದವನು ಮಧ್ಯಾಹ್ನದ ಊಟವನ್ನೊಂದು ನಿಮ್ಮಲ್ಲಿ ಹಾಕುವಿರಾ" ಎಂದು ವಿನಯಪೂರ್ವಕವಾಗಿ ಆ ಖಾದಿಯವನು ಬೇಡಿಕೊಂಡ.

"ಯಾಕಾಗಲೊಲ್ಲದು, ಕಾಲು ತೊಳೆಯಲು ನೀರು ತಂದು ಕೊಡು ತ್ತೇನೆ ಕುಳಿತುಕೊಳ್ಳಿರಿ" ಎಂದು ನನ್ನಾಕೆ ಹೇಳುತ್ತಿರುವಷ್ಟರಲ್ಲಿಯೇ ರುದ್ರಾವತಾರವನ್ನು ಧರಿಸಿಕೊಂಡು ನಾನು ಮನೆಯ ಒಳಕ್ಕೆ ಬಂದೆನು ಖಾದೀ ಉಡುಪಿನಲ್ಲಿದ್ದ ಖಾದೀ ಮಾರುವವನನ್ನು ಕಂಡು ನನಗೆ ಕೋಪ ಬಂದಿತು.

"ಕಾಲು ತೊಳೆಯಲಿಕ್ಕೆ ನೀರು ತರಬೇಡ ಕಾಲಿಗೆ ತೊಡಿಸಲು ಬೇಡಿ ಗಳನ್ನು ತರುವೆನು ನಿಲ್ಲು" ಎಂದು ಕೆರಳಿದ ಸಿಂಹನಂತೆ ಹೆಂಡತಿಯ ಮೇಲೆ ಹರಿಹಾಯ್ದೆನು.

"ಪಾಪ! ಯಾವ ಅಪರಾಧಕ್ಕಾಗಿ ಬೇಡೀ ತೊಡಿಸಬೇಕೆನ್ನುವಿರಿ? ಅವರೇನು ಕಳವು ಮಾಡಿರುವರೇ. ಹಳ್ಳಿಯ ಬಡಬಗ್ಗರು ತಯಾರಿಸಿದ ಖಾದೀ ಮಾರುವದು ಕೂಡ ಅಪರಾಧವೇ? ಎಂದು ಮರುಗುವ ದನಿ ಯಲ್ಲಿ ನನ್ನ ಹೆಂಡತಿ ನುಡಿದಳು. ಆದಾವುದನ್ನೂ ನಾನು ಲೆಕ್ಕಿಸಲಿಲ್ಲ.

"ಹಸಿದಿದ್ದಾರೆ ಮೊದಲು ಅವರಿಗೆ ಊಟಕ್ಕೆ ನೀಡುವೆ. ಆ ಬಳಿಕ ನಿಮ್ಮ ಇಷ್ಟ ಬಂದ ಹಾಗೆ ಮಾಡಲೊಲ್ಲಿರೇಕೆ?" ಎಂದು ಪರಿಪರಿಯಾಗಿ ನನ್ನಾಕೆ ಬೇಡಿಕೊಂಡರೂ ಕೇಳದೆ ಓಲೇಕಾರನನ್ನು ಕರೆಸಿ ಆ ಖಾದೀ ಮಾರುವವನನ್ನು ಚಾವಡಿಗೆ ಕಳಿಸಿಬಿಟ್ಟೆ.

ಮರುದಿವಸ ಆ ಖಾದೀ ಮಾರುವವನನ್ನು ತಾಲೂಕ ಕಚೇರಿಗೆ ಕರೆದೊಯ್ದು ಅವನ ಹತ್ತಿರ ಕರಪತ್ರ ಸಿಕ್ಕನೆಂದು ಸುಮ್ಮನೇ ಸುಳ್ಳು ಹೇಳಿಬಿಟ್ಟೆನು. ಇಷ್ಟೆಲ್ಲ ಮಾಡಿದುದು ನನ್ನ ಪ್ರತಿಷ್ಠೆಯನ್ನು ಬೆಳಿಸಿಕೊಳ್ಳುವದಕ್ಕಾಗಿ. ಆದರೆ ' ಸುಳ್ಳಿಗೆ ಸುಖವಿಲ್ಲ ' ವೆಂಬಂತೆ ನನ್ನ ಹಂಚಿಕೆಯುಲ್ಲವೂ ಮಿಂಚಿನಂತಾಗಿ ಹೋಯಿತು. ಮಾಮುಲೇದಾರರಿಗೆ ಆ ಖಾದೀ ಮಾರುವವನ ಮೇಲೆ ಪೂರ್ಣ ವಿಶ್ವಾಸ ಅವನು ತೀರ ಬಡವನಿದ್ದು ಖಾದೀಮಾರುವದರಿಂದಲೇ ಹೊಟ್ಟೆ ಹೊರಕೊಳ್ಳುವನೆಂಬುದೂ ಅವರಿಗೆ ಚೆನ್ನಾಗಿ ಗೊತ್ತಿತ್ತು.

" ನಿನ್ನ ಕೈಯಲ್ಲಿ ಕರಪತ್ರಗಳನ್ನು ಯಾರು ಕೊಟ್ಟಿದ್ದರು" ಎಂದು ಮಾಮುಲೇದಾರರು ಆ ಖಾದೀ ಮಾರುವವನನ್ನು ಕೇಳಿದರು.

" ಸ್ವಾಮೀ. ನಾನು ಬಡನನು. ಕೇವಲ ಖಾದೀ ಉದ್ಯೋಗದ ಹೊರತು ಬೇರೆ ಯಾವ ಉದ್ಯೋಗವನ್ನೂ ಮಾಡುವವನಲ್ಲ. ಕರಪತ್ರದ ಸಮಾಚಾರವೊಂದೂ ಗೊತ್ತಿಲ್ಲ " ಎಂದು ನಮ್ರತೆಯಿಂದ ನುಡಿದನು.

ಮಾಮುಲೇದಾರರು ಕರಪತ್ರಗಳನ್ನು ಚೆನ್ನಾಗಿ ಪರೀಕ್ಷಿಸಿದರು. ತಾರೀಖು ಕೂಡ ೧ ತಿಂಗಳ ಹಿಂದಿನದಾಗಿತ್ತು ಕೂಡಲೆ ಅವರಿಗೆ ನನ್ನ ಸುಳ್ಳು ಆರೋಪದ ಬಗ್ಗೆ ಸಂಶಯು ಬಂದಿತು ನನ್ನ ಕಡೆಗೆ ಕಣ್ಣೀರಿಸಿ ಉಗ್ರವಾಗಿ ನೋಡತೊಡಗಿದರು.

" ನಿಜವಾಗಿ ನಿನ್ನ ಬಳಿಯಲ್ಲಿ ಈ ಪತ್ರಗಳಿದ್ದಿಲ್ಲವೇ! ಮತ್ತೊಮ್ಮೆ ಆ ಖಾದಿಯುವನನ್ನು ಗರ್ಜಿಸಿ ಕೇಳಿ ನೋಡಿದರು.

" ಸ್ವಾಮೀ, ನಾನೆಂದೂ ಸುಳ್ಳಾಡಿದವನಲ್ಲ ಬೇಕಾದರೆ ಈ ರಾಯರ ಹೆಂಡತಿಯನ್ನೇ ವಿಚಾರಿಸಬಹುದು. ಖಾದಿಯ ಹೊರತು ಬೇರೆ ಏನೂ ನಾನು ತಂದಿಲ್ಲ. ಈ ಪುಣ್ಯಾತ್ಮರು ಸರಕಾರದಿಂದ ಪದವಿ......... '' ಎಂದು ನುಡಿದನು.

ನನ್ನ ಹೆಂಡತಿಯನ್ನು ಕರೆಯಿಸಿ ಸುಳ್ಳು ಸಾಕ್ಷಿ ಹೇಳಿಸುವಷ್ಟು ನನಗೆ ಧೈರ್ಯವೂ ಇದ್ದಿಲ್ಲ. ಯಾಕಂದರೆ ಅವಳು ಸುಳ್ಳಾಡಿ ನನ್ನಂಥ ಹೇಸಿ ಕೆಲಸಕ್ಕೆ ಕೈ ಹಾಕುವವಳಲ್ಲ. ನನ್ನ ಮೋರೆ ಸ್ವಲ್ಪ ಕಂದಿತು ಇಳಿಮೋರೆ ಮಾಡಿಕೊಂಡು ನಿಂತುಬಿಟ್ಟೆನು. ಮಾಮುಲೇದಾರರು ಆ ನಿರಪರಾಧೀ ಬಂಧು

ವನ್ನು ಬಿಟ್ಟುಕೊಟ್ಟರು. ನನ್ನ ಮೇಲೆ ಮಾತ್ರ ಅವರು ಕೆಂಡದಂತೆ ಕಿಡಿ ಕಾರಹತ್ತಿದರು.

" ನೀವು ಹೀಗೆ ಮಾಡುವದು ಎಷ್ಟು ಮಾತ್ರವೂ ಒಳಿತಲ್ಲ ಕಾಯ್ದೆಯನ್ನುಲ್ಲಂಘಿಸಿದವರಿಗೆ ಮಾತ್ರ ದಂಡಿಸತಕ್ಕದ್ದು. ಹೀಗೆ ಸುಳ್ಳುಆರೋಪ ಹಾಕಿ ಬಡವರನ್ನು ಪೀಡಿಸತಕ್ಕದ್ದಲ್ಲ. ನಿಮ್ಮ ಇಂಥ ಅಸತ್ಯ ಕೃತ್ಯದಿಂದ ನೀವಿಷ್ಟೇ ಜನನಿಂದೆಗೆ ಗುರಿಯಾಗುವದಲ್ಲದೆ ಸರಕಾರವನ್ನು ಕೂಡ ಗುರಿ ಮಾಡುವಿರಿ " ಎಂದು ಅಧಿಕಾರಯುಕ್ತವಾಗಿ ಮಾತನಾಡಿದೆ

ನಾನು ಕಲ್ಲುಗಂಬದಂತೆ ಕದಲದೆ ನಿಂತುಕೊಂಡು ಕೇಳುತ್ತಿದ್ದೆ.

" ಸರಕಾರದ ನಾಯಿಯೆಂದು ಬೀದಿಯ ಜನರೆಲ್ಲ ಹೀಯಾಳಿಸುವರೆಂದು ಮೊನ್ನೆ ನೀವು ಹೇಳುತ್ತಿದ್ದಿರಲ್ಲವೇ ? ಹೀಗೆಲ್ಲ ಬಡವರನ್ನು ಪೀಡಿಸಿದರೆ ಅನ್ನದೇನು ಮಾಡಿಯಾರು ? " ಎಂದು ಮತ್ತೆ ನುಡಿದು ನನಗಪ್ಪಣೆಯನ್ನಿತ್ತರು. ನಾನು ಮನೆಯ ದಾರಿಹಿಡಿದೆ. ಇನ್ನೂ ನನ್ನ ವೈಸೊಕ್ಕು ಹಾಗೇ ಇದ್ದಿತು. ನನಗಾದ ಅಪಮಾನವನ್ನು ಸಹಿಸುವದಾಗಲಿಲ್ಲ ಇದಕ್ಕೆ ಹೆಂಡತಿಯೇ ಕಾರಣಳಲ್ಲವೇ ? ಅವಳಿಗೆ ಚನ್ನಾಗಿ ಕೈ ತೋರಿಸಬೇಕು ಎಂದುಕೊಂಡು ಮನೆಗೆ ವೇಗದಿಂದ ಸಾಗಿದೆನು

" ಇಂದು ನನ್ನ ಅಪಮಾನವನ್ನು ಮಾಡಿ ಮೋಜು ನೋಡಬೇಕೆಂದು ಮಾಡಿದ್ದೆಯಾ ?" ಎಂದು ನುಡಿದು ಬಲವಾಗಿ ಅವಳ ಕೆನ್ನೆಗೆರಡೇಟು ಹಾಕಿದೆನು. ಮೊದಲೇ ಕೆಂಪು ಛಾಯೆಯುಳ್ಳಕೆನ್ನೆ ! ಏಟುಹಾಕಿದ ಬಳಿಕ ಕೇಳುವದೇನು ? ರಕ್ತರಂಜಿತವಾಗಿ ತೋರಹತ್ತಿತು.

" ನನ್ನದೇನು ತಪ್ಪಿದೆ ಇದರಲ್ಲಿ. ಬಡವನಿಗೆ ಸುಮ್ಮನೆ ಯಾತನೆ ಕೊಡಬೇಡಿರೆಂದು ನಿಮಗೆ ಸಾರಿ ಹೇಳಿರಲಿಲ್ಲವೇ ? " ಎಂದು ಅವಳು ನುಡಿಯುವದು ಕೂಡ ಸರಿಬೀಳಲಿಲ್ಲ. ಮತ್ತೆ ಏಟುಹಾಕಿದೆ.

" ಖಾದಿಯುವನನ್ನೇಕೆ ಬರಮಾಡಿಕೊಂಡೆ ಹೇಳು " ಎಂದು ಗದ್ದರಿಸಿದೆ. ನನ್ನ ವಕ್ರದೃಷ್ಟಿಯು ಅವಳು ಕೊಂಡು ಕೊಂಡ ಖಾದೀ ಕುಪ್ಪುಸದ ಮೇಲೆ ಹೋಯಿತು. ಅವಳಿಂದ ಅದನ್ನು ತರಿಸಿದೆ ಒಮ್ಮೆಲೆ ಅದರ ಮೇಲೇಕೆ ಕೋಪಬಂದಿತೋ ಅದು ಈಗ ಕೂಡ ನನಗೆ ಜ್ಞಾಪಕವಿಲ್ಲ ' ಅದನ್ನು ಒಲೆಯಲ್ಲಿ ಚಲ್ಲಿಬಿಡು " ಎಂದು ಗದ್ದರಿಸಿದೆ. ಚೆಲ್ಲುವದಿಲ್ಲೆಂದು

ಅವಳು ಹಟವನ್ನೇ ಹಿಡಿದಳು ನಾನೂ ಹಟಹಿಡಿದು ಜಯಸಂಪಾದಿಸಿಯೇ ಬಿಡಬೇಕೆಂದು ಸಿದ್ಧನಾದೆನು ಉದ್ದಾಮತನದಿಂದ ಅದನ್ನು ಒಲೆಯಲ್ಲಿ ಎಸೆದುಬಿಟ್ಟೆನು. ತಪ್ಪನೇ ಹೋದದ್ದೇ ಅವಳು ತನ್ನ ಕೈಸುಡಬಹುದೆಂಬ ವಿಚಾರವನ್ನು ಕೂಡ ಮಾಡದೆ ಅದನ್ನು ತೆಗೆದುಬಿಟ್ಟಳು. ನಾನು ಸೋಲುವವನೇ? ಅವಳಿಗೆರಡು ಚೆನ್ನಾಗಿ ಗುದ್ದುಹಾಕಿ ಮತ್ತೆ ಕಸಿದುಕೊಂಡು ಬಿಟ್ಟೆನು!

" ನೀವು ಅದನ್ನು ಸುಟ್ಟದ್ದೇ ಆದರೆ ಸಾಯುವವರೆಗೆ ಉಪವಾಸ ಮಾಡುವೆನು " ಅವಳು ಹೇಳಿದಳು.

" ಮತ್ತಾರಿಗಾದರೂ ಇಂಥ ಬೆದರಿಕೆ ಹಾಕು " ಎಂದು ಹೇಳಿ ಅದನ್ನು ಸುಟ್ಟು ಭಸ್ಮಮಾಡಿಬಿಟ್ಟೆನು ಹೆಂಡತಿಯಾದರೂ ತನ್ನ ಮಾತನ್ನು ಹುಸಿ ಹೋಗಗೊಡಲಿಲ್ಲ ಉಪವಾಸ ವ್ರತವನ್ನು ಕೈಕೊಂಡೇ ಬಿಟ್ಟಳು. ಹೊಡೆದದ್ದಾಯಿತು, ಬಡಿದದ್ದಾಯಿತು, ಸಮಾಧಾನ ಪಡಿಸಿದ್ದಾಯಿತು. ಏನಾದರೂ ಕೇಳಲಿಲ್ಲ. ದಿನಗಳೆಯಿತು, ಎರಡುದಿನಗಳೆಯಿತು, ನಡೆಸಿಯೇ ಇದ್ದಳು ತನ್ನ ವ್ರತ ಊರಲ್ಲೆಲ್ಲ ಹುಯಿಲೆದ್ದು ಹೋಯಿತು. ದಾರಿಗಾಣದೆ ಹುಚ್ಚನಂತೆ ಆದೆನು. ನಿತ್ಯವೂ ಅವಳ ಉಪವಾಸವ್ರತದಿಂದ ನನ್ನಲ್ಲಿ ಬದಲಾವಣೆಗಳಾಗತೊಡಗಿದವು.

‡ ‡ ‡ ‡

ಇಂದು ಅವಳ ಉಪವಾಸ ವ್ರತದ ಏಳನೇ ದಿನ. ಅವಳು ಬಹಳ ಅಶಕ್ತಳಾಗಿದ್ದಾಳೆ ಬಿದ್ದಲ್ಲಿಯೇ ಬಿದ್ದುಕೊಂಡು ರಾಮನಾಮಸ್ಮರಣೆ ನಡೆಸಿದ್ದಾಳೆ ಇಷ್ಟರಲ್ಲಿಯೇ ನನ್ನ ಕಲ್ಲೆದೆಯು ಕರಗಿಹೋಗಿದ್ದಿತು. ಕನಿಕರದಿಂದ ಏನು ಮಾಡಲೆಂದು ಯೋಚಿಸುತ್ತ ನನ್ನ ಕೊಠಡಿಗೆ ಹೋಗಿ ಆರಾಮ್ಕುರ್ಚಿಯ ಮೇಲೆ ಒರಗಿಕೊಂಡೆ ಅವಳಿಂದ ಕಸಿದುಕೊಂಡು ಸುಟ್ಟಂಥ ನಮೂನೆಯ ವಸ್ತ್ರವನ್ನು ತಂದುಕೊಟ್ಟು ಬಿಡಲಾ ಎಂದು ಯೋಚಿಸಿದೆ. ಅಷ್ಟರಲ್ಲಿಯೇ ಯಾವನೋ ಒಬ್ಬ ದನಕಾಯುವ ಹುಡುಗನು ಕಿಡಿಕಿಯ ಹತ್ತಿರ ಹಾಯ್ದು ಹೋಗುವಾಗ " **ದೇಶದ್ರೋಹಿ** " ಎಂದು ಕೂಗಿ ಓಡಿ ಹೋದನು. ಇದೀಗ ನನ್ನ ಅವಸ್ಥೆಯೆಂದು ಮನದಲ್ಲಿಯೇ ನೊಂದುಕೊಂಡೆ. ಇತ್ತ ಅಧಿಕಾರಿಗಳಿಗೆ ನನ್ನ ಮೇಲೆ ಅಷ್ಟಕಷ್ಟೇ ವಿಶ್ವಾಸ. ಊರ ಜನರಂತೂ

ನಾಯಿಗಿಂತ ಕಡಿಮೆಮಾಡಿ ಬಿಟ್ಟಿದ್ದಾರೆ. ಎಂದು ಅದೆಷ್ಟೋ ವೇಳೆಯ ವರೆಗೆ ಯೋಚಿಸಿದೆ ಕೊನೆಗೆ ಜನರ ತಪ್ಪಲ್ಲ; ನನ್ನದೇ ತಪ್ಪೆಂದು ಮನವರಿಕೆಯಾಯಿತು. ಅಮಲದಾರರನ್ನು ಸಂತುಷ್ಟಗೊಳಿಸುವದಕ್ಕೆಂದು ಎಷ್ಟೋ ಬಡಬಾಂಧವರಿಂದ ಲಂಚ ಸೂರೆಗೊಂಡುದೆಲ್ಲವೂ ಜ್ಞಾಪಕಕ್ಕೆ ಬರತೊಡಗಿದವು. ತುಂಬಾ ನೊಂದುಕೊಂಡೆ. ಇನ್ನು ಹಾಗೆ ಅಸತ್ಯ ವರ್ತನವನ್ನು ಮಾಡಕೂಡದೆಂದು ನಿಶ್ಚಯಿಸಿಕೊಂಡು ಪೇಟೆಗೆ ಹೋದೆ. ಆವಳ ಮನ ಮೆಚ್ಚುವಂಥ ಅಂದವಾದ ಖಾದೀ ಅರಿವೆಯನ್ನು ಕೊಂಡುಕೊಂಡೆ. ಆವಳ ಮುಂದಿಟ್ಟು ದೇವರಿಗೆರಗಿದಂತೆ ಸಾಷ್ಟಾಂಗ ನಮಸ್ಕಾರವನ್ನು ಹಾಕಿ ನನ್ನ ಅಪರಾಧಗಳೆಲ್ಲವನ್ನೂ ಒಪ್ಪಿಕೊಳ್ಳಲು ಅವಳಿಗೂ ಕರುಣೆ ಹುಟ್ಟಿತು. ಉಪವಾಸ ವ್ರತವನ್ನು ಬಿಡಲು ಒಪ್ಪಿಕೊಂಡಳು. ನಾನು ಪೇಟೆಯಿಂದ ಬರುವಾಗ್ಗೆ ಮೂಸಂಬೀ ಹಣ್ಣುಗಳನ್ನು ತೆಗೆದುಕೊಂಡೇ ಬಂದಿದ್ದೆ. ರಸವನ್ನು ತೆಗೆದು ಅವಳಿಗೆ ಕುಡಿಯಲು ಕೊಟ್ಟೆ; ಎದ್ದು ಕುಳಿತು ರಸವನ್ನು ಸೇವಿಸಿದಳು.

“ ಸಾಕಲ್ಲವೇ ” ಎಂದು ಕೇಳಿದೆ.

‘ ಸಾಕು ’ ಎಂದು ಹರ್ಷಯುಕ್ತವಾಗಿ ನುಡಿದಳು.

ಅಹಹಾ ! ಅವಳ ಮುಖದ ಮೇಲಿದ್ದ ವಿಜಯಕಾಂತಿಯನ್ನು ಕಂಡವರೇ ಬಲ್ಲರು. ರಾವಣನ ಯಾತನೆಯಿಂದ ಮುಕ್ತಳಾಗಿ ರಾಮನನ್ನು ಪಡೆದ ಸೀತೆಯಗಿಂತಲೂ ಹೆಚ್ಚಾಗಿ ಆನಂದವಾಗಿದ್ದಿತು. ಉಪವಾಸದಿಂದ ಮುಖವು ಬಾಡಿದಂತಾಗಿದ್ದರೂ ಕೂಡ ನನಗಂದು ಅಂದವಾಗಿಯೇ ಕಾಣುತ್ತಿದ್ದಿತು. ನಗೆಮಲ್ಲಿಗೆಯಂಥ ಅವಳ ಹಾಸ್ಯಮಯವಾದ ಮುಖವನ್ನು ಕಂಡು ಸುಮ್ಮನಿರುವಂತೆ ಆಗಲಿಲ್ಲ. ತಟ್ಟನೆ ಒಂದು ಮುತ್ತು ಕೊಟ್ಟುಬಿಟ್ಟೆ.

‘ ಅಹಾ, ಮೂಸಂಬೆಯ ರಸದಕಿಂತಲೂ ಈ ರಸವು ಅಮೃತದಂತಿದೆ ’ ಎಂದು ಅವಳು ಸರಸವಾಡಿ ನಾಚಿಕೆಯಿಂದ ಕೆಳಗೆ ಮುಖಮಾಡಿಕೊಂಡಳು. ಅವಳ ಆ ಸರಸವು ನನಗೆ ಮತ್ತಿಷ್ಟು ಹುರುಪನ್ನು ಕೊಟ್ಟಿತು ಲೋಹಚುಂಬುಕಕ್ಕಿಂತಲೂ ಅವಳ ಮುಖಸೌಂದರ್ಯದಲ್ಲಿಯೇ ಹೆಚ್ಚಿನ ಆಕರ್ಷಣಶಕ್ತಿಯಿದೆಯೆಂದು ನಾನಂದು ಕಂಡುಹಿಡಿದೆ. ಅವಳ ಸೌಂದರ್ಯ

ಚುಂಬಕವು ಚುಂಬನೆಗಾಗಿ ನನ್ನ ಮುಖವನ್ನು ತನ್ನೆಡೆಗೆ ಬರಮಾಡಿ ಕೊಂಡಿತು. ಹಲ್ಲಿ ಲಟಗುಟ್ಟುವಂತೆ ನಾನವಳ ಗುಲಾಬೀಗಲ್ಲದ ಮೇಲೆ ಎಷ್ಟು ಸಲ ಸದ್ದನ್ನು ಮಾಡಿದೆನೋ ನಾನರಿಯೆ. ಅಮೃತಪಾನಕ್ಕಿಂತಲೂ ಸುಖಕರವಾದ ಆ ಚುಂಬನೆಗೆ ನಾನೇನೂ ಬೇಸರಿಯುವವನಲ್ಲ. ಆದರೆ ಅವಳು ಉಪವಾಸದಿಂದ ಶಕ್ತಿಹೀನಳಾದವಳೆಂದು ಅಷ್ಟಕ್ಕೇ ಸಾಕುಮಾಡ ಬೇಕಾಯಿತು.

ಇದೇ ಸಮಯಕ್ಕೆ ಮತ್ತಾರೋ ಹೊರಗೆ "**ದೇಶದ್ರೋಹಿ**" ಎಂಪು ಕೂಗಿದಂತೆ ಕೇಳಿಸಿತು. ನನಗೀಗ ತಿಲಾಂಶದಷ್ಟೂ ಸಿಟ್ಟುಬರಲಿಲ್ಲ. "ಅಂದುಕೊಳ್ಳಿರಿ. '**ರಾವಬಹದ್ದೂರ**'ನಾಗಬೇಕೆಂದಾಶೆಯಿಂದ ನಾನೇ ನಿಮಗೆ ಪೀಡಿಸಿರದಿದ್ದರೆ ನೀವೆಲ್ಲಿ ಅನ್ನುತ್ತಿದ್ದಿರಿ" ಎಂದು ಸುಮ್ಮನಾದೆ.

ಹೆಂಡತಿಗೆ ಮಾತ್ರ ಕೋಪಬಂದಿತು. "ಎಲೋ ಯಾರು" ಎಂದು ಕೂಗುವವಳಿದ್ದಳು. ಆದರೆ ಅಷ್ಟೊಂದು ಶಕ್ತಿ ಬೇಕಲ್ಲ ಕೂಗಲಿಕ್ಕೆ ಸುಮ್ಮ ನಾದಳು. ನನ್ನ ಕುತ್ತಿಗೆಗೆ ತನ್ನ ಕೋಮಲವಾದ ಕರಗಳ ಮಾಲೆಯನ್ನು ಹಾಕಿ ಕನಿಕರ ದೃಷ್ಟಿಯಿಂದ ನೋಡತೊಡಗಿದಳು 'ಇದೇನು ನಿಮ್ಮ ಅವಸ್ಥೆ, ಎಂಬ ಭಾವವು ಅವಳ ದೃಷ್ಟಿಯಲ್ಲಿ ವ್ಯಕ್ತವಾಗುತ್ತಿದ್ದಿತು ಅವಳ ಆ ನೊಂದ ಹೃದಯವನ್ನು ಕಂಡು ನಾನು ಬಹಳ ಮರುಗಿದೆನು. ನನ್ನ ಎರಡೂ ಕೈಗಳಿಂದ ಮೆತ್ತಗೆ ಅವಳನ್ನು ಅಪ್ಪಿಕೊಂಡು ಸಮಾಧಾನ ಹೇಳಿದನು.

"ಅಧಿಕಾರಿಗಳಲ್ಲಿ ಪ್ರತಿಷ್ಠೆ ಪಡಿಯಬೇಕೆಂದು ಕಂಡಕಂಡವರನ್ನೆಲ್ಲ ನಿಷ್ಕಾರಣವಾಗಿ ಪೀಡಿಸಿದ್ದೇನೆ. ಅಂದ ಬಳಿಕ ಜನರದೇನು ತಪ್ಪು. ನಾನೇ ಇನ್ನುಮೇಲೆ ಸನ್ಮಾರ್ಗದಿಂದ ನಡೆದರೆ ಜನರಾದರೂ ಕೆಣಕುವದನ್ನು ಬಿಟ್ಟಾರು' ಎಂದು ಹೇಳಿ ಅವಳಿಗೆ ಸ್ವಸ್ಥವಾಗಿ ಮಲಗಿಕೊಳ್ಳಲಿಕ್ಕೆ ಹೇಳಿದೆ. ಅವಳು ಮಲಗಿಕೊಂಡಳು. ಅವಳ ಆಯಾಸವನ್ನು ಕಡಿಮೆಮಾಡಬೇ ಕೆಂದು ನನಗನಿಸಿತು. ಗಾಳಿಯನ್ನಾದರೂ ಬೀಸಬೇಕೆಂದು ಅಟ್ಟದ ಮೇಲಿನ ಬೀಸಣಿಕೆ ತೆಗೆದುಕೊಂಡು ಬಂದು ಗಾಳೀ ಹಾಕತೊಡಗಿದೆ. ಅವಳು ನಿದ್ದೆ ಹೋದಳು. ನಾನು ಅವಳ ಮುಖಸೌಂದರ್ಯವನ್ನು ನೋಡುತ್ತ ಬೆಪ್ಪ ನಂತೆ ಕುಳಿತುಬಿಟ್ಟೆನು. ನಾನು ಬೀಸುತ್ತಿರುವ ತಿಳಿಗಾಳಿಯ ಸೆಳವಿನಿಂದ

ಮೆಲ್ಲಗೆ ಸುಳಿದಾಡುತ್ತಿದ್ದ ಅವಳ ಆ ಸುಳಿಗೂದಲುಗಳು ಮುಖಕ್ಕೆ ಮತ್ತಿಷ್ಟು ಕಳೆಯನ್ನುಂಟುಮಾಡುತ್ತಿದ್ದವು. ಇಳೆಯೊಳಗೆಲ್ಲ ಸೌಂದರ್ಯದಲ್ಲಿ ಇವಳೇ ಮಿಗಿಲಾದವಳೆಂದು ತೋರುವದಕ್ಕಾಗಿಯೇ ಜಯ ಪತಾಕೆಯಂತೆ ಆ ಸುಳಿಗೂದಲುಗಳು ಹಾರಾಡುತ್ತಿರಬಹುದೆಂದು ನನಗೆ ತೋರಿತು. ಮತ್ತೊಮ್ಮೆ ಮುತ್ತಿಕ್ಕಬೇಕೆಂದು ಆಶೆಯಾಯಿತು. ಯಾರಾದರೂ ಕಂಡರೆ ನಕ್ಕಾರೆಂದು ತಿಳಿದು ಬಾಗಿಲು ಮುಂದೆ ಮಾಡಿಕೊಂಡೆ. ಅಮೃತಪಾನವನ್ನು ಅದೆಷ್ಟು ಸಮಯ ಮಾಡಿದೆನೋ ಅರಿವೇಯಿಲ್ಲ

( ಈ ಕತೆಯ ಹೆಸರು ಮೊದಲು 'ದೇಶದ್ರೋಹಿ' ಎಂದಿಡಲಾಗಿತ್ತು )




ತ್ವರೆಮಾಡಿರಿ

ಇಂದೇ

ಒಂದು ರೂಪಾಯಿ

ಕಳಿಸಿ

ಚಂದಾದಾರರಾಗಿರಿ.

೧೩೪ ಪುಟದ ] ಹೃದಯಮಂಥನ [ ದೊಡ್ಡ ಪುಸ್ತಕ

ಶ್ರೀ ಕರಮರಕರ ದತ್ತರಾಯರ ಮುನ್ನುಡಿಯುಳ್ಳದ್ದು
ಇದೇ ಲೇಖಕರ ೮ ಉತ್ತಮ ಕಥೆಗಳ ಸಂಗ್ರಹ
ಒಂದು ಪ್ರತಿ ತರಿಸುವವರು ೫ ಆಣೆ ಅಂಚೇ ತಿಕೀಟು ಕಳಿಸಬೇಕು.
೧ ರೂ ಕಳಿಸಿದರೆ ೪ ಪ್ರತಿ ನಿಮ್ಮ ಮನೆ ಬಾಗಿಲಿಗೆ ಬಂದು ತಲುಪುವವು.

ಮೆನೆಜರ:- "**ಸಮಾಜ**" **ಧಾರವಾಡ.**

# ಬಡತನದ ಬಾಳು !

ಅದೊಂದು ಹುಂಣಿವೆಯ ರಾತ್ರಿ ಎರಡು ಗಂಟೆಯಾದರೂ ನನಗಂದು ನಿದ್ರೆ ಬಂದಿರಲಿಲ್ಲ. ಮಧ್ಯಾಹ್ನದಿಂದ ರಾತ್ರಿಯ ವರೆಗೆ ಆರೇಳು ಸಲ ಚಹ ಕುಡಿಯುವ ಪ್ರಸಂಗ ಒದಗಿದ್ದರಿಂದಲೇ ನನ್ನದೀ ಅವಸ್ಥೆ ಸಂಪಾದ ಗಾಳಿಯಿದೆಯೆಂದು ಹೊರಗಿನ ಜಗಲಿಯ ಮೇಲೆಯೇ ಮಲಗಿಕೊಂಡಿದ್ದೆ. ಆದರೂ ನಿದ್ದೆ ಇಲ್ಲ. ಕೊನೆಗೆ ಬೇಸತ್ತು ಮೋರೆಯ ಮೇಲಿನ ಮುಸುಕನ್ನು ತೆಗೆದು ತುಂಬಾ ಕಳೆಯುಳ್ಳ ಶುಭ್ರವಾದ ಚಂದ್ರನನ್ನು ಶಾಂತ ಚಿತ್ತದಿಂದ ನೋಡುವದರಲ್ಲಿ ಮಗ್ನನಾದೆ ಆದರೆ ಆ ಶಾಂತವಾದ ಸಮಯದಲ್ಲಿ ಒಂದು ಮಂಜುಳವಾದ ದೀನಧ್ವನಿಯೊಂದು ಕೇಳತೊಡಗಿತು ಹೊರಗೆ ಬಂದ್ಮು ನೋಡಿದೆ ಸಮೀಪದಲ್ಲಿಯೇ ಆ ಹಾಡುವ ವ್ಯಕ್ತಿ ಇರಬಹುದೆಂದು ತಿಳಿಯಿತು. ಮುಂದೆ ಮುಂದೆ ಸಾಗಿದೆ. ಸಮೀಪದಲ್ಲಿದ್ದ ಅಶ್ವತ್ಥನ ಕಟ್ಟೆಯ ಮೇಲೆ ಒಬ್ಬ ಯುವತಿಯು ತನ್ನ ಮಗಳನ್ನು ತೊಡೆಯ ಮೇಲೆ ಕರೆದುಕೊಂಡು ಕೈ ತಟ್ಟುತ್ತ ಈ ಹಾಡನ್ನು ಹಾಡುತ್ತಿದ್ದಳು “ ಅಪರಾಧಿ ನಾನಲ್ಲ, ಅಪರಾಧವೆನಗಿಲ್ಲ, ಕಪಟ ನಾಟಕ ಸೂತ್ರಧಾರಿ ನೀನೆ ’ ಅವಳ ಹಾಡಿನಲ್ಲಿ ಕಲ್ಲುಗಳನ್ನು ಕೂಡ ಕರಗಿಸುವಷ್ಟು ಸಾಮರ್ಥ್ಯವಿತ್ತು. ನಾನು ಅವಳ ಹತ್ತಿರ ಹೋದೆ ನನ್ನಿಂದ ತಡೆಯುವದಾಗಲಿಲ್ಲ.

“ ತಾಯಿ, ನೀನಾರು. ನಿನ್ನ ಅವಸ್ಥೆ ಹೀಗೇಕಾಗಿದೆ. ನಿನ್ನ ಮೇಲೆ ಯಾವ ಸಂಕಟ ಬಂದಿದೆ. ಹೇಳುವಿಯಾ ? ನಿಮ್ಮ ಮನೆ ಮಾರುಗಳೇನೂ ಇಲ್ಲವೇನು

“ ಸ್ವಾಮೀ ! ನನ್ನ ಹೆಸರು ವನಮಾಲೆ. ಇದ್ದುದೆಲ್ಲವೂ ಹಾಳಾಗಿ ಸರ್ವ ನಾಶವಾಗಿ ಅನಾಥಳಾಗಿರುವೆ ನನಗೀಗ ಹಿಂದು ಮುಂದು ಯಾರೂ ಇಲ್ಲ. ” ನಿಟ್ಟುಸಿರು ಬಿಟ್ಟು ಅಳತೊಡಗಿದಳು. ನನಗೂ ದುಃಖವೆನಿಸಿತು. ಹೆಚ್ಚಿನ ಗೊಡವೆಗೆ ಹೋಗದೆ ಆಶ್ರಯದ ಏರ್ಪಾಡು ಮಾಡುವೆನೆಂದು ಹೇಳಿ ಅವಳನ್ನು ನನ್ನ ಮನೆಗೆ ಕರೆದೊಯ್ದೆ. ಅದೆಷ್ಟೋ ದಿನ ಸಹೋದರಿಯರ ಹಾಗೆ ನಮ್ಮ ಮನೆಯಲ್ಲಿ ಸುಖವಾಗಿ ಇದ್ದು ಬಿಟ್ಟಳು. ಅವಳ ಮಗ

ಳೀಗ ಪುಟ್ಟ ಹೆಜ್ಜೆಯನ್ನಿಕ್ಕುತ್ತ ಓಡಾಡುತ್ತಿದೆ. ಆ ಹುಡಿಗೆಯನ್ನು ಕಂಡರೆ ನನ್ನ ಹೆಂಡತಿಗೂ ಬಹಳ ಪ್ರೇಮ

ಅವಳು ನಮ್ಮ ಮನೆಗೆ ಬಂದು ನಾಲ್ಕಾರು ತಿಂಗಳಾದರೂ ಅವಳ ಕರುಣ ಕತೆಯನ್ನು ಕೇಳಲು ನನಗೆ ಧೈರ್ಯವಾಗಲಿಲ್ಲ. ಇಂದು ನನ್ನ ಹೆಂಡತಿ ಹೊರಗೆ ಹೋಗಿರುವದನ್ನು ಕಂಡು ಅವಳಿದ್ದ ಕೋಣೆಗೆ ಹೊದೆ. ಎಂದಿನಂತೆ ಅವಳು ತನ್ನ ಹಿಂದಿನ ಕತೆಯನ್ನು ನೆನಿಸಿ ಅಳುವಿನ ಹಳ್ಳವನ್ನು ಹರಿಸುವದರಲ್ಲಿಯೇ ಇದ್ದಳೆಂಬು ಕಾಣುತ್ತದೆ.

"ವನಮಾಲಾ, ನೀನಿನ್ನೂ ನಿನ್ನ ದುಃಖವನ್ನು ಬಿಡಲಿಲ್ಲವೇ?" ಎಂದು ಕೇಳಿದೆ. ಅವಳು ಕಂಣೀರನ್ನು ನುಂಗಿಕೊಂಡು ಹುಸಿ ನಗೆನಗುತ್ತ "ದುಃಖವೇನೂ ಇಲ್ಲ. ಇದೇ ಈಗ ಮಲಗಿ ಎದ್ದೆ" ಎಂದು ನುಡಿದಳು.

"ಅದೇನೆ ಇರಲಿ. ಇಂದು ನಿನ್ನ ಪೂರ್ಣ ವೃತ್ತಾಂತವನ್ನು ನನ್ನೆ ದುರಿನಲ್ಲಿ ಹೇಳಲೇಬೇಕು. ಎಂದು ಹಟ ಹಿಡಿದೆ. ಉಪಾಯಗಾಣದೆ ಅವಳು ಹೇಳತೊಡಗಿದಳು

"ನಮ್ಮೂರು **ಲಕಮಾಪೂರ.** ನನ್ನ ಪತಿದೇವನು ಒಕ್ಕಲತನ ವನ್ನು ಮಾಡಿಕೊಂಡು ಇರುತ್ತಿದ್ದರು. ಅವರು ಒಳ್ಳೇ ಕರ್ತವ್ಯದಕ್ಷರು. ಒಂದು ಗಳಿಗೆ ಕೂಡ ವ್ಯರ್ಥವಾಗಿ ಕಳೆಯುತ್ತಿರಲಿಲ್ಲ. ಯಾವಾಗಲೂ ಹೊಲದ ಕೆಲಸಗಳಲ್ಲಿ ತತ್ಪರರಾಗಿರುತ್ತಿದ್ದರು. ತಮ್ಮ ಕೈಕೆಳಗಿನ ಆಳು ಹೋಳುಗಳನ್ನಾದರೂ ಚೆನ್ನಾಗಿ ನೋಡಿಕೊಂಡು ಇರುತ್ತಿದ್ದರು. ಅವರಿಗೆ ಸಿಟ್ಟು ಮಾತ್ರ ಬಹಳ. ಕಾರಣವಿಲ್ಲದೇ ಕಂಡಕಂಡವರ ಮೇಲೆ ಸಿಟ್ಟಿಲ್ಲ. ತಮಗೆ ಅವಮಾನಮಾಡುವಂಥವರ ಮೇಲೆ ಮಾತ್ರ ಸಿಟ್ಟು, ಅವರಿಗೆ ಮರ್ಯಾದೆಯಿಂದ ಕಾಲಕಳೆಯುವದನ್ನು ಕಂಡರೆ ತುಂಬಾ ಪ್ರೀತಿ. ಅವ ಮಾನ ಮಾಡಬಂದವರನ್ನು ಹೊಡೆದು ಹಾಕುವರು. ಆ ಗುಣವೇ ಅವರ ನಾಶಕ್ಕೆ ಕಾರಣವಾಯಿತು.

"ಕಾಲಚಕ್ರವು ಒಂದೇ ಸಮನಾಗಿ ತಿರುಗುವದು ತೀರ ವಿರಳ. ನಮ್ಮೂರಿಗೆ ಕೆಡುಕಾಲ ಬಂದೊದಗಿತು. ನಾಲ್ಕಾರು ವರ್ಷ ಬೆಳೆಯೇ ಇಲ್ಲ ದಂತಾಗಿ ರೈತರ ಮೇಲೆ ಸಾಲದ ಹೊರೆಯು ಭಾರವಾಗ ತೊಡಗಿತು. ನಮ್ಮ ವರಿಗೂ ಎಷ್ಟೋ ಸಾಲವಾಯಿತು. ಎಂಥ ಕಾಠಿಣ್ಯವು ಬಂದೊದಗಿದರೂ

ಹೊಲದ ಒಡೆಯರಿಗೆ ಕನಿಕರಬಾರದೆ ಇರುವದು ಆಶ್ಚರ್ಯವಲ್ಲವೇ? ಹಣವನ್ನು ಪೀಡಿಸಿ ಪೀಡಿಸಿ ವಸೂಲ ಮಾಡುವರು. ಮನಬಂದಂತೆ ಬೊಗಳಿ ಬೈದು ವಸೂಲ ಮಾಡುವರು.

ಒಂದು ದಿನ ನಮ್ಮವರು ಆಗತಾನೆ ಹೊಲದಿಂದ ಬಂದು ಸ್ನಾನಕ್ಕೆ ಇಳಿದಿದ್ದರು ಸಾಹುಕಾರನೊಬ್ಬನು ಹೊರಗಿನಿಂದ ಬಂದು ಜಡಿ ಊರಿದನು. ಸ್ನಾನಮಾಡುತ್ತಿದ್ದಾರೆ ನಿಲ್ಲು ಎಂದು ನಾನು ಹೇಳಿದರೂ ಸಹ ತಡೆಯದೆ ಆ ನಿರ್ದಯಿಯು ಮನಬಂದಹಾಗೆ ಬೊಗಳತೊಡಗಿದನು. ಆಡಬಾರದ ಮಾತುಗಳನ್ನು ಆಡಿದನು ಇವರಿಗಿದನ್ನು ಸಹಿಸುವದಕ್ಕಾಗಲಿಲ್ಲ. ಬಚ್ಚಲಮೋರಿ ತೊಳೆಯುವ ಕಸಬರಿಗೆ ಕಟ್ಟಿದ ಗಳವನ್ನೇ ತಗೆದುಕೊಂಡು ಹೊರಗೆ ಬಂದರು 'ನಿನ್ನ ಹಣಕ್ಕಾಗಿ ಪ್ರಾಣವನ್ನಾದರೂ ಕೊಡಬಲ್ಲೆ. ಮರ್ಯಾದೆಗೆ ಕಂಡು ಬರುವಂಥ ಅಭದ್ರ ಶಬ್ದಗಳನ್ನು ಹಾಕುವಿಯಾ ಮೂರ್ಖ. ಇದೋ ನೋಡು ಕೈಯಲ್ಲಿ ಏನಿದೆ ಎಂದು ಗದ್ದರಿಸಿ ಆ ಸಾವಕಾರನಿಗೆ ಮನೆಯ ದಾರೀ ಹಿಡಿಸಿದರು.

" ಹಾಗೂ ಹೀಗೂ ಕಾಲ ಕಳೆಯುತ್ತಲೇ ಇದ್ದಿತು. ಇಷ್ಟರಲ್ಲಿಯೇ ಮತ್ತೊಂದು ಸಂಕಟವು ನಮ್ಮೂರಿಗೆ ಬಂದೊದಗಿತು. ಪ್ಲೇಗಿನ ಭೀಕರ ಹಾವಳಿ ಊರವರೆಲ್ಲರೂ ಮನೆ ಬಿಟ್ಟು ಹೋದರು. ನಾವು ಮಾತ್ರ ಇನ್ನೂ ಮನೆ ಬಿಟ್ಟಿರಲಿಲ್ಲ. ಇಂದು ನಾಳೆ ಬಿಡಬೇಕೆನ್ನುವಷ್ಟರಲ್ಲಿ ಗಂಟು ಬೇನೆಯ ಗಂಟಲಿಗೆ ನನ್ನ ಪತಿ ತುತ್ತಾದರು-" ಹೇಳ ಹೇಳುತ್ತ ವನಮಾಲೆಯ ಕುತ್ತಿಗೆಯ ಶಿರಗಳು ದುಃಖದಿಂದ ಉಬ್ಬಿಬಂದವು. ಕಣ್ಣೊರಿಸಿಕೊಂಡು ಮತ್ತೆ ಹೇಳತೊಡಗಿದಳು.

ಪತಿದೇವನ ಮೃತಶರೀರವನ್ನು ಸ್ಮಶಾನಕ್ಕೆ ಕಳಿಸಿಬರುವಷ್ಟರಲ್ಲಿಯೇ ನಮ್ಮ ಮನೆಯ ಲೂಟಿಗೆ ಆರಂಭವಾಗಿದ್ದಿತು. ಸಾಲವನ್ನು ಕೊಟ್ಟ ವಿಠ್ಠಲ **ಶೇಟನು** ಇದ್ದು ಬಿದ್ದುದೆಲ್ಲವನ್ನೂ ತೋಚಿಕೊಂಡು ಒಯ್ದನು ಅಂದಿನಿಂದ ನಾನು ಊರಹೊರಗಿನ ಗುಡಿಸಿಲೊಂದರಲ್ಲಿ ಇರಬೇಕಾಯಿತು ಉಪವಾಸ-ವನವಾಸ ಕಾಲಕಳೆಯ ತೊಡಗಿದೆನು.

ಹೀಗಿರುವಲ್ಲಿ ಒಂದುದಿನ ವಿಠ್ಠಲ ಶೇಟನ ಸವಾರಿ ನಮ್ಮ ಗುಡಿಸಲಿನ ಕಡೆಗೆ ಬಂದಿತು. ಮತ್ತೇಕೆ ಈ ಅಧಮನು ಬಂದನೋ ಎಂದು ಗಾಬರಿಯಾದೆ.

ಅವನು ಹೇಳಿದ "ವನಮಾಲಾ, ನಿನ್ನ ಸಂಕಟವನ್ನು ನೋಡಿ ಬಹಳ ಕೆಡುಕೆನಿಸುತ್ತಿದೆ, ಮಾಡುವದೇನು. ಸಂತಾಪದಭರದಲ್ಲಿ ಹಾಗೆ ವರ್ತಿಸಿದೆ. ಆದದ್ದಾಯಿತು. ಇನ್ನು ನಿನ್ನ ದುಃಖವನ್ನು ಬಿಡು ನಿನ್ನ ಉಡಿಗೆ-ತೊಡಿಗೆ ಊಟ-ಪಾಟಗಳನ್ನೆಲ್ಲ ನಾನು ನೋಡುವೆನು."

"ಆ ಮೃದುನುಡಿಗಳಲ್ಲಿ ಸ್ವಾರ್ಥವಿರಲಾರದೆಂದು ನಾನು ಭಾವಿಸಿದೆ ....ಆದರೆ....ಅದು ನನ್ನನ್ನು ಅಧೋಗತಿಗೊಯ್ದ ನುಡಿಯು....!....ಅದರ ಕುರುಹು....ನಿಮ್ಮೆದುರಲ್ಲಿರುವ ಈ ಬಾಲಿಕೆ....!" ವನಮಾಲೆ ಬಿಕ್ಕಿ ಬಿಕ್ಕಿ ಅಳತೊಡಗಿದಳು.

ನನಗೂ ಅವಳ ಕರುಣಕತೆಯನ್ನು ಆದೇಕೆ ಕೇಳಿದೆನೋ ಎನ್ನಿಸಿತು. ಅವಳನ್ನು ಸಮಾಧಾನಪಡಿಸಿ ಹೊರಗೆ ಹೋದೆನು ಅಂದು ರಾತ್ರಿ ನನಗೆ ಊಟವು ಕೂಡ ರುಚಿಸಲಿಲ್ಲ. ಬಡತನದ ಬಾಳನ್ನು ನೆನೆದು ಖಿನ್ನಮುಖ ನಾಗಿ ಮಲಗಿಕೊಂಡೆ. ನಿದ್ದೆಯು ಕೂಡ ಬೇಗ ಬಾರದ್ದರಿಂದ ಬೆಳಗಿನ ಎಂಟುಗಂಟೆಗೆ ಎಚ್ಚರವಾಯಿತು. ಚಹ ಕುಡಿಯಲಿಕ್ಕೆಂದು ಒಳಗೆಹೋದೆ. ವನಮಾಲೆ ಕಾಣಲಿಲ್ಲ ಪಾಪ! ಇನ್ನೂ ಎದ್ದಿರಲಿಕ್ಕಿಲ್ಲ ಎಂದುಕೊಂಡು ಸುಮ್ಮನಿದ್ದೆ ಒಂದು ತಾಸಾಯಿತು. ಏಳಲೇ ಇಲ್ಲ. ಅವಳ ಮಗು ಮಾತ್ರ ಎದ್ದು ಅಳತೊಡಗಿತು. ನಾನು ಅಲ್ಲಿ ಸಾಗಿದೆ. ಬಾಗಿಲು ತೆಗೆದು ನೋಡುತ್ತೇನೆ ಸ್ವರ್ಗಸುಖವನ್ನು ಅನುಭವಿಸುತ್ತಿದ್ದ ಶಾಶ್ವತವಾದ ನಿದ್ದೆಯದು! ಹೌಹಾರಿದೆ! ಗಾಬರಿಗೊಂಡೆ! ಕಣ್ಣೀರು ಸುರಿಸಿದೆ! ನನ್ನಾಕೆಯೂ ಗಾಬರಿಯಾಗಿ ಓಡಿಬಂದು ಮಗುವನ್ನು ಎತ್ತಿಕೊಂಡಳು. ಆ ಚಿಕ್ಕಮಗುವೂ ಅಳತೊಡಗಿತು. ಅಷ್ಟರಲ್ಲಿಯೇ ಅವಳ ಹಾಸಿಗೆಯ ಹತ್ತರ ದೊಡ್ಡ ಅಕ್ಷರಗಳಿಂದ ಬರೆದ ಚೀಟಿಯೊಂದು ಕಾಣಿಸಿತು ಓದಿ ನೋಡಿದೆ.

"ಮಾನ್ಯರೇ,

ನನ್ನಂಥ ಅಧಮಳು ಬಾಳಿ ಪ್ರಯೋಜನವಿಲ್ಲೆಂದು ನನಗೆ ತೋರಿತು. ಈ ವರೆಗೆ ಆಶ್ರಯಗೊಟ್ಟುದಕ್ಕಾಗಿ ತುಂಬಾ ಋಣಿಯಾಗಿದ್ದೇನೆ. ನನ್ನ ಮಗುವಿನ ಪಾಡೊಂದನ್ನು ನೋಡಿದರೆ ಸಾಕು! ತಾವು ಅವಳನ್ನು ಸಲಹುವಿರೆಂದು ಮನವರಿಕೆಯಾದ ಮೇಲೆಯೇ....ನಾನಿಂದು....ವಿಷ...ಓಂ.... ಶಾಂತಿ....ಶಾಂತಿ....ಶಾಂತಿ.।

ನಿಮ್ಮ

ವನಮಾಲೆ.।

———

# ನೌಕರಿ!

ಹೃದಯದ್ರಾವಕ ಕತೆಯೊಂದು

( ಲೇ :—ಭಾಲಚಂದ್ರ ಘಾಣೇಕರ ಧಾರವಾಡ )

ಮಗನು ತೀರಿಕೊಂಡು ಇಂದಿಗೆ ಎಂಟು ದಿನಗಳಾದವು **ಜಾನಕೀ ಬಾಯಿ**ಯು ಒಂದು ಅನ್ನದಗಳನ್ನು ಕೂಡ ಬಾಯಿಗೆ ಹಚ್ಚಿರಲಿಲ್ಲ. “ಮಗನೆ, ನನ್ನ ಮುದ್ದುಮಗನೆ. ನನ್ನೊಬ್ಬಳನ್ನೇ ಬಿಟ್ಟು ತೆರಳಿದೆಯಾ? **ಸುಶೀಲೆ**ಯ ವಿರಹವು ನಿನಗೆ ಸಹಿಸದಾಯಿತೆ?” ಎಂದು ಆಗಾಗ್ಗೆ ರೋದಿಸುವಳು.

ಸುಶೀಲೆಯೆಂದರೆ ಜಾನಕೀಬಾಯಿಯ ಪ್ರೀತಿಯ ಸೊಸೆ **ಗೋವಿಂದ**ನ ಧರ್ಮಪತ್ನಿ. ಗೋವಿಂದನೊಬ್ಬನೇ ಒಬ್ಬ ಮಗ ಜಾನಕೀಬಾಯಿಗೆ. ಅವನ ತಂದೆ ತೀರಿಕೊಂಡು ಬಹಳ ವರ್ಷಗಳಾಗಿದ್ದವು. ಮೊದಲಿನ ಕಾಲದ ಮಂದಿಗೆ ನೌಕರಿ-ಚಾಕರಿಯ ಅಭಿಲಾಷೆ-ಇಂಗ್ಲೀಷ ವಿದ್ಯೆಯ ಮೋಹ-ಬಹಳ ನೋಡಿ. ಜಾನಕೀಬಾಯಿ ಸುಧಾರಕಳಲ್ಲದಿದ್ದರೂ ಮಗನನ್ನು **ಬಿ. ಎ.** ದ ವರೆಗೆ ಓದಿಸಿ ಮುನಶೂಫನನ್ನು ಮಾಡಬೇಕೆಂದು ತುಂಬಾ ಅಪೇಕ್ಷೆ. ಎರೆಯುವಾಗ, ಆರತಿಮಾಡುವಾಗ ಅವಳು ಕೊಡುವ ಹರಕೆಗಳೆಂದರೆ “ಬೇಗನೆ ದೊಡ್ಡ ಪರೀಕ್ಷೆ ಕೊಟ್ಟುಬಿಟ್ಟು ಸಾಹೇಬನಾಗು, ಮುನಶೂಫನಾಗು, ಜಜ್ಜನಾಗು” ಇವೇ ಶಬ್ದಗಳು. ಯಜಮಾನರು ಗಳಿಸಿಟ್ಟ ಚಟ್ನೀರೊಟ್ಟಿಗೆ ಆಧಾರವಾಗಿದ್ದ ಚಿಕ್ಕದೊಂದು ಹೊಲವನ್ನು ಮಾರಿ ಬಿ. ಎ ಪರೀಕ್ಷೆಗೆ ಆಹುತಿಯನ್ನಿತ್ತಳು. ಹಾಗೂ ಹೀಗೂ ಮಗನ ಬಿ. ಎ. ಆಯಿತು. ತಾಯಿಗೆ ಹಿರಿ ಹಿರಿ ಹಿಗ್ಗು! ಮುಗಿಲು ಮೂರೇ ಬೆರಳು ಎನ್ನುತ್ತಾರಲ್ಲ ಹಾಗಾಗಿದ್ದಿತು ಅವಳ ಸ್ಥಿತಿ. ಅವಳ ಕೈ ಹಿಡಿದವರಾರಿನ್ನು? ತಕ್ಕ ಸಮಯಕ್ಕೆ ಕಣ್ಣುಹಬ್ಬವನ್ನು ಪೂರೈಸಿಕೊಳ್ಳುವದಕ್ಕಾಗಿ ಮಗನ ಕೊರಳಿಗೊಂದು ಗುದ್ದೀ ಕಟ್ಟುವ ವಿಚಾರವೂ ಅವಳಿಗೆ ಬಾರದೆ ಇರಲಿಲ್ಲ.

ತನ್ನ ಅಕ್ಕನ ಮಗಳಾದ ಸುಶೀಲೆಯೊಡನೆ ವಿವಾಹ ಹೂಡಿಬಿಟ್ಟಳು ಮದುವೆಯ ದುಂದುಗಾರಿಕೆಯ ವರ್ಣನೆಯನ್ನೇನು ಮಾಡುವದು ? ಸಾಲ ಮಾಡಿಯಾದರೂ ದುಂದುಮಾಡಿಯೇ ತೀರಬೇಕೆಂಬ ಹಿಂದೂಜನರ ಹಟವು ಜಗತ್ತಿಗೇ ಗೊತ್ತಿದೆ

ಸಾಲತಂದು ಮದುವೆ ಮಾಡಿದ್ದಾಯಿತು! ಹೊಲವನ್ನು ಮಾರಿ ಬಿ. ಎ. ಕಲಿಸಿದ್ದಾಯಿತು! ಆದರೆ ಮುಂದೇನು ಮಾಡುವದು? ಬಿ ಎ. ಆದವರಿಗೆಲ್ಲ ಮಾಮ್ಲೇದಾರಿಕೆ ಮುನಸೂಫಿಕೆ ಕೊಡುವವರಾರು? ಮುನಸೂಫರ ಬೂಟು ಒರಿಸುವ ಸ್ಥಳವು ಕೂಡ ತಿಪ್ಪರಲಾಗ ಹಾಕಿ ಸಾವಿರಸಲ ಸಾಹೇಬರ ಬಂಗ್ಲೆಯ ವರೆಗೆ ದಿಂಡರಿಕೆ ಉರುಳಿದರೂ ದೊರೆಯುವದು ಕಠಿಣವಾದ ಕಾಲವಿದು. ಇಂಥ ಬಿಕ್ಕಟ್ಟಿನ ಕಾಲದಲ್ಲಿ ಹೊಟ್ಟೆಯ ಪ್ರಶ್ನೆ! ಮೂವ್ವರ ಹೊಟ್ಟೆಯ ಪ್ರಶ್ನೆ ಗೋವಿಂದನಿಗೆ ಬಿಡಿಸಬೇಕಾಯಿತು ಇದ್ದ ಚೂರು-ಚಾರು ಆಭರಣಮಾರಿ ಬಂದ ಹಣವೆಲ್ಲ ನೌಕರಿಗಾಗಿ ಅಪ್ಲಿಕೇಶನ (ಅರ್ಜಿ) ಮಾಡುವ ಕೆಲಸದಲ್ಲಿ ವೆಚ್ಚವಾಗಿ ಹೋಯಿತು. ಅಪ್ಲಿಕೇಶನ್ನಿಗೆ ಇಷ್ಟೊಂದು ಹಣ ಬೇಕೇ ಎಂದು ಕೇಳುವಿರಾ? ನಡುವಿನ ದಲಾಲರಿಗೆ ಲಂಚಕೊಡದೆ ಅರ್ಜೀ ಹಿಡಿಯುವ ಮಾತೇ ಇಲ್ಲವೆಂಬುದು ನೌಕರಿಗಾಗಿ ಒದ್ದಾಡುವವರಿಗೆಲ್ಲ ಗೊತ್ತುಂಟು ದೇವರ ಹೆಸರಿನಿಂದ ಕಳ್ಳಪೂಜಾರಿಗಳು ದ್ರವ್ಯಾಪಹರಣ ಮಾಡುವಂತೆಯೇ ಈ ದಲಾಲರು ಉಮೇದವಾರರ ದುಡ್ಡು ಸೆಳೆಯುವರು!

ಬಡತನದಲ್ಲಿಯೇ ಹೇಗೋ ಮೂವ್ವರೂ ಕಾಲಕಳೆಯುತ್ತಾ ಇದ್ದರು. ತಾಯಿ ನೆರೆಹೊರೆಯವರ ಸಣ್ಣ-ಪುಟ್ಟ ಕೆಲಸಗಳನ್ನು ಮಾಡಿಕೊಟ್ಟು ೪-೬ ಆಣೆ ಗಳಿಸುತ್ತಿದ್ದಳು. ಬೀಸುವ-ಕುಟ್ಟುವ-ಕಾರ್ಯದಲ್ಲಿ ಸೊಸೆಯೂ ತುಂಬಾ ನೆರವಾಗುವಳು ಒಂದು ಹೊತ್ತು ಉಂಡರೆ ನಾಲ್ಕುಹೊತ್ತು ಉಪವಾಸ. ಸುಶೀಲೆಯಂತೂ ತಾನು ಏನು ತಿಂದಿರದಿದ್ದರೂ ತಿಂದಿರುವೆನೆಂದು ಸುಳ್ಳಾಡಿ ಗಂಡನಿಗೆ ಉಣ್ಣಿಸುವಳು. ಜಾನಕೀಬಾಯಿ ತಾನು ಉಪವಾಸವಿದ್ದು ಸುಶೀಲೆಗೆ ಊಟ ಹಾಕುವಳು. ಬಡತನದಲ್ಲಿಯೇ ಸ್ವಾರ್ಥತ್ಯಾಗದಿಂದ ಅವರೆಲ್ಲರೂ ಜೀವಿಸಿದ್ದರು

"ಬಡತನ ಬೇರೆ ಬ್ರಹ್ಮೇತಿ ಬೇರೆ" ಎನ್ನುತ್ತಾರಲ್ಲ ಅದು ಸುಳ್ಳಲ್ಲ. ಸುಶೀಲೆ ಈಗ ಎಂಟು ತಿಂಗಳ ಗರ್ಭವತಿ. ತವರುಮನೆಗೆ ಕಳಿಸಬೇಕೆಂದರೆ ತಾಯಿ ಬಹಳ ಕಾಹಿಲೆಯಿದ್ದುದರಿಂದ ಇನ್ನೆಂಟು ದಿವಸ ತಡೆದು ಬರುವೆನೆಂದು ತಂದೆ ಓಲೆ ಬರೆದಿದ್ದ. ಎಂಟುದಿವಸಗಳಾದವು ಸುಶೀಲೆಯ ತಂದೆ ಬರಲಿಲ್ಲ ತಾಯಿ ಸತ್ತಳೆಂಬ ಕಟುಸುದ್ದಿಯ ಓಲೆಯೊಂದು ಸಿಡಿಲಿನಂತೆ ಸುಶೀಲೆಯ ಕೈಗೆ ಬಿದ್ದಿತು ಚಿಂತೆ ದುಃಖಗಳೆರಡರಲ್ಲಿಯೂ ಮುಳುಗಿಕೊಂಡು ಹೈರಾಣಾಗತೊಡಗಿದಳು

ಅದೊಂದು ಸುದೈವದ ಚಿನ್ಹವನ್ನು ತೋರುವ ಬೆಳಕೆಂದು ಗೋವಿಂದ-ಸುಶೀಲೆಯರಿಗೆ ಅನ್ನಿಸಿರಬೇಕು. ಅದು ಹೇಗೆ ಇರಲಿ ಅವರಿಬ್ಬರೂ ಮಾತನಾಡುತ್ತ ಹೊರಮನೆಯಲ್ಲಿ ಕುಳಿತಿದ್ದಾರೆ.

"ಪ್ರಿಯೆ, ಈ ಸಲ ನೌಕರಿ ಹತ್ತುವದು ಖಂಡಿತವೆಂದು ಕಮಿಶನರರ ಕಾರಕೂನ ರಂಗಪ್ಪನವರು ಹೇಳಿದ್ದಾರೆ. ಆದರೇನು ಮಾಡುವದು? ಐವತ್ತು-ಅರವತ್ತು ರೂಪಾಯಿಗಳಾದರೂ ಖರ್ಚಿಗೆ ಬೇಕು. ನೌಕರೀ ಹತ್ತಿದ ೮-೧೦ ದಿವಸಗಳಲ್ಲಿಯೇ (೫೦ ರೂ.) ೧ ತಿಂಗಳಸಂಬಳ ನಗದು ದೊರೆಯುವದಂತೆ."

"ನಾಥ, ನಿಜವೇ? ಹಾಗಾದರೆ ನಮ್ಮ ಭಾಗ್ಯವೇ ತೆರೆದಿದೆ ಎನ್ನಬಹುದು. ಆದರೆ ಅಯ್ಯೋ ಒಂದುಚೂರು ದಾಗೀನೆ (ಆಭರಣ) ಕೂಡ ನನ್ನ ಮೈಮೇಲೆ ಇಲ್ಲವಲ್ಲ." ಇಂತು ದುಃಖಿಸುವಷ್ಟರಲ್ಲಿಯೇ ಹೊರಗೆ ಅಂಚೆಯವನು ಇನ್ಸೂರ ಪಾಕೀಟೊಂದನ್ನು ಒಳಗೆ ತಂದುಕೊಟ್ಟನು.

ಪಾಕೀಟಿನಲ್ಲಿ ೫೦ ರೂ. ನೋಟೂ ಎರಡು ಸಾಲು ಬರೆದುದೊಂದು ಚೀಟಿಯೂ ಇದ್ದವು.

"ನಿನ್ನ ಅಸಹಾಯ ಸ್ಥಿತಿಯನ್ನು ನೋಡಲಾರದೆ ಮನೆಯಲ್ಲಿಯ ಪಾತ್ರೆಗಳನ್ನು ಮಾರಿ ಈ ೫೦ ರೂ. ನಿನ್ನ ಬಾಣಂತಿತನದ ವೆಚ್ಚಕ್ಕಾಗಿ ಕಳಿಸಿದ್ದೇನೆ."

—ನಿನ್ನ ತಂದೆ

ಗೋವಿಂದ-ಸುಶೀಲೆಯರಿಗಾದ ಆನಂದವನ್ನು ವರ್ಣಿಸುವದು ಸಾಧ್ಯವೇ?

" ಒಳ್ಳೇ ಸಮಯಕ್ಕೆ ಬಂದ ಹಣವಿದು. ನಮ್ಮ ಭಾಗ್ಯ ತೆರೆದಿದೆ ನೌಕರೀ ಸಿಕ್ಕರೆ ಸಾಕು ಏನೆಲ್ಲವೂ ಆಗುವದು. ಈ ರೂಪಾಯಿ ತೆಗೆದು ಕೊಂಡು ನಿಮ್ಮ ಕಾರ್ಯಕ್ಕೆ ತೊಡಗಿರಿ. " ಸುಶೀಲೆಯೆಂದಳು.

ಗೋವಿಂದನು ಆ ರೂಪಾಯಿಯು ಸೂರೆ ಒಂದು ಕ್ಷಣದಲ್ಲಿಯೇ ಮಾಡಿಬಂದು ಹುಕುಮಿನ ದಾರೀನೋಡುತ್ತ ಕುಳಿತುಕೊಳ್ಳುವದೊಂದೇ ಆವನ ಕೆಲಸವಾಗಿದ್ದರಿಂದ ಎರಡೂ ಹೊತ್ತಿನ ಅಂಚೆಯನ್ನು ಕಾಯುವ ದೊಂದು ಆತನ ಕೆಲಸವಾಗಿದ್ದಿತು.

* * * *

ರಾತ್ರಿಯಿಂದಲೂ ಬೇನೆ ತಿಂದು ತಿಂದು ಕೊನೆಗೊಮ್ಮೆ ಬೆಳಿಗ್ಗೆ ಸುಶೀಲೆಯೊಂದು ಮಗುವನ್ನು ಹೆತ್ತಳು ಆದರೆ...ಬಹಳ ಭೀಕರ ಪರಿ ಸ್ಥಿತಿಯಲ್ಲಿ....ಉಪವಾಸ-ವನವಾಸ ಕಾಲಕಳೆದು ಹೆತ್ತ ಆ ಮಗು... ಮಾತೆಯ ದುಃಖದಲ್ಲಿ ಭಾಗವಹಿಸಲು ಸಿದ್ಧವಾಗಲಿಲ್ಲ....ಅವಳೇ ಒದ್ದಾ ಡುತ್ತಿರಲಿ....ಎಂದಿತೋ ಎನೋ....ಹುಟ್ಟಿದ ತಾಸಿನಲ್ಲಿಯೇ ಕಣ್ಣುಮುಚ್ಚಿ ಬಿಟ್ಟಿತು. ಚಾಕರೀ ಆಶೆಯಿಂದ ಹಣ ಹೋದದ್ದು ನಿಜವಾಯ್ತು. ಇಂದಿನ ವರೆಗೂ ಹುಕುಮಿಲ್ಲ. ಸುಶೀಲೆಯನ್ನು ಗೋಳಾಟಕ್ಕೀಡುಮಾಡಿದ ಪಾಪ ಮಾತ್ರ ಗೋವಿಂದನ ಪಾಲಿಗೆ ಬಂದಿತು. ಪಾಪವನ್ನು ಹೊರಿಸುವದಕ್ಕಾಗಿ ಅವಳು ಬಹಳ ದಿವಸ ಉಳಿಯಲೂ ಇಲ್ಲ. ಅದೊಂದು ಕೆಟ್ಟ ಜ್ವರವಂತೆ. ಆಕೆಯ ಪ್ರಾಣಕ್ಕೆ ಎರವಾಯಿತು.

ಅಂದಿನಿಂದ ಗೋವಿಂದನು ಹುಚ್ಚನಂತಾದನು. ಆದನೆನ್ನುವದೇನು ? ಚೆನ್ನಾಗಿ ಹುಚ್ಚು ಹಿಡಿಯಿತು. ಆ ಹುಚ್ಚಿನಲ್ಲಿಯೇ ಅಂದಿನ ರಾತ್ರಿ ತಾನಿನ್ನು ಬದುಕಿ ಪ್ರಯೋಜನವಿಲ್ಲೆಂದು ಉರುಲು ಹಾಕಿಕೊಂಡು ಬಿಟ್ಟನು.

ಏನದು ತಳಮಳ ? ತಾಯಿ ದೀಪತೆಗೆದುಕೊಂಡು ನೋಡುತ್ತಾಳೆ. '' ನೌಕರಿ '' ಎಂಬ ಕುತ್ತಿಗೆಯಿಂದ ಬಿಗಿಯಾಗಿ ಬಂದ ಗೋವಿಂದನ ಕೊನೆಯ ನಿಟ್ಟುಸಿರೊಂದು ಕೇಳಬಂದಿತು.

ಈಗೆಂಟು ದಿವಸಗಳಾದವು ಆ ಮಾತಿಗೆ. ಮಗ ಹಾಗು ಸೊಸೆಯ ಚಿತ್ರಗಳೇ ಜಾನಕೀಬಾಯಿಯ ಕಣ್ಣುಮುಂದೆ ಕಟ್ಟಿದಂತಾಗುವವು.

ರಾತ್ರಿ ಎರಡು ಗಂಟೆಯ ಸಮಯ. ಉಪವಾಸದ ಬಾಧೆಯಲ್ಲಿಯೇ ಸ್ವಲ್ಪ ಜಂಪು ಹತ್ತಿದ್ದಿತು ಜಾನಕೀಬಾಯಿಗೆ. ಅಷ್ಟರಲ್ಲಿಯೇ ಕನಸೊಂದು ಬಿದ್ದಿತು. ಕನಸಿನಲ್ಲಿ ಮಗನು ಮಾತನಾಡುತ್ತಿದ್ದ.

"ಅಮ್ಮಾ, ನೌಕರಿ ನೌಕರಿಯೆಂದು ಕಂಗಾಲನಂತೆ ತಿರುಗುವಾಗ ನನಗೆ ಎಷ್ಟೋ ಅಪಮಾನ ಪ್ರಸಂಗಗಳು ಬರುತ್ತಿದ್ದವು. ಆ ದಿನವಂತೂ ನನ್ನನ್ನು ಅಮಲದಾರನೊಬ್ಬನು ಕಾಲ್ಮೆಟ್ಟುಗಳಿಗಿಂತ ಕಡಿಮೆಯಾಗಿ ಎಣಿಸಿದನು ಅದನ್ನು ಸಹಿಸದೆ ಉರ್ಲು ಹಾಕಿಕೊಳ್ಳಬೇಕಾಯಿತು. ಸ್ವರ್ಗದಲ್ಲಿ ನಾನು ಸುಖವಾಗಿದ್ದೇನಮ್ಮಾ ! ನನ್ನ ಪ್ರಿಯಳು ಸ್ವರ್ಗದಲ್ಲಿ ನನಗೆ ಕೂಡಿದಳು ಅಮ್ಮಾ ಸ್ವರ್ಗದಲ್ಲಾರೂ ಈಗೀಗ ಬಹಳ ಗಡಿಬಿಡಿ ಎದ್ದಿದೆ. ಎಲ್ಲಿ ನೋಡಿದಲ್ಲೆಲ್ಲ ಭಾರತೀಯರೇ ಗೋಚರವಾಗುವರು. ಮ್ಯಾಟ್ರಿಕ್ಕು ಬಿ. ಎ ಮೊದಲಾದ ಪರೀಕ್ಷೆಗಳಲ್ಲಿ ನಪಾಸಾಗಿ ಹೈರಾಣಾದವರು, ನೌಕರಿಗಾಗಿ ಕಂಡಕಂಡವರ ಕಾಲುಹಿಡಿದು ಬೆಂದು ಬೇಗುದಿ ಹೊಂದಿದವರು, ಉದ್ಯೋಗ ಸಿಗದ ಕೂಲಿಕಾರರು, ಕ್ರೂರಸಮಾಜದ ದಬ್ಬಾಳಿಕೆಯಿಂದ ಪೀಡಿತರಾದ ವಿಧವೆಯರು, ಅಸ್ಪೃಶ್ಯರು ನಿತ್ಯವೂ ತಂಡತಂಡವಾಗಿ ಬರುತ್ತಿದ್ದಾರೆ ಸ್ವರ್ಗದಲ್ಲಿಯ ದೇವತೆಗಳು ಕೂಡ ಭಾರತಮಾತೆಯ ಹೀನದೀನ ಸ್ಥಿತಿಯನ್ನು ನೋಡಿ ಕಣ್ಣೀರಿಡುತ್ತಿದ್ದಾರೆ ಇನ್ನು ಮೇಲೆ ಹಿಂದುಸ್ಥಾನದಲ್ಲಿ ಜನ್ಮವೆತ್ತುವ ಪ್ರತಿಯೊಬ್ಬ ಮಾನವನೂ ಸಮತಾವಾದೀತತ್ವಕ್ಕೆ ಅನುಕೂಲವಿದ್ದವನೇ ಹುಟ್ಟಬೇಕೆಂದು **ಭಾರತಮಾತೆಯು ಬ್ರಹ್ಮದೇವ**ನಿಗೊಂದು ಓಲೆ ಬರೆದಿದ್ದಾಳೆ. "**ಹಿಂದುಸ್ಥಾ**ನದಲ್ಲಿಯ ವಿಷಮತೆಯನ್ನು ಹೋಗಿಸುವದು ಸಾಧ್ಯವಿರದಿದ್ದರೆ ಈಗಿನ ಭೀಕರವಾದ ಪರಿಸ್ಥಿತಿಯಲ್ಲಿಡುವದಕ್ಕಿಂತಲೂ **ಬಿಹಾರ**ದಂಥ ಭಯಂಕರ **ಭೂಕಂಪ**ವನ್ನು ಮಾಡಿ ಇಡೀ ಭಾರತವನ್ನೇ ನಿರ್ನಾಮವನ್ನು ಮಾಡಿಬಿಡು." ಎಂಬ ಅವಳ ಕಠೋರ ವಾಕ್ಯವನ್ನು ಕಂಡು ಬ್ರಹ್ಮದೇವನ ಹೃದಯವು ಕರಗಿದೆ. **ಪಂಡಿತ ಜವಾಹರಲಾಲ**ರಂಥ ಸಾಮ್ಯವಾದಿಗಳ ಸಹಾಯದಿಂದ ನಿನಗೆ **ಬೇಗನೆ** ಸುಖದೊರೆಯುವದೆಂದು ಭಾರತಮಾತೆಗೆ ಬ್ರಹ್ಮದೇವರು ಸಂದೇಶವನ್ನು ಕಳಿಸಿದ್ದಾರೆ." ಅಮ್ಮಾ ಚಿಂತಿಸಬೇಡ ನಿನಗಿನ್ನು ಒಳ್ಳೇ ದಿನಗಳು ಬರುವವು.

ಮಗನ ಈ ಸ್ವರ್ಗಸಂದೇಶದಿಂದ ತಾಯಿಗೆ ಸಮಾಧಾನವಾಗಲಿಲ್ಲ. "ನೀನಿಲ್ಲ! ನಿನ್ನಾಕೆಯಿಲ್ಲ! ನಾನಾರಿಗೋಸ್ಕರ ಬಾಳಲಿ? ಪೃಥ್ವಿಯ ಮೇಲಂತೂ ನಿಮ್ಮಿಬ್ಬರ ಸರಸಸಲ್ಲಾಪಗಳನ್ನು ಕಂಡು ಆನಂದಪಡುವ ದಿನವೊಂದೂ ದೊರೆಯಲಿಲ್ಲ. ನಾನೂ ಸ್ವರ್ಗಕ್ಕೆ ಬರುವವಳೇ ಸುಶೀಲಾ.... ಗೋವಿಂದ....ನಿಲ್ಲಿರಿ....ಬಂದೆ ಎಂದುತ್ತರವನ್ನಿತ್ತು ಕಣ್ಣು ತೆರೆದಳು

ಅದೊಂದು ಭ್ರಾಂತಿ. ಕನಸು. ಸುಶೀಲೆಯಿಲ್ಲ. ಗೋವಿಂದನಿಲ್ಲ ಕಣ್ಣು ತೆರೆದೊಡನೆ ಮುರುಕು ಗುಡಿಸಿಲದ ಹರಕು ನೆಲುವಿನ ಮೇಲೆ ತೂಗಾಡುತ್ತಿದ್ದ ಕುಂಬಳಕಾಯಿಯೊಂದು ದೃಷ್ಟಿಗೆ ಬಿದ್ದಿತು. ಭ್ರಮೆಯ ವೇಗದಲ್ಲಿಯೇ ಓಡಿಹೋಗಿ ಆ ಕುಂಬಳಕಾಯನ್ನು ಅಪ್ಪಿಕೊಂಡು "ನನ್ನ ಗೋವಿಂದ ನನ್ನ ಸುಶೀಲೆ" ಯೆಂದು ಚೀರಾಡಿದಳು. ಈಗೋ ಇನ್ನೊಂದುಗಳಿಗೆಗೋ ಹರಿದು ಬೀಳುವದರಲ್ಲಿದ್ದ ಆ ಕಾಯಿಯು ಕತ್ತರಿಸಿ ಆವಳ ಮೈಮೇಲೆ ಬಿದ್ದಿತು. ಮತ್ತೊಮ್ಮೆ ನನ್ನ....ಗೋವಿಂದ....ಎನ್ನುವಷ್ಟರಲ್ಲಿಯೇ ಅವಳು ಇಹಲೋಕದಿಂದ **ಗೋ....ವಿಂ...ದ!**

# ಹೊಲೆಯರ ಹುಡಗಿ!

(ಚಿಕ್ಕ ಕತೆ)

ಮಧ್ಯಾನ್ಹ ಹನ್ನೆರಡು ಘಂಟೆಯ ಸಮಯ. **ನರ್ಮದಾನದಿಯ** ತೀರದಲ್ಲಿರುವ ದಟ್ಟಡವಿಯಲ್ಲಿ ಧಾರೆಯು ಸಿಂಹನೊಡನೆ ಆಟವಾಡುತ್ತ ಅದರ ಆಯಾಲುಗಳನ್ನು ಅತ್ತಿಂದಿತ್ತ ಹೊಯ್ದಾಡಿಸುವದರಲ್ಲಿ ಮಗ್ನಳಾಗಿ ಕುಳಿತುಕೊಂಡಿದ್ದಳು ಸಿಂಹವು ತನ್ನ ನಾಲಿಗೆಯ ತುದಿಯಿಂದ ಧಾರೆಯ ಮೃದುವಾದ ಕೈಗಳನ್ನು ಲುಚುಲುಚು ನೆಕ್ಕುತ್ತಿದ್ದಿತು ಧಾರೆಯು ಹದಿನೆಂಟು ವರ್ಷದ ಬಾಲೆ. ಅವಳ ಕೊರಳಲ್ಲಿ ಬೋರಿ ಸರವೂ, ಸೊಂಟದ ಮೇಲೆ ಹುಲಿಯುಗುರೂ ಜೋತಾಡುತ್ತಿದ್ದವು. ಇವಿಷ್ಟೇ ಅವಳ ಅಭರಣಗಳಿದ್ದಾಗ್ಯೂ ವಿನಯ ಹಾಗೂ ಲಾವಣ್ಯಗಳಿಂದ ಅವಳು ದೇವದೂತಳಂತೆ ಪ್ರಭಾವಶಾಲಿಯಾಗಿದ್ದಳು.

ಧಾರೆಯು ಪಶುಕ್ರೀಡೆಯಲ್ಲಿ ತಲ್ಲೀನಳಾಗಿರಲು ಆಕಸ್ಮಾತ್ತಾಗಿ ನೆರೆಯಲ್ಲಿ ಏನೋ ಸದ್ದು ಕೇಳಿಸಿದ ಹಾಗಾಯಿತು. ನೋಡುತ್ತಾಳೆ ಒಬ್ಬ ಕಾಂತಿಯುಕ್ತನಾದ ಯುವಕನು ಬಿಲ್ಲಿಗೆ ಬಾಣಗಳನ್ನು ಹೂಡಿಕೊಂಡು ಆವೇಶಯುಕ್ತನಾಗಿ ಬರುತ್ತಿದ್ದನು. ಅವನು ತನ್ನ ಸುಂದರವಾದ ಕೇಶರಾಶಿಯ ಮೇಲೆ ಅಂದವಾದ ರತ್ನಖಚಿತ ಮುಕುಟವನ್ನು ಧರಿಸಿದ್ದನು. ಆ ತರುಣನು ಸಿಂಹವನ್ನು ಬಡಿದೆಬ್ಬಿಸಿದನು ಸಿಂಹವು ಗುಡುಗು ಹಾಕಿತು! ಧಾರೆಯು ಹೌಹಾರಿ ಹೋದಳು

ತರುಣನ ಬಾಣದ ಏಟಿಂದ ಸಿಂಹವು ಉರುಳಿ ಬಿದ್ದಿತು. ಧಾರೆಯು ಆ ಮರಣೋನ್ಮುಖ ಸಿಂಹನ ಬಳಿಯಲ್ಲಿ ಕುಳಿತು ಕಣ್ಣೀರನ್ನು ಹರಿಸತೊಡಗಿದಳು. ಸಿಂಹವೂ ನೀರುತುಂಬಿದ ಕಣ್ಣಿನಿಂದ ಅವಳನ್ನು ನೋಡಿತು. ಧಾರೆಯು ಸಿಂಹದ ಎದೆಯಲ್ಲಿ ನಟ್ಟ ಬಾಣವನ್ನು ಹಿರಿದು ತೆಗೆದಳು. ಸಿಂಹವು ಕೊನೆಯ ಗರ್ಜನೆಯೊಂದಿಗೆ ಇಹಲೋಕ ಯಾತ್ರೆಯನ್ನು ಮುಗಿಸಿತು. ಧಾರೆಯು ಎಷ್ಟೋ ಸಲ ಸಿಂಹವನ್ನು ಅಗಳಾಡಿಸಿ ನೋಡಿದಳು. ಕಣ್ಣನ್ನು ತೆರೆದು ನೋಡಿದಳು. ಆದರೆ ಏನೂ ಸದ್ದೇ ಇಲ್ಲ! ಗ್ವಾಬರಿ

ಯಾಗಿ ಅಳತೊಡಗಿದಳು. ಇದನ್ನೆಲ್ಲ ಆ ತರುಣನು ಅಪರಾಧಿಯಂತೆ ನಿಂತನಿಂತಲ್ಲಿಯೇ ನೋಡುತ್ತಿದ್ದನು. ಧಾರೆಯ ಆಲಾಪವನ್ನು ಕೇಳಲಾರದೆ ಮುಂದೆ ಬಂದು ನುಡಿದನು.-“ ಕುಮಾರಿ ನನ್ನನ್ನು ಕ್ಷಮಿಸು. ಅರಿಯದೆ ನಾನಿದನ್ನು ಕೊಂದೆನು ”

ಧಾರೆಯು ಮೋರೆಯನ್ನು ಮೇಲೆತ್ತಿ ಆ ಯುವಕನನ್ನು ನೋಡಿದಳು ಅಳುವನ್ನು ನಿಲ್ಲಿಸಿದರೂ ಉತ್ತರವನ್ನು ಕೊಡದಾದಳು. ತರುಣನು ಸಿಂಹದ ಕತ್ತನ್ನು ಮೇಲಕ್ಕೆತ್ತುತ್ತ ನುಡಿದನು- “ ಸುಂದರೀ ನೀನಂತೂ ಮಾತಾಡುವದಿಲ್ಲ ಅಪ್ಪಣೆಯನ್ನಿತ್ತರೆ ನಾನಿದನ್ನು ತೆಗೆದುಕೊಂಡು ಹೋಗುವೆನು. ”

ಧಾರೆಯು ಆ ತರುಣನ ಕಾಲು ಹಿಡಿದುಕೊಂಡಳು. ಸ್ವಾಮಿ ದಯದೋರಿರಿ. ನನ್ನ ಪ್ರಾಣಕ್ಕಿಂತಲೂ ಹೆಚ್ಚಿನದಾದ ಇದನ್ನು ಒಯ್ಯಬೇಡಿರಿ. ನಾಲ್ಕು ವರ್ಷಗಳಿಂದ ಇದರೊಡನೆ ಚಿನ್ನಾಟವಾಡುತ್ತ ಬಂದಿರುತ್ತೇನೆ. ” ಎಂದು ದುಃಖಯುಕ್ತವಾಗಿ ನುಡಿದಳು.

ತರುಣನು ಸಿಂಹವನ್ನು ಬಿಟ್ಟು ಆ ಕುಮಾರಿಯ ರೂಪರಾಶಿಯಲ್ಲಿ ಅಡಗಿದ ಅಂತರಾತ್ಮದ ಬೆಡಗನ್ನು ನೋಡುವದರಲ್ಲಿ ತೊಡಗಿ ಹುಚ್ಚನಂತಾಗಿ ನಿಂತುಬಿಟ್ಟನು ಆದರೆ ಆಕಸ್ಮಾತ್ತಾಗಿ ಆದೇ ಸಮಯಕ್ಕೆ ದೂರದಿಂದ ಸಂಕಟದ ಸ್ವರವೊಂದು ಕೇಳಿಸಿತು.—

“ ಪೂಜ್ಯ ಮಹಾರಾಜರೇ! ರಕ್ಷಿಸಿರಿ! ”

ತರುಣನು ತನ್ನ ಬಿಲ್ಲು ಬಾಣಗಳನ್ನು ಸರಿಪಡಿಸಿಕೊಂಡು ಅಲ್ಲಿಂದ ಹೊರಡಬೇಕಾಯಿತು. ದುಃಖಿತಳಾದ ಧಾರೆಯನ್ನು ಬಿಟ್ಟು ಹೋಗಲಿಕ್ಕೆ ಮನಸ್ಸಾಗಲಿಲ್ಲ

“ ದೇವೀ, ನನ್ನ ಅಪರಾಧವನ್ನು ಕ್ಷಮಿಸು. ನಿನ್ನ ಮುದ್ದು ಸಿಂಹವನ್ನು ಯಾರೂ ಒಯ್ಯಲಾರರು ” ಎಂದು ನುಡಿದು ಆ ಸ್ಥಳವನ್ನು ಬಿಟ್ಟನು.

‡ ‡ ‡ ‡

ಮರುದಿವಸ ಆ ರಾಜಕುಮಾರನು ಗೌರೀಶಂಕರನ ಮಂದಿರಕ್ಕೆ ಹೊರಟಿದ್ದನು- ದಾರಿಯಲ್ಲಿ ಅದೇ ಅಡವಿಯು. ಧಾರೆಯು ಸಿಂಹದ ಬಳಿಯಲ್ಲಿ

ಕುಳಿತಿದ್ದಳು. ತರುಣನಿಗೆ ವಿಷಾದವೆನಿಸಿತು. ಕೈದಿಯಂತೆ ಅವಳೆದುರಿನಲ್ಲಿ ನಿಂತುಕೊಂಡನು. ಧಾರೆಯು ಮುಖವನ್ನು ಕೆಳಗೆ ಮಾಡಿದಳು. ತರುಣನು ಧೈರ್ಯವನ್ನು ತಂದುಕೊಂಡು ಕೇಳಿದನು.

" ಯುವತೀ, ನಿನ್ನ ಸ್ನೇಹಭಾವವು ಬಹು ದೊಡ್ಡದಾಗಿದೆ! ನೀನು ಎಷ್ಟು ದಿವಸ ಹೀಗೆಯೇ ಕುಳಿತುಕೊಳ್ಳುವೆ?"

"ಇದು ಇಲ್ಲಿ ಇರುವವರೆಗೆ" ಧಾರೆಯು ಉತ್ತರವನ್ನಿತ್ತಳು

"ಇದಕ್ಕೆ ಮತ್ತೆ ಜೀವನಂತೂ ಬರಲಾರದು. ಸುಮ್ಮನೆ ಚಿಂತಿಸ ಬೇಡ ನೀನು ಏನು ಹೇಳಿದರೂ ಸಿದ್ಧನಿದ್ದೇನೆ. ನಾನು ನಿನ್ನ ಅಪರಾಧಿ ಯಾಗಿದ್ದೇನೆ "

ಧಾರೆಯು ಏನೂ ಮಾತಾಡಲಿಲ್ಲ. ಅದಾವ ಕಾರಣವೋ ಅವಳ ಮೋರೆಯ ಮೇಲೆ ಮುಗುಳ್ನಗೆಯು ಮೂಡಿಕೊಂಡಿತು. ಮೋರೆಯು ಕೆಂಪಗಾಯಿತು. ತನ್ನ ಕೈಯಿಂದ ಮೋರೆಯನ್ನು ಮುಚ್ಚಿಕೊಂಡಳು. ತರುಣನ ಹೃದಯವು ಧಗಧಗಿಸುತ್ತಿದ್ದಿತು ಸ್ವಸ್ಥವಾಗಿ ಕುಳಿತುಕೊಂಡನು ತುಸು ಹೊತ್ತಾದ ಬಳಿಕ ಅವಳಲ್ಲಿ ಭಿಕ್ಷೆ ಬೇಡಿದನು. "ಸುಂದರೀ, ನನ್ನನ್ನೇ ನಿನ್ನ ಸಿಂಹನನ್ನಾಗಿ ಮಾಡಿಕೊ" ಧಾರೆಯು ಕಣ್ಣಾಲುಗಿಸದೆ ಅವನನ್ನು ನೋಡುತ್ತಲಿದ್ದಳು. 'ಯುವತೀ, ನಿನ್ನ ಹೆಸರೇನು' ವಿನಯ ಪೂರ್ವಕವಾಗಿ ನುಡಿದನು.

"ಧಾರೆ"

"ಅಹಾ, ಎಷ್ಟು ಸುಂದರವಾದ ಹೆಸರಿದು! ಸುಂದರಿಯೇ ಮಾತ ನಾಡು. ನನ್ನನ್ನೇ ಸಿಂಹವನನ್ನಾಗಿ ಮಾಡಿಕೊಳ್ಳುವಿಯಷ್ಟೇ?"

"ಮಹಾರಾಜ. ನಿಮ್ಮ ಪಾದಧೂಳಿಯು ಯೋಗ್ಯತೆಯು ಕೂಡ ನನ್ನಲ್ಲಿಲ್ಲ ಅಂದಬಳಿಕ ತಾವು ನನ್ನ ಆಟದ ಒಡವೆಯಾದ ಸಿಂಹ ಹೇಗೆ ಆಗಬಲ್ಲಿರಿ?

"ಯಾಕೆ"

"ರಾಜಕುಮಾರರಾದ ತಾವೆತ್ತ, ನಾನೆತ್ತ?....ದಯವಿಟ್ಟು ತಮ್ಮ ಪರಿಚಯವನ್ನು ಮಾಡಿಕೊಟ್ಟರೆ ಉಪಕಾರವಾಗುವದು."

" ದೇವೀ, ನಾನು ತ್ರಿಪುರ ಸಮ್ರಾಟರಾದ, ಚಕ್ರವರ್ತಿ ಮಹಾ ಶ್ರೋತ್ರಿಯ ಪುತ್ರನು. ಆದರೂ ನಿನ್ನ ವಿಶಾಲ ಹೃದಯ ರತ್ನಾಕರದ ಮುಂದೆ ಒಂದು ಹನಿನೀರಿನಷ್ಟು ಕೂಡ ಬೆಲೆಯಿಲ್ಲದವನು. ''

" ರಾಮ! ರಾಮ! ಮಹಾರಾಜ? ಕ್ಷಮಿಸಿರಿ! ತಾವು ಭ್ರಾಂತರಾಗಿ ಇದೇನು ಮಾಡಿಬಿಟ್ಟಿರಿ? ಅಯ್ಯೋ, ನಾನೊಬ್ಬ ಹೊಲೆಯರ ಹುಡಗಿಯು."

ತರುಣನು ಖೊಳ್ಳೆಂದು ನಕ್ಕನು. ಅವನ ಎರಡೂ ಕೈಗಳು ಅವಳನ್ನು ಬಿಗಿದಪ್ಪಿದವು. ಗದ್ಗದಿತ ಕಂಠದಿಂದ ನುಡಿದನು.

" ಧಾರಾ, ನಿನ್ನ ವ್ಯವಸಾಯವು ಹೊಲೆಯರದೇ ಆಗಿದ್ದರೂ ನಿನ್ನ ಅಂತರಾತ್ಮವು ನಿನ್ನ ವ್ಯಕ್ತಿತ್ವವು ಸ್ವರ್ಗದಲ್ಲಿಯ ದೇವತೆಗಳ ಸಮಾನವಾದದ್ದಿದೆ. ದೇವಿ, ತ್ರಿಪುರದ ಸಿಂಹಾಸನದ ಮೇಲೆ ನನ್ನ ಜೊತೆಗೆ ನಿನ್ನನ್ನು ಕುಳ್ಳಿರಿಸಿಕೊಳ್ಳುವದರಿಂದ ಎಷ್ಟು ಸಂತೋಷವಾಗುವದು!"

" ಸ್ವಾಮಿ, ತಾವು ಇದನ್ನೇನು ಹೇಳಿದಿರಿ. ಈ ಪಾಪಿಷ್ಠಳ ನೆರಳನ್ನು ನೋಡುವದು ಕೂಡ ಪಾಪವೆಂದು ತಿಳಿಯುತ್ತಾರೆ!"

" ಆದರೆ ನೀನು ಪಾಪಿಷ್ಠಳಲ್ಲ." ರಾಜಕುಮಾರನು ಅವಳನ್ನು ಅಪ್ಪಿಕೊಂಡು ಮತ್ತೆ ನುಡಿದನು— " ದೇವಿ, ನಾನಿನ್ನು ಹೋಗುತ್ತೇನೆ. ನಾಳೆ ಇದೇ ಸಮಯಕ್ಕೆ ಗೌರೀಶಂಕರ ದೇವಾಲಯದಲ್ಲಿ ಕಾಣಬೇಕು." ಧಾರೆಯು ನೋಡುತ್ತಲೇ ನಿಂತುಕೊಂಡಿದ್ದಳು. ಕುಮಾರನು ತುಸು ದೂರ ಹೋಗುವದರೊಳಗಾಗಿಯೇ ಆವನನ್ನು ಕೂಗಿದಳು. ಅವನು ತಿರುಗಿ ಬಂದನು.

ಧಾರೆಯು ಕೈಜೋಡಿಸಿ ಬಿನ್ನವಿಸಿಕೊಂಡಳು— " ಮಹಾರಾಜ, ಈ ಸತ್ತ ಸಿಂಹವನ್ನು ಮಾನವ ಧರ್ಮಾನುಸಾರವಾಗಿ ಅಂತಿಮ ವಿಧಿಯನ್ನು ಮಾಡಿಸಿ, ಅದರ ಚಿತಾಸ್ಥಳದ ಮೇಲೆ ಒಂದು ಸ್ಮಾರಕವನ್ನು ಕಟ್ಟಿಸಿರಿ."

ಪ್ರಿಯಕರಳಾದ ಧಾರೆಯದು ಇದೇ ಪ್ರಥಮಾಜ್ಞೆಯು. ರಾಜಕುಮಾರನ ಹೃದಯವು ಹಿಗ್ಗಿತು. ಸಂತೋಷಪೂರ್ವಕವಾಗಿ ವಚನವನ್ನಿತ್ತನು— " ದೇವೀ, ಸಂತೋಷ. ಇಂದೇ ಈ ಕಾರ್ಯವನ್ನು ಮಾಡಿ ಧನ್ಯನಾಗುವೆನು.''

† † † †

ಗೌರೀಶಂಕರನ ದೇವಸ್ಥಾನದ ಮಹಾದ್ವಾರದಲ್ಲಿ ಯಾವಾಗಲೂ ಕಾವಲಿರುತ್ತಿತ್ತು. ಅದಕ್ಕಾಗಿ ಧಾರೆಯು ಅನೇಕ ಬಂಡೆಗಲ್ಲುಗಳನ್ನು ಏರಿ ಮೇಲೆ ಹೋಗಬೇಕಾಯಿತು. ದೇವಸ್ಥಾನದ ಪೌಳಿಯ ಹಿಂಬದಿಯಲ್ಲಿ ಹೋದ ಬಳಿಕ ಯೋಚಿಸಿದಳು— "ಚಾಂಡಾಲಕನ್ನಿಕೆಯು-ಗೌರೀಶಂಕರನಂಥ ಪವಿತ್ರ ದೇವಾಲಯದಲ್ಲಿ--ಇದು ಹೇಗೆ ಸಾಧ್ಯವು?" ಅವಳು ಹಿಂತಿರುಗಬೇಕೆಂದಳು ಆದರೆ ಮತ್ತೆ ಅವಳ ಮನಸ್ಸು ಅವಳನ್ನು ಹುರಿದುಂಬಿಸಿತು. ಸಮೀಪದಲ್ಲಿಯೇ ಒಂದು ಎತ್ತರವಾದ ದಿನ್ನೆಯನ್ನು ಕಂಡಳು. ಆದನ್ನು ಏರಿ ಪೌಳಿಯ ಗೋಡೆಯಿಂದ ಕಳ್ಳರ ಹಾಗೆ ಮಂದಿರವನ್ನು ಪ್ರವೇಶಿಸಿದಳು. ಮಂದಿರದ ಚೌಕಿನಲ್ಲಿ ಅರವತ್ನಾಲ್ಕು ಯೋಗಿನಿಯರ ಸುಂದರವಾದ ಪ್ರತಿವೆಗಳಿದ್ದವು. ಧಾರೆಯು ಒಂದು ಪ್ರತಿಮೆಯ ಹಿಂದೆ ಅಡಗಿಕೊಂಡು ಸುಮ್ಮನೆ ನಿಂತುಕೊಂಡಳು ನೋಡುವವರಿಗೆ ಅವಳೂ ಪ್ರತಿಮೆಯ ಹಾಗೆಯೇ ಕಾಣಬಹುದಾಗಿತ್ತು. ತುಸು ಹೊತ್ತಾದ ಬಳಿಕ ಅವಳಿಗೆ ರಾಜಕುಮಾರನು ಮಂದಿರದಲ್ಲಿ ಪ್ರವೇಶಿಸಿದ್ದು ಕಂಡಿತು. ಕುಮಾರನು ಉತ್ಸುಕತೆಯಿಂದ ನಾಲ್ಕೂ ಕಡೆಗೆ ನಿರೀಕ್ಷಿಸುತ್ತಿರುವ ನೋಟವನ್ನು ಕಂಡು ಅವಳಿಗೆ ಹೇಗೆ ಹೇಗೋ ಆಯಿತು.

ಕುಮಾರನು ಆದೆಷ್ಟೋ ವೇಳೆ ಹಾಗೆ ನೋಡಿ ಕೊನೆಗೆ ನಿರಾಶೆಗೊಂಡನು. ಮಂದಿರದಲ್ಲಿಯ ಯೋಗಿನಿಯರ ಪ್ರತಿಮೆಗಳನ್ನೆಲ್ಲ ಒಂದೊಂದಾಗಿ ಪೂಜಿಸುತ್ತ, ಸಾಷ್ಟಾಂಗವೆರಗುತ್ತ ತಿರುಗತೊಡಗಿದನು. ಧಾರೆಯು ಇದನ್ನೆಲ್ಲ ಮರೆಯಲ್ಲಿ ನಿಂತು ನೋಡುತ್ತಲೇ ಇದ್ದಳು. ಕುಮಾರನು ಅತಿ ಸಮೀಪದಲ್ಲಿ ಬರಲು ಅದಾವ ಕಾರಣವೋ ಅವಳ ಆನಂದವು ಅಡಗಿಬಿಟ್ಟಿತು. ಭಯಭೀತಳಾಗಿ ಒಂದು ಮೂರ್ತಿಗೆ ಅಂಟಿಕೊಂಡು ಮೂಕಳಂತೆ ನಿಂತುಕೊಂಡಳು. ರಾಜಕುಮಾರನು ಇದನ್ನು ಕಂಡನು. ಸಂತೋಷವೂ ಆಯಿತು. ತನ್ನ ಕಮಂಡಲದಲ್ಲಿಯ ನೀರನ್ನು ಅವಳ ಪಾದದ ಮೇಲೆ ಹಾಕಿ ಹೂವನ್ನು ಮುಡಿಸಿದನು. ಧಾರೆಯ ಕಣ್ಣುಗಳು ಒಂದೇ ಸವನೆ ಕ್ಷಮೆಯನ್ನು ಯಾಚಿಸುತ್ತಿದ್ದವು. ಕುಮಾರನು ಅವಳ ಮಿದುವಾದ ಕರಗಳನ್ನು ಸ್ಪರ್ಶಿಸುತ್ತ ನುಡಿದನು. "ದೇವೀ, ಇಂದು ನನ್ನ ಪೂಜೆಯು ಸಫಲವಾಯಿತು. ತಾವು ಇಲ್ಲಿ ಬಂದ ಬಗೆ ಹೇಗೆ ತಿಳಿಸುವಿರಾ?"

" ತಮ್ಮನ್ನು ನೋಡಲು."

"ದೇವೀ, ಇದು ನನ್ನ ಸೌಭಾಗ್ಯವು! ಆದರೆ ತಾವು ಇಲ್ಲಿಗೆ ಬಂದುದು ಹೇಗೆ"

ಧಾರೆಯು ಪೌಳಿಯ ಹತ್ತಿರದ ದಿನ್ನೆಯ ಬದಿ ಬೆರಳು ತೋರಿಸಿದಳು. ಕುಮಾರನ ಕಣ್ಣುಗಳ ಮುಂದೆ ಅವಳು ಏರಿಬಂದ ಆ ಕಾಡು ದಿನ್ನೆ ಬೆಟ್ಟಗಳೆಲ್ಲ ಕುಣಿದಂತಾದವು– "ದೇವಿ, ರಾಜಬಂಧನವು ಬಹು ಕಠಿಣವಾದದ್ದು. ನಾನು ಹೋದ ಹೋದಲ್ಲೆಲ್ಲ ನನ್ನ ಬೆನ್ನ ಹಿಂದೆ ಸಾಮ್ರಾಟರ ಗುಪ್ತಚಾರರು ಇದ್ದೇ ಇರುತ್ತಾರೆ. ನನಗೆ ಸ್ವತಂತ್ರತೆಯೆಂದರೆ ಈ ಮಂದಿರದಲ್ಲಿ ಮಾತ್ರ. ಆದರೆ ನಿನಗೆ ಇಲ್ಲಿ ಬಹಳ ಕಷ್ಟವಾಗಬಹುದು- ಧಾರಾ ನಿಜವಾದ ಕ್ಷತ್ರಿಯ ವೀರನು ನಾನಾಗಿದ್ದರೆ ನನ್ನ ಕೈಯಲ್ಲಿ ಅಧಿಕಾರ ಸೂತ್ರಗಳು ಬಂದ ಮರುಕ್ಷಣದಲ್ಲಿಯೇ ನಿನ್ನ ಕಂಟಕಗಳನ್ನೆಲ್ಲ ದೂರ ಮಾಡಿ ನನ್ನ ಸಮಾನಾಧಿಕಾರವನ್ನು ಪ್ರಾಪ್ತಮಾಡಿ ಕೊಡುವೆನೆಂದು ತಿಳಿ."

"ಮಹಾರಾಜ, ತಮ್ಮ ಕೃಪೆಯೇ ನನಗೆ ಜೀವನಾಧಾರವು!....... ಒಳ್ಳೇದು ನಾನಿನ್ನು ತೆರಳುವೆನು."

"ಅಯ್ಯೋ!"

"ಸಾಕು" ಧಾರೆಯು ಕುಮಾರನ ಚರಣಕ್ಕೆರಗಿ ಲಗಬಗೆಯಿಂದ ಮೊದಲು ಹತ್ತಿಬಂದ ದಿನ್ನೆಯನ್ನು ಏರಿದಳು. ಕುಮಾರನು ಸುಮ್ಮನೆ ನೋಡುತ್ತಿದ್ದನು ದಿನ್ನೆಯ ಮೇಲಿಂದ ಮತ್ತೆ ಅವಳು ಕುಮಾರನನ್ನು ನೋಡಿದಳು ಮುಗುಳ್ನಗೆಯಿಂದ ನೋಟವನ್ನು ಬೀರಿ ಕೆಳಗೆ ಜಿಗಿದಳು

† † † †

ಒಂದು ವರ್ಷದಿಂದಲೂ ಧಾರೆಯ ಜೀವನದಲ್ಲಿ ಎರಡೇ ಎರಡು ವಸ್ತುಗಳು ಕಾಣುತ್ತಿದ್ದವು ಒಂದು ಸಿಂಹನ ಸಮಾಧಿಯ ಮೇಲೆ ವನ-ಕುಸುಮಗಳನ್ನೇರಿಸುವದು ಮತ್ತೊಂದು ಏನಾದರೂ ಸಾಹಸಮಾಡಿ ಕದ್ದು ಪಲ್ಲಗೆ ಮಂದಿರವನ್ನು ಪ್ರವೇಶಿಸಿ ತನ್ನ ಆರಾಧ್ಯ ರಾಜಕುಮಾರನ ದರುಶನವನ್ನು ತೆಗೆದುಕೊಳ್ಳುವದು. ಆ ದಿವಸ ನರ್ಮದೇಶ್ವರ ರಾಜಕುಮಾರನ ಪಟ್ಟದ ದಿನವಾಗಿದ್ದಿತು. ತ್ರಿಪುರ ನಗರದಲ್ಲೆಲ್ಲ ಆನಂದೋತ್ಸವದ ವಿಜೃಂಭಣೆ! ಎಲ್ಲಿ ನೋಡಿದಲ್ಲಿ ತಳಿರು-ತೋರಣಗಳು ಕಂಗೊಳಿ

ಸುತ್ತಿದ್ದವು. ಗೌರೀಶಂಕರನ ಮಂದಿರವು ಕೂಡ ನಾನಾ ಪ್ರಕಾರದ ಅಲಂಕಾರಗಳಿಂದ ಶೃಂಗರಿಸಲ್ಪಟ್ಟಿತು. ಮುಖ್ಯ ಮಂಟಪದ ಮಧ್ಯದಲ್ಲಿ ಪ್ರಸಿದ್ಧ ನರ್ತಕಿಯ ನರ್ತನವು ನಡೆದದ್ದರಿಂದ ಜನರು ಕಿಕ್ಕಿರಿದಿದ್ದರು. ಧಾರೆಯು ಆ ದಿವಸ ಚಿರ್ಚಿನ ಬಣ್ಣಬಣ್ಣದ ಚರ್ಮವನ್ನು ಧರಿಸಿಕೊಂಡು ಕೊರಳಲ್ಲಿ ಹುಲಿಯುಗುರಿನ ಸರವನ್ನೂ ತಲೆಯಲ್ಲಿ ಸುಗಂಧಯುಕ್ತವಾದ ವನ ಕುಸುಮಗಳನ್ನೂ ಧರಿಸಿಕೊಂಡಿದ್ದಳು. ತನ್ನ ಜೀವಿತದ ಆಶೆಯು ಇಂದ ಸಫಲವಾಗುವದೆಂಬ ಉಬ್ಬಿನಲ್ಲಿ ವೇಗದಿಂದ ಮಂದಿರದ ಕಡೆಗೆ ನಡೆದಿದ್ದಳು. ದಾರಿಯಲ್ಲಿ ಅವಳ ಗೆಳತಿಯಾದ **ಕುಂಭಿಕೆಯು** ಭೆಟ್ಟಿಯಾದಳು ಇವಳ ಅಲಂಕೃತ ವೇಶವನ್ನು ಕಂಡು ಕೇಳಿದಳು. "ಸಖೀ, ಇಂದು ಒಳ್ಳೇ ಶೃಂಗರಿಸಿಕೊಂಡು ಎಲ್ಲಿಗೆ ಹೊರಟಿರುವೆ."

"ಸಮ್ರಾಜ್ಞಿಯಾಗಲು" ಧಾರೆಯು ಗರ್ವಯುಕ್ತವಾಗಿ ನುಡಿದಳು.

"ಧನ್ಯವಾಗಲಿ!" ಕುಂಭಿಕೆಯು ಹಾಸ್ಯವಾಡಿದಳು.

"ನೀನು ಸುಳ್ಳೆಂದು ಭಾವಿಸಿದೆಯೇನು? ನನ್ನ ಜೊತೆಗೆ ನಡೆದರೆ ತಿಳಿದೀತು" ದೃಢಪೂರ್ವಕವಾಗಿ ಧಾರೆಯು ತಿದ್ದಿ ನುಡಿದಳು.

ಕುಂಭಿಕೆಯು ಮನದಲ್ಲಿಯೇ ಧಾರೆಯ ಮೂರ್ಖತನವನ್ನು ಹಳಿಯುತ್ತ ಅವಳನ್ನು ಹಿಂಬಾಲಿಸಿದಳು. ಬೆಟ್ಟದ ಆ ಕಠಿಣ ಮಾರ್ಗವನು ದಾಟಿ ಮಂದಿರದ ಪೌಳಿಯು ಬಳಿಗೆ ಬಂದರು. ಧಾರೆಯು ತನ್ನನ್ನು ಹಿಂಬಾಲಿಸಲು ಕುಂಭಿಕೆಗೆ ಹೇಳಿ ದಿನ್ನಿಯ ಆಶ್ರಯದಿಂದ ಪೌಳಿಯ ಗೋಡೆಯನ್ನು ಏರಿದಳು. ಇನ್ನು ಕೆಳಗೆ ಜಿಗಿಯುತಕ್ಕವಳು. ಆದರೆ ಅಷ್ಟರಲ್ಲಿಯೇ **"ಹೊಲೆಯರ ಹುಡಿಗಿ" "ಹೊಲೆಯರ ಹುಡಿಗಿ"** ಎಂಬ ಗರ್ಜನೆಯು ಎಲ್ಲ ಕಡೆಗೂ ಪಸರಿಸಿತು. ಧಾರೆಯ ಒಂದು ಕಾಲು ಗೋಡೆಯ ಮೇಲ್ಭಾಗದಲ್ಲಿತ್ತು ಮತ್ತೊಂದು ಕಾಲು ಕೆಳಗೆ ಜೋತಾಡುತ್ತಿತ್ತು. ಕ್ರೋಧೋನ್ಮತ್ತವಾದ ಜನಸಮೂಹದೊಂದಿಗೆ ಆ ದೇವಸ್ಥಾನದ ಪೂಜಾರಿಯು ಕೈಯಲ್ಲಿ ಕಬ್ಬಿಣ ಸಲಾಖಿಯೊಂದನ್ನು ತೆಗೆದುಕೊಂಡು ಓಡುತ್ತ ಅಲ್ಲಿಗೆ ಬಂದನು. ಧಾರೆಯು ಮಾತ್ರ ಓಡಲಿಲ್ಲ. ಧಾರೆಯ ಸೊಂಟದ ಮೇಲೆ ಪೂಜಾರಿಯ ಸಲಾಖಿಯ ಏಟು ಬಲವಾಗಿ ಬಿದ್ದಿತು. ದೊಪ್ಪನೆ ಕಡಕೊಂಡು ಕುಂಭಿಕೆಯು ನಿಂತುಕೊಂಡಿದ್ದ ಸ್ಥಳದಲ್ಲಿ ಬಿದ್ದಳು. ಬಂಡೆ

ಗಲ್ಲಿಗೆ ತಲೆಯು ಅಪ್ಪಳಿಸಿ ರಕ್ತವು ಚಿಮ್ಮತೊಡಗಿತು. ತುಸು ಹೊತ್ತಿನಲ್ಲಿಯೇ "ಸಮ್ರಾಟ ನರ್ಮದೇಶ್ವರಕೀ ಜಯ" ಎಂಬ ಜಯಘೋಷದಿಂದ ನಭೋಮಂಡಲವೆಲ್ಲ ತುಂಬಿಕೊಂಡಿತು ಆ ನಾದವು ಸ್ಮೃತಿತಪ್ಪಿದ ಧಾರೆಗೆ ಕೂಡ ಚೇತನವನ್ನುಂಟು ಮಾಡಿತು. ಅವಳು ಮೆಲ್ಲಗೆ ಕುಂಭಿಕೆಗೆ ಹೇಳಿದಳು. "ಸಮ್ರಾಟನನ್ನು ಕರೆದುಕೊಂಡು ಬಾ."

ಕುಂಭಿಕೆಯು ಈ ಮಾತಿನಿಂದ ನಗಲೂ ಇಲ್ಲ. ಅಳಲೂ ಇಲ್ಲ. ಜನಸಮೂಹದಲ್ಲಿ ಹೊಕ್ಕು ಧಾರೆಯ ಸಂದೇಶವು ರಾಜಕುಮಾರನ ಕಿವಿಗೆ ತಲುಪುವಂತೆ ಮಾಡಿದಳು. ಕೂಡಲೆ ಕುಮಾರನು ತನ್ನ ರಾಜಬಂಧನಗಳನ್ನೆಲ್ಲ ಕಿತ್ತೊಗೆದು ಧಾವಿಸಿ ಧಾರೆಯ ಸನ್ನಿಧಿಗೆ ಬಂದನು ಅವನು ತೀರ ಹುಚ್ಚನ ಹಾಗೆ ಆಗಿ ಬಿಟ್ಟಿದ್ದನು. ಅವನ ಹಿಂದಿನಿಂದ ಜನ ಸಮೂಹವು ಬಂದಿತು. ರಾಜಕುಮಾರನು ಬಂದವನೇ ಅವಳನ್ನು ತೊಡೆಯ ಮೇಲೆ ತೆಗೆದುಕೊಂಡು— "ಧಾರಾ! ಧಾರಾ! ಅಯ್ಯೋ ನನ್ನ ರಾಣಿಯೇ! ಇಂದೇ ನೀನು ನನ್ನ ಸಿಂಹಾಸನದ ಮೇಲೆ ಕೂಡ್ರತಕ್ಕವಳಿದ್ದೆ" ಎಂದು ಒದರಾಡತೊಡಗಿದನು

ಧಾರೆಯು ಕಣ್ಣು ತೆರೆದು ಒಂದೇ ಸವನೆ ರಾಜಕುಮಾರನೆಡೆಗೆ ನೋಡತೊಡಗಿದಳು ರಾಜಕುಮಾರನು ಸಹಿಸಲಾಗದ ದುಃಖದಿಂದ ಭ್ರಾಂತನಂತೆ ನಿಂತುಕೊಂಡಿದ್ದನು.

"ನೋಡಿದೆಯಾ ನಾನೀಗ ಸಾಮ್ರಾಜ್ಞಿಯಾದುದನ್ನು" ಧಾರೆಯು ಕುಂಭಿಕೆಯನ್ನು ಕುರಿತು ಮಾತನಾಡಿದಳು. ರಾಜಕುಮಾರನಿಗೆ ಹಿಡಿಸಲಾರದಷ್ಟು ಹಿಗ್ಗು! ಕಾಮೋನ್ಮತ್ತನಾಗಿ ಅದೆಷ್ಟೋ ಸಲ ಅವಳನ್ನು ಚುಂಬಿಸಿದನು. ಕಣ್ಣು ಪಿಳುಕಿಸದೆ ಅವಳನ್ನು ಮನದಣಿ ನೋಡಿ ಇಂತೆಂದನು

"ಧಾರಾ! ನಡೆ. ನಿನ್ನನ್ನು ಸಿಂಹಾಸನದ ಮೇಲೆ ಕುಳ್ಳಿರಿಸುವೆನು" ಸಮ್ರಾಟನು ಬಾಲಕರ ಹಾಗೆ ಅಳತೊಡಗಿದನು. ಧಾರೆಯ ಮುಖದ ಮೇಲೆ ಒಂದು ಬಗೆಯ ಕಿರಿನಗೆಯು ನಲಿದಾಡುತ್ತಿದ್ದಿತು. ಅವಳು ನೆಟ್ಟ ದೃಷ್ಟಿಯಿಂದ ಸಮ್ರಾಟನನ್ನೇ ನೋಡುತ್ತಿದ್ದಳು ಆದರೆ ತುಸು ಹೊತ್ತಿನಲ್ಲಿಯೇ ಅವಳ ಕಣ್ಣುಗಳು ಮುಚ್ಚಹತ್ತಿದವು ಮತ್ತೊಂದ ಸಲ ತುಸು

ಎಚ್ಚರಿಕೆ ಬಂದಿತು ಮೆಲ್ಲಗೆ ನುಡಿದಳು–" ನನ್ನ ಸಮಾಧಿಯನ್ನು........ ಸಿಂಹನ ಸಮಾಧಿಯ ಹತ್ತರವೇ........" ದೇವಕನ್ನೆಯು ಈ ಜಗತ್ತಿನ ಸುಖವನ್ನೆಲ್ಲ ಭೋಗಿಸಿ ಸ್ವರ್ಗಕ್ಕೆ ಹಾರಿದಳು

ಸಮ್ರಾಟನು ಆ ಮೃತ ದೇಹವನ್ನು ಎತ್ತಿಕೊಂಡು ಆವೇಶದಿಂದ ಓಡತೊಡಗಿದನು. ಅವನನ್ನು ತಡೆಯಲಿಕ್ಕೆ ಯಾರೂ ಯತ್ನಿಸಲಿಲ್ಲ. ಅವನು ನೆಟ್ಟಗೆ ಆ ದೇಹವನ್ನು ತೆಗೆದುಕೊಂಡು ಮಂದಿರವನ್ನು ಹೊಕ್ಕು ಗೌರೀಶಂಕರನ ಮುಂದೆ ತಂದನು. ಧಾರೆಯ ತಲೆಯನ್ನು ತನ್ನ ತೊಡೆಯ ಮೇಲಿರಿಸಿಕೊಂಡು ನುಡಿದನು " ಧಾರಾ ! ನೀನು ಇಂದಿನಿಂದ ನನ್ನ ಸಹಚರಿಯು, ನನ್ನ ಸಹಧರ್ಮಿಣಿಯೆಂದು ಪ್ರತಿಜ್ಞೆ ಮಾಡುತ್ತೇನೆ .. ನೀನು ನಗುತ್ತಲಿರುವಿ ! .... ಧಾರಾ ! .... ಧಾರಾ ! .... ಇದು ಯೋಗ್ಯವೇನು ?.... ಹಾಃ....ಹಾಃ....ಅಯ್ಯೋ, ಧಾರಾ.... ನೀನು....ಹಃ ಹಃ ಹಾ ! ....ಹಃ ಹಃ ಹಾ ! ....ವಾಹವ್ವಾ ! .... ವಾಹವ್ವಾ ! .... ಹಾಡು .... ಕುಣಿ ....ಕುಣಿ .... ಎಷ್ಟು ಮಧುರವಾದ ಸಂಗೀತವಿದು .... ಹಾಃ ಹಾಃ ಹಾ ! ಹಃ ಹಃ ಹಾ !

ಮರುದಿವಸ ರಾಜ್ಯಾಧಿಕಾರವು ಈ ಹುಚ್ಚನಾದ ರಾಜಕುಮಾರನ ಪುತ್ರನ ಕೈಯಲ್ಲಿ ಕೊಡಲಾಯಿತು.

ನಾಲ್ಕುನೂರು ವರ್ಷಗಳ ನಂತರ ಮಂದಿರದ ಅರವತ್ನಾಲ್ಕು ಯೋಗಿನಿಯರ ಪ್ರತಿಮೆಗಳು ಔರಂಗಜೇಬನಿಂದ ಒಡೆಯಲ್ಪಟ್ಟವು. ಮಂದಿರವು ಇಂದಿಗೂ ಅಲ್ಲಿ ಇದೆ. ನಾಯಿ-ನರಿಗಳು ಮಾತ್ರ ಅಲ್ಲಿ ವಾಸಿಸುತ್ತವೆ. ಮಂದಿರದ ಕೆಳಗಡೆಯಲ್ಲಿ ಎರಡು ಕಟ್ಟೆಗಳು ಕಾಣುತ್ತವೆ. ಒಂದು ಸಿಂಹನ ಸಮಾಧಿ ! ಮತ್ತೊಂದು ಧಾರೆಯದು ! ಇಂದಿಗೂ ಅವು ಭದ್ರವಾಗಿವೆ. ನಾಲ್ಕೂ ಕಡೆಗೆ ದಟ್ಟವಾದ ಅಡವಿ. ಜಗತ್ತಿನೊಳಗಿನ ಸ್ತಬ್ಧತೆಯನ್ನೆಲ್ಲ ಇಲ್ಲಿಯೇ ಕೂಡಿಸಿ ಇಡಲಾಗಿದೆಯೋ ಎನ್ನುವ ಹಾಗಿದೆ. ಆದೇಕೆ ಕೆಲವು ಸಲ ರಾತ್ರಿಯಲ್ಲಿಯೂ ಕೆಲವು ಸಲ ರಣರಣ ಬಿಸಿಲಿನಲ್ಲಿಯೂ " ಧಾರಾ ! ನನ್ನ ರಾಣಿಯೇ ಹಃ ಹಃ ಹಾ ... ಹಃ ಹಃ ಹಾಃ ಹಃ ಹಃ ಹಾ ... " ಎಂಬ ಸ್ವರವು ಕೇಳಬರುವದಂತೆ.

---

ಇದು ' ಚಾಂಡಾಲಕನ್ಯೆ ' ಎಂಬ ಹಿಂದೀ ಕತೆಯ ರೂಪಾಂತರವು. ಯುಗಾಂತರದಿಂದ ಆಯ್ದುಕೊಂಡಿದೆ.

# ಸಮಾಜೋನ್ನತಿ ಪುಷ್ಪಮಾಲೆಯ

## ಪುಸ್ತಕಗಳು

**ಪ್ರತಿ ಪುಸ್ತಕಕ್ಕೂ ಒಂದಾಣೆ ಬೆಲೆ**

| | |
|---|---|
| ನಾನೇ ಹೊಲೆಯ | ಬಂಗಾರದ ಹೊಗೆ |
| ನಾರೀರತ್ನ | ಗಾಂಧೀ ಹುಚ್ಚು |
| ತ್ಯಾಗದ ಗುಡಿ | ಕಲಿತ ಹೆಂಡತಿ |
| ಸನಾತನೀ ಸೂಳೆ | ದೇವರಿಗೆ ಲಂಚ |
| ವಿಧವಾ ಕುಮಾರಿ | ರಾವಬಹದ್ದೂರ |
| ಬಡವರ ರೊಟ್ಟಿ | ನೌಕರಿ ! |

೧ ಪುಸ್ತಕಕ್ಕೆ ೧॥ ಆಣೆ ತಿಕೀಟು ಕಳಿಸಬೇಕು. ೮ ಪುಸ್ತಕಗಳಿಗಿಂತ ಹೆಚ್ಚು ಪುಸ್ತಕ ಬೇಡುವವರು ಪುಸ್ತಕದ ಬೆಲೆಯಷ್ಟು ರಕಮು ಕಳಿಸಿದರೆ ಸಾಕು. ಅಂಚೇ ವೆಚ್ಚ ನಾವೇ ವಹಿಸುವೆವು. ವ್ಯಾಪಾರಸ್ಥರಿಗೆ ಭಂಪುರ ಕಮಿಶನ್.

ಇಂದೇ ಬರೆದು ವಿಚಾರಿಸಿರಿ.

ಮೆನೆಜರ: **"ಸಮಾಜೋನ್ನತಿ ಪುಷ್ಪಮಾಲಾ ಧಾರವಾಡ"**

ಮುದ್ರಕರು:- ನಾರಾಯಣಾಚಾರ್ಯ ಅಣ್ಣಾಚಾರ್ಯ ಹೊಸಕೇರಿ
ಮುದ್ರಾಲಯ:- ವಿಜಯ ಮುದ್ರಾಲಯ ಧಾರವಾಡ.
ಪ್ರಕಾಶಕರು:- ಭಾಲಚಂದ್ರ ವೆಂಕಟೇಶ ಘಾಣೇಕರ
ಪ್ರಕಾಶನ ಸ್ಥಳ:- ಸಮಾಜ ಕಾರ್ಯಾಲಯ ಧಾರವಾಡ.